# ಕಮಲ ಪಥ

RNI No.:KARKAN/2023/84034 | ಸಂಪುಟ : 02 | ಸಂಚಿಕೆ : 02 | ಮೇ 2024 | ಬೆಂಗಳೂರು | ₹ 10/-



ಮತ್ತೊಮ್ಮೆ
ಮೋದಿ ಸರ್ಕಾರ

## ವಿಕಸಿತ ಭಾರತ
## ಮೋದಿ ಗ್ಯಾರಂಟಿ

# ರಾಷ್ಟ್ರೀಯ ನಾಯಕರ ಲೋಕಸಭಾ ಚುನಾವಣಾ ಪ್ರಚಾರ - ಕರ್ನಾಟಕ



ಕೇಂದ್ರ ಗೃಹ ಮಂತ್ರಿ ಶ್ರೀ ಅಮಿತ್ ಶಾ - ಬೆಂಗಳೂರು ರೋಡ್ ಶೋ



ಕೇಂದ್ರ ಗೃಹ ಮಂತ್ರಿ ಶ್ರೀ ಅಮಿತ್ ಶಾ - ಹಾವೇರಿ ರೋಡ್ ಶೋ



ಕೇಂದ್ರ ಗೃಹ ಮಂತ್ರಿ ಶ್ರೀ ಅಮಿತ್ ಶಾ - ಹುಬ್ಬಳ್ಳಿ ಧಾರವಾಡ ಸಾರ್ವಜನಿಕ ಸಭೆ



ಕೇಂದ್ರ ಗೃಹ ಮಂತ್ರಿ ಶ್ರೀ ಅಮಿತ್ ಶಾ - ಚಿಕ್ಕೋಡಿ ಸಾರ್ವಜನಿಕ ಸಭೆ



ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಶ್ರೀ ಜೆ.ಪಿ. ನಡ್ಡಾ - ಬ್ಯಾಡಗಿ ರೋಡ್ ಶೋ




ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಶ್ರೀ ಜೆ.ಪಿ. ನಡ್ಡಾ - ಧಾರವಾಡ ಸಾರ್ವಜನಿಕ ಸಭೆ




ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಶ್ರೀ ಜೆ.ಪಿ. ನಡ್ಡಾ - ಹುಮ್ನಾಬಾದ್ ವಿಜಯ ಸಂಕಲ್ಪ ಸಮಾವೇಶ



ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಶ್ರೀ ಜೆ.ಪಿ. ನಡ್ಡಾ - ಕಲಬುರಗಿ ರೋಡ್ ಶೋ

# ಮುಗಿದ ಚುನಾವಣೆ, ಮುಂದಿನ ನಡೆ

ವಿಶ್ವದ ಅತಿ ದೊಡ್ಡ ರಾಷ್ಟ್ರವಾದ ಭಾರತದ ಲೋಕಸಭಾ ಚುನಾವಣೆ ಅಂತಿಮ ಹಂತವನ್ನು ತಲುಪಿದೆ. ಅರ್ಹತೆ ಇರುವ ಸುಮಾರು 97 ಕೋಟಿ ಮತದಾರರ ಪೈಕಿ ಅಂದಾಜು 60 ಕೋಟಿಗೂ ಹೆಚ್ಚು ಜನರು ತಮ್ಮ ಮತದಾನದ ಹಕ್ಕನ್ನು ಚಲಾಯಿಸುತ್ತಿದ್ದಾರೆ. ಇಡೀ ವಿಶ್ವವೇ ಮೆಚ್ಚುವಂತಹ ಚುನಾವಣಾ ಪ್ರಕ್ರಿಯೆಯಲ್ಲಿ ಗೆಲುವು ಯಾವುದೇ ಪಕ್ಷದ್ದಾದರೂ ಪ್ರಜಾಪ್ರಭುತ್ವ ವ್ಯವಸ್ಥೆ ಗೆಲುವಿನ ಗುರಿಯನ್ನು ಈಗಾಗಲೇ ತಲುಪಿಬಿಟ್ಟಿದೆ.

ಭಾರತೀಯನಿಗೆ ಚುನಾವಣೆ ಎಂದರೆ ಅದು ತನ್ನ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾತ್ರವಲ್ಲ, ಅದು ತನಗೆ ಪ್ರಜಾಪ್ರಭುತ್ವ ವ್ಯವಸ್ಥೆ ನೀಡಿರುವ ಹಕ್ಕು. ಹಾಗೆಯೇ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿ ಮತ ಚಲಾಯಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಆದ್ದರಿಂದಲೇ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಪ್ರತೀ ಭಾರತೀಯನಿಗೂ ಅಭಿನಂದನೆಗಳನ್ನು ಹೇಳಲೇ ಬೇಕು. ಈ ಪ್ರಕ್ರಿಯೆಯಲ್ಲಿನ ಕೆಲವು ದೃಷ್ಟಾಂತಗಳೂ ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಭಾರತೀಯನು ನೀಡುತ್ತಿರುವ ಗೌರವದ ಸಂಕೇತ ಎಂದು ಸ್ಪಷ್ಟವಾಗಿ ಹೇಳಬಹುದಾಗಿದೆ.

ರಾಜ್ಯದಲ್ಲಿ ಎರಡು ಹಂತಗಳಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಮತ ಚಲಾಯಿಸುವ ಮೂಲಕ ತಮ್ಮ ಕರ್ತವ್ಯ ನಿರ್ವಹಿಸಿದ ರಾಜ್ಯದ ಜನತೆಗೆ ರಾಜ್ಯ ಬಿಜೆಪಿ ಹಾಗೂ ಕಮಲ ಪಥದ ಪರವಾಗಿ ಧನ್ಯವಾದಗಳು. ಅತ್ಯಂತ ಯೋಜಿತವಾಗಿ ಚುನಾವಣೆಯನ್ನು ನಿರ್ವಹಿಸಿದ ಬಿಜೆಪಿಯ ರಾಜ್ಯ ನಾಯಕತ್ವ ಹಾಗೂ ಕಾರ್ಯಕರ್ತರಿಗೆ ರಾಜ್ಯದಲ್ಲಿ ಅತ್ಯಧಿಕ ಸ್ಥಾನಗಳನ್ನು ಗೆಲ್ಲುವ ಬಗ್ಗೆ ಆತ್ಮವಿಶ್ವಾಸವಿದೆ. ಆದರೆ ತನ್ನ ಇಡೀ ಚುನಾವಣಾ ಪ್ರಚಾರದಲ್ಲಿ ಮತ್ತೊಮ್ಮೆ ಸುಳ್ಳು ಆಶ್ವಾಸನೆ ಹಾಗೂ ಆರೋಪಗಳನ್ನೇ ಬಂಡವಾಳ ಮಾಡಿಕೊಂಡ ಕಾಂಗ್ರೆಸ್‌ನ ನಡೆ ಅದರ ಬೌದ್ಧಿಕ ಹಾಗೂ ನೈತಿಕ ದಿವಾಳಿತನಕ್ಕೆ ಸ್ಪಷ್ಟ ಸಾಕ್ಷಿ ಎನ್ನಲೇ ಬೇಕು. ಮತ್ತದೇ ರೀತಿಯಲ್ಲಿ ಪ್ರಧಾನಿ ಮೋದಿಯವರ ಮೇಲೆ ಹುರುಳಿಲ್ಲದ ಆರೋಪಗಳನ್ನು ಮಾಡಿದ ಕಾಂಗ್ರೆಸ್ ಅದನ್ನು ರುಜುವಾತು ಪಡಿಸುವ ಬಗ್ಗೆ ಮಾತ್ರ ತಲೆ ಕೆಡಿಸಿಕೊಳ್ಳಲೇ ಇಲ್ಲ. ಇನ್ನು ರಾಜ್ಯದಲ್ಲಿ ತನ್ನ ಆಡಳಿತಾತ್ಮಕ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸುವ ಪ್ರಚಾರ ನಡೆಸಿದ ಕಾಂಗ್ರೆಸ್‌ನ ತಂತ್ರ ಅದಕ್ಕೇ ಮುಳುವಾಗಲಿದೆ. ಕೇಂದ್ರದಲ್ಲಿ ತಾನು ಅಧಿಕಾರದಲ್ಲಿದ್ದಾಗ ನಡೆಸಿದ ಹಗರಣಗಳನ್ನು, ಮರೆತು ರಾಜ್ಯದಲ್ಲಿ ತಾನೇ ನೀಡಿದ ಗ್ಯಾರಂಟಿಗಳನ್ನು ಸಮರ್ಪಕವಾಗಿ ಜಾರಿಗೆ ತರದೆ, ಓಲೈಕೆ ರಾಜಕಾರಣವನ್ನೇ ಬಂಡವಾಳ ಮಾಡಿಕೊಂಡು ಪ್ರಚಾರ ಮಾಡಿದ ಕಾಂಗ್ರೆಸ್‌ನ ತಂತ್ರವನ್ನು ರಾಜ್ಯದ ಮತದಾರ ಸ್ಪಷ್ಟವಾಗಿ ತಿರಸ್ಕರಿಸಿದ್ದಾನೆ ಎಂಬ ಮುನ್ಸೂಚನೆಯೂ ರಾಜ್ಯ ರಾಜಕಾರಣದಲ್ಲಿ ವ್ಯಾಪಕವಾಗಿದೆ.

**ಸಂಪಾದಕೀಯ**

ಇನ್ನು ಈ ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗುವ ಮುನ್ನವೇ ವಿಧಾನಪರಿಷತ್‌ನ ಆರು ಸ್ಥಾನಗಳಿಗೆ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಿದೆ. ಸುಶಿಕ್ಷಿತ ಮತದಾರರ ಈ ಕ್ಷೇತ್ರಗಳಲ್ಲಿನ ಬಿಜೆಪಿ ಪ್ರಾಬಲ್ಯವನ್ನು ಉಳಿಸಿಕೊಳ್ಳಬೇಕಾದ ಹೊಣೆಗಾರಿಕೆ ಬಿಜೆಪಿ ಕಾರ್ಯಕರ್ತರಿಗಿದೆ. ದಣಿವರಿಯದ ಬಿಜೆಪಿ ಕಾರ್ಯಕರ್ತರ ಪಡೆ ಮತ್ತದೇ ರೀತಿಯಲ್ಲಿ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಮತ್ತೆ ಬಿಜೆಪಿಗೆ ಗೆಲುವನ್ನು ತಂದುಕೊಂಡಲಿದ್ದಾರೆ ಎಂಬುದರಲ್ಲಿ ಅನುಮಾನ ಪಡಬೇಕಿಲ್ಲ.

ಚುನಾವಣಾ ಪ್ರಕ್ರಿಯೆಗಳು ಬಹುತೇಕ ಮುಗಿದ ನಂತರ ಸಂಘಟನಾತ್ಮಕ ಚಟುವಟಿಕೆಗಳನ್ನು ಚುರುಕುಗೊಳಿಸಲು ಅಗತ್ಯವಾದ ಕಾರ್ಯಕ್ರಮಗಳು ಖಂಡಿತವಾಗಿ ಪ್ರಾರಂಭವಾಗಲಿದೆ. ಲೋಕಸಭಾ ಚುನಾವಣೆಯಲ್ಲಿ ನಮ್ಮ ಸಂಪರ್ಕಕ್ಕೆ ಬಂದ ಅನೇಕ ವ್ಯಕ್ತಿಗಳನ್ನು ಕಾರ್ಯಕರ್ತರನ್ನಾಗಿ ಮಾಡುವ, ಸಂಘಟನೆಯಲ್ಲಿ ಸಕ್ರಿಯವಾಗಿ ಅವರನ್ನು ತೊಡಗಿಸಿಕೊಳ್ಳುವಂತೆ ಮಾಡಲು ಆಯಾ ವಿಭಾಗ ಹಾಗೂ ಸಂದರ್ಭಕ್ಕನುಗುಣವಾಗಿ ಕ್ರಿಯಾಶೀಲರಾಗಬೇಕಾಗಿದೆ. ಸಂಘಟನೆಯನ್ನು ಮತ್ತಷ್ಟು ಸಶಕ್ತಗೊಳಿಸಲು ಹಾಗೂ ಬರಲಿರುವ ಮಹಾನಗರ ಪಾಲಿಕೆ, ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಗಳಿಗೆ ಇದು ಅತ್ಯಂತ ಅವಶ್ಯಕ ಹಾಗೂ ಅನಿವಾರ್ಯ. ಮುನ್ನಡೆಯೋಣ...

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಹೆಚ್.ಎಸ್. ಗೋಪಿನಾಥ್
ಮೊ : 9341231253

**ಸಂಪಾದಕರು**
ಬಿದರೆ ಪ್ರಕಾಶ್
ಮೊ : 9513447961

## ಸುಭಾಷಿತ



**ಭವಿಷ್ಯದ ಬಗ್ಗೆ ಹೆದರದಿರಿ.**
**ಅದರ ನಿರ್ಮಾಣದಲ್ಲಿ**
**ಆಸಕ್ತಿ ತಳೆಯಿರಿ.**
**ಕನಸುಗಳನ್ನು ನನಸಾಗಿಸಿ.**
**ಕಲ್ಪನೆಯನ್ನು ಕೃತಿರೂಪದಲ್ಲಿಳಿಸಿ.**

**- ಪಂ. ದೀನದಯಾಳ ಉಪಾಧ್ಯಾಯ**




**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com

#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005

## ಈ ಸಂಚಿಕೆಯಲ್ಲಿ




06 ಕರ್ನಾಟಕದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ



11 ವಿಜಯ ಭಾರತ ಪ್ರಧಾನಿ ಮೋದಿ ಸಂಕಲ್ಪ



18 ರಾಜ್ಯಾಧ್ಯಕ್ಷರ ಪ್ರವಾಸ

- **ದೀವಟಿಗೆ :** ಗೋಪಾಲಕೃಷ್ಣ ಗೋಖಲೆ .......... 05
- ಕರ್ನಾಟಕ ರಾಜ್ಯದ ಲೋಕಸಭಾ ಕ್ಷೇತ್ರವಾರು ಮತದಾನ .......... 24
- ಥೀಮ್ ಆಧಾರಿತ ಮತದಾನ ಕೇಂದ್ರಗಳು .......... 27
- ವಿಕಸಿತ ಭಾರತದ ವಿರುದ್ಧ ವಿದೇಶಿಗಳ ಹುನ್ನಾರ .......... 28
- ರೈತ ಉತ್ಪಾದಕರ ಸಂಸ್ಥೆಗಳ ಪ್ರಮುಖರ ಸಭೆ .......... 31
- ವೆಂಕಟರಮಣಿ, ಸಂಘಟನೆಯ ಮುತ್ತಿನ ಮಣಿ .......... 33

ದೀವಟಿಗೆ

ಹರೀಶ್ ಆತ್ರೇಯ
ಬಿಜೆಪಿ ಕಾರ್ಯಕರ್ತರು



# ಗೋಪಾಲಕೃಷ್ಣ ಗೋಖಲೆ

**(09 ಮೇ 1866 – 19 ಫೆಬ್ರವರಿ 1915)**

## ಸಾಮಾಜಿಕ ನೀತಿ ಮತ್ತು ಕಾವ್ಯಧಾರೆ

ಅಸಾಧಾರಣ ನೆನಪಿನ ಶಕ್ತಿಯ, ವಿದ್ಯೆಯನ್ನು ಹಠದಿಂದ ಕಲಿತು ತನ್ನದಾಗಿಸಿಕೊಳ್ಳುವ ವ್ಯಕ್ತಿತ್ವದ, ಶ್ರದ್ಧೆಯಿಂದ ಮಕ್ಕಳಿಗೆ ಪಾಠ ಮಾಡುವ ಗುಣವೂ, ನೀತಿ ಸೂಕ್ಷ್ಮದರ್ಶಿತ್ವವೂ ಇರುವ ಹುಡುಗನೊಬ್ಬ ಓದಿದ್ದು ಬಿ.ಎ., ಆದರೆ ಬರೆದದ್ದು ಗಣಿತಶಾಸ್ತ್ರದ ಪುಸ್ತಕ. ಅದೂ ಆಂಗ್ಲ ಭಾಷೆಯಲ್ಲಿ. ಕವಿಯಾಗಿ, ಜನಪದ ಮಹಾಸಭೆಯ ಅಧ್ಯಕ್ಷರಾಗಿ, ಪೂನಾ ಪೌರ ಸಂಸ್ಥಾನದ ಅಧ್ಯಕ್ಷತೆಯನ್ನು ವಹಿಸಿಕೊಂಡು, ಭಾರತ ದೇಶ ಸಂಘದ ಅಧ್ಯಕ್ಷರಾಗಿ, ರಾಜ್ಯಕೋಶ ಪರಾಮರ್ಶ ಮಾಡುವವರಾಗಿ, ರಾಜ್ಯಾಂಗವನ್ನು ಪರಿಷ್ಕಾರ ಮಾಡುವ ರಾಜ್ಯಶಾಸ್ತ್ರಜ್ಞನಾಗಿ ಅನೇಕ ವಿಧವಾದ ಸಮಾಜಸೇವೆಯಲ್ಲಿ ತೊಡಗಿಸಿಕೊಂಡವರು ಶ್ರೀ ಗೋಪಾಲಕೃಷ್ಣ ಗೋಖಲೆಯವರು.

ಗೋಪಾಲ ಕೃಷ್ಣ ಗೋಖಲೆ, ಭಾರತೀಯ ಇತಿಹಾಸದಲ್ಲಿ ಅತ್ಯುನ್ನತ ವ್ಯಕ್ತಿಯಾಗಿದ್ದು, ಸಾಮಾಜಿಕ ನೀತಿ ನಿರೂಪಕರಾಗಿ ಮತ್ತು ಕವಿಯಾಗಿ ಅಳಿಸಲಾಗದ ಛಾಪು ಮೂಡಿಸಿದ್ದಾರೆ. ಮೇ 9, 1866 ರಂದು ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಜನಿಸಿದ ಗೋಖಲೆ ಅವರು ತಮ್ಮ ದೇಶ ಸೇವೆಗಾಗಿ ಮತ್ತು ಜನ ಸೇವೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟರು.

ಸಮಾಜ ಸುಧಾರಕರಾಗಿ, ಗೋಖಲೆ ಶಿಕ್ಷಣವನ್ನು ಜನಸಾಮಾನ್ಯರಿಗೆ ಸಬಲೀಕರಣದ ಸಾಧನವಾಗಿ ಪ್ರತಿಪಾದಿಸಿದರು. ಶಿಕ್ಷಣವು ಸಾಮಾಜಿಕ-ಆರ್ಥಿಕ ಪ್ರಗತಿಗೆ ಪ್ರಮುಖವಾಗಿದೆ ಎಂದು ಅವರು ಧೃಢವಾಗಿ ನಂಬಿದ್ದರು ಮತ್ತು ವಿಶೇಷವಾಗಿ ಹಿಂದುಳಿದವರಿಗೆ ಶಿಕ್ಷಣದ ಪ್ರವೇಶವನ್ನು ವಿಸ್ತರಿಸಲು ದಣಿವರಿಯದೆ ಶ್ರಮಿಸಿದರು. ಗೋಖಲೆಯವರ ಪ್ರಯತ್ನಗಳು ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿಗೆ ಕಾರಣವಾಯಿತು, ಸಮಾನ ಸಮಾಜಕ್ಕೆ ಅಡಿಪಾಯ ಹಾಕಿತು.

ಸಮಾಜ ಸುಧಾರಣೆಯಲ್ಲಿನ ಅವರ ಕೆಲಸದ ಜೊತೆಗೆ, ಗೋಖಲೆ ಸಮೃದ್ಧ ಕವಿಯೂ ಆಗಿದ್ದರು. ಅವರ ಕವನವು ಅವರ ದೇಶ ಮತ್ತು ಅದರ ಜನರ ಮೇಲಿನ ಆಳವಾದ ಪ್ರೀತಿಯನ್ನು ಪ್ರತಿಬಿಂಬಿಸುತ್ತದೆ, ಜೊತೆಗೆ ಉಜ್ವಲ ಭವಿಷ್ಯಕ್ಕಾಗಿ ಅವರ ದೃಷ್ಟಿ, ತಮ್ಮ ಪದ್ಯಗಳ ಮೂಲಕ, ಗೋಖಲೆ ಅವರು ಶ್ರೇಷ್ಠತೆಗಾಗಿ ಶ್ರಮಿಸಲು ಮತ್ತು ಸತ್ಯ, ನ್ಯಾಯ ಮತ್ತು ಸಹಾನುಭೂತಿಯ ಮೌಲ್ಯಗಳನ್ನು ಎತ್ತಿಹಿಡಿಯಲು ಪೀಳಿಗೆಗೆ ಸ್ಫೂರ್ತಿ ನೀಡಿದರು.

ಗೋಖಲೆಯವರು ಭಾರತೀಯ ಸಮಾಜಕ್ಕೆ ನೀಡಿದ ಕೊಡುಗೆಗಳು, ಅವರ ಬರಹಗಳು ಮತ್ತು ಕ್ರಿಯಾಶೀಲತೆಗೆ ಸೀಮಿತವಾಗಿಲ್ಲ. ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಪ್ರಮುಖ ರಾಜಕೀಯ ನಾಯಕರೂ ಆಗಿದ್ದರು. ಗೋಖಲೆಯವರು ಸಾಂವಿಧಾನಿಕ ಸುಧಾರಣೆಗಳನ್ನು ಪ್ರತಿಪಾದಿಸಿದರು ಮತ್ತು ಬ್ರಿಟಿಷ್ ಸಾಮ್ರಾಜ್ಯದ ಚೌಕಟ್ಟಿನೊಳಗೆ ಭಾರತಕ್ಕೆ ಸ್ವ-ರಾಜ್ಯವನ್ನು ಸಾಧಿಸಲು ಕೆಲಸ ಮಾಡಿದರು.

ಹಲವಾರು ಸವಾಲುಗಳು ಮತ್ತು ಅಡೆತಡೆಗಳನ್ನು ಎದುರಿಸುತ್ತಿದ್ದರೂ, ಗೋಖಲೆ ಅವರು ರಾಷ್ಟ್ರದ ಸೇವೆಯಲ್ಲಿ ತಮ್ಮ ಬದ್ಧತೆಯಲ್ಲಿ ಅಚಲರಾಗಿದ್ದರು. ಅವರ ಸಮಗ್ರತೆ, ನಮ್ರತೆ ಮತ್ತು ತನ್ನ ದೇಶವಾಸಿಗಳ ಕಲ್ಯಾಣಕ್ಕಾಗಿ ಅಚಲವಾದ ಸಮರ್ಪಣಾಭಾವವು ಅವರಿಗೆ ಎಲ್ಲಾ ವರ್ಗದ ಜನರ ಗೌರವ ಮತ್ತು ಮೆಚ್ಚುಗೆಯನ್ನು ಗಳಿಸಿತು.

ಗೋಪಾಲ ಕೃಷ್ಣ ಗೋಖಲೆಯವರ ಜೀವನ ಮತ್ತು ಪರಂಪರೆಯು ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಪ್ರಗತಿಗಾಗಿ ಶ್ರಮಿಸಲು ಭಾರತೀಯರ ತಲೆಮಾರುಗಳನ್ನು ಪ್ರೇರೇಪಿಸುತ್ತದೆ. ಸಾಮಾಜಿಕ ನೀತಿ ನಿರೂಪಕ ಮತ್ತು ಕವಿಯಾಗಿ ಅವರ ಕೊಡುಗೆಗಳು ಕಲ್ಪನೆಗಳ ಶಕ್ತಿ ಮತ್ತು ಉತ್ತಮ ಜಗತ್ತನ್ನು ನಿರ್ಮಿಸುವಲ್ಲಿ ಸಹಾಯ ಮಾಡುತ್ತದೆ.




# ಕರ್ನಾಟಕದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ

**ಚಿಕ್ಕಬಳ್ಳಾಪುರ:** 'ಕೈವಾರ ತಾತಯ್ಯ ಅವರ ಪುಣ್ಯ ನೆಲದಲ್ಲಿ ಜನತಾ ದರ್ಶನವಾಗುತ್ತಿದೆ. 90ರ ವಯಸ್ಸಿನ ಹಿರಿಯ ಚೇತನ ದೇವೇಗೌಡರಿಗೆ ಗೌರವ ಸಲ್ಲಿಸಲು ಇಲ್ಲಿಗೆ ಬಂದಿದ್ದೇನೆ. ದೇಶದ ಭದ್ರತೆ ಅಖಂಡತೆ ಜತೆಗೆ ಕರ್ನಾಟಕದ ಬಗ್ಗೆಯೂ ಇವರು ತುಂಬಾ ಕಳಕಳಿ ಹೊಂದಿದ್ದಾರೆ. ಶ್ರೀ ದೇವೇಗೌಡರು ನನ್ನ ಬಗ್ಗೆ ಹೊಂದಿರುವ ಕಾಳಜಿ, ಕಳಕಳಿಗೆ ಮನಸೋತಿದ್ದು ಇಂದು ಶ್ರೀ ದೇವೇಗೌಡರ ಅಶೀರ್ವಾದ ನನಗೆ ಸಿಕ್ಕಿದೆ'ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ತಿಳಿಸಿದರು.


ನಗರ ಹೊರವಲಯದಲ್ಲಿ ಏರ್ಪಡಿಸಿದ್ದ ಬಿಜೆಪಿ ವಿಜಯ ಸಂಕಲ್ಪ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶ್ರೀ ದೇವೇಗೌಡರಂತಹ ಹಿರಿಯರ ಮಾತಿನಿಂದ ನನಗೆ ಪ್ರೇರಣೆ ಸಿಕ್ಕಿದೆ. ಶ್ರೀ ದೇವೇಗೌಡರು ಯುಪಿಎ ಸರಕಾರದ ಬಗ್ಗೆ ಮಾತನಾಡಿರುವುದು ಅಕ್ಷರಶಃ ಸತ್ಯ. ಇಂಡಿಯಾ ಒಕ್ಕೂಟದಲ್ಲಿ ಸಮರ್ಥ ನಾಯಕರಿಲ್ಲ. ಈ ಒಕ್ಕೂಟದಿಂದ ದೇಶಕ್ಕೆ ಭವಿಷ್ಯವಿಲ್ಲ, ಒಕ್ಕೂಟಕ್ಕೂ ಭವಿಷ್ಯದಲ್ಲಿ ನೆಲೆಯಿಲ್ಲ, ಅವರಿಗೆ ದೇಶಕ್ಕಿಂತ ಹಗರಣ ಮಾತ್ರ ಗೊತ್ತು. ಆದ್ದರಿಂದ ಕೋಲಾರ ಚಿಕ್ಕಬಳ್ಳಾಪುರದಲ್ಲಿ ನಮ್ಮ ಅಭ್ಯರ್ಥಿಗಳು ಗೆಲ್ಲುವ ಮೂಲಕ ಮತ್ತೊಮ್ಮೆ ಮೋದಿ ನೇತೃತ್ವದ ಸರಕಾರ ಕೇಂದ್ರದಲ್ಲಿ ಬರಲಿದೆ ಎಂದು ಹೇಳಿದರು. 'ಲೋಕತಂತ್ರ ವ್ಯವಸ್ಥೆಯಲ್ಲಿ ನಿಮ್ಮ ಆರ್ಶೀವಾದ, ನಿಮ್ಮ ಪರಿವಾರ ಅಂತ ನಂಬಿದ್ದೇನೆ. ಹಗಲು ರಾತ್ರಿ ದುಡಿಯುವೆ, ನಿಮ್ಮ ಕನಸೇ ನನ್ನ ಸಂಕಲ್ಪ. ಒಳ್ಳೆಯ ನಿಯತ್ತಿನ ಉತ್ತಮ ಗ್ಯಾರಂಟಿ ಯೋಜನೆಗಳನ್ನು ಜನತೆಗೆ ನೀಡಿ 24 ಗಂಟೆ ನಿರಂತರವಾಗಿ ಕೆಲಸ ಮಾಡಲಿದ್ದೇನೆ. ನಮ್ಮ ದೇಶದ ಬಡವರ ಹೊಟ್ಟೆ ತುಂಬಿಸಲು ಉಚಿತ



**ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಇನ್ನು ಹೆಚ್ಚು ದಿನ ದೂರವಿಲ್ಲ, ಭಾರತದ ಜನ ಮೇಡ್ ಇಂಡಿಯಾ ಪ್ಯಾಸೆಂಜರ್ ವಿಮಾನದಲ್ಲಿ ಹಾರಾಟ ಮಾಡುತ್ತಾರೆ. ಈಗ ವಂದೇ ಭಾರತ್ ಆಧುನಿಕ ರೈಲು ಬಂದಿದೆ. ಹೆಚ್ಚು ದಿನ ದೂರವಿಲ್ಲ, ಕರ್ನಾಟಕಕ್ಕೂ ಬುಲೆಟ್ ರೈಲಿನ ಹೈಸ್ಪೀಡ್ ಸಿಗಲಿದೆ.**

**- ನರೇಂದ್ರ ಮೋದಿ, ಪ್ರಧಾನ ಮಂತ್ರಿಗಳು**

ಅಕ್ಕಿ ನೀಡುತ್ತಿದ್ದೇನೆ. ಬಡವರ ಮನೆ ಮಗ ಮೋದಿ ಈ ಕೆಲಸವನ್ನು ಸಾಕಾರ ಮಾಡಿದ್ದಾರೆ. ಚಿಕ್ಕಬಳ್ಳಾಪುರದಲ್ಲಿ 8 ಲಕ್ಷ ಫಲಾನುಭವಿಗಳಿಗೆ ಉಚಿತ ರೇಷನ್ ದೊರೆಯುತ್ತಿದೆ ಇದೇ ನಮ್ಮ ಗ್ಯಾರಂಟಿ. ಮೋದಿ ಅವರನ್ನು ಕೆಳಗಿಳಿಸಲು ಅನೇಕ ಶಕ್ತಿಗಳು ಒಟ್ಟುಗೂಡಿ ಕೆಲಸ ಮಾಡುತ್ತಿವೆ.ಇಲ್ಲಿ ದೊಡ್ಡಸಂಖ್ಯೆಯಲ್ಲಿ ಮಹಿಳೆಯರೇ ಸೇರಿದ್ದೀರಿ. ನಾರೀ ಶಕ್ತಿಯ ಆಶೀರ್ವಾದ ಇರುವವರೆಗೂ ನನ್ನನ್ನು ಮುಟ್ಟಲು ಯಾರಿಂದಲೂ ಸಾಧ್ಯವಿಲ್ಲ ಎಂದು ಪ್ರಧಾನಿ ಶ್ರೀ ಮೋದಿ ಅವರು ಆತ್ಮವಿಶ್ವಾಸದಿಂದ ನುಡಿದರು. ಕಾರ್ಯಕ್ರಮದಲ್ಲಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಡಾ.ಕೆ. ಸುಧಾಕರ್, ಕೋಲಾರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶ್ರೀ ಮಲ್ಲೇಶ್‌ಬಾಬು,ಮಾಜಿ ಉಪಮುಖ್ಯಮಂತ್ರಿ ಶ್ರೀ ಅಶ್ವತ್ಥನಾರಾಯಣ, ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಹಾಗೂ ಬಿಜೆಪಿ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



**ಚೊಂಬನ್ನು ಅಕ್ಷಯ ಪಾತ್ರೆ ಮಾಡ್ತೇವೆ:** ದೇವೇಗೌಡ ಮಾಜಿ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡ ಅವರು ಮಾತನಾಡಿ, ಕಾಂಗ್ರೆಸ್ ಪಕ್ಷದವರು ಯಾವ ಉದ್ದೇಶಕ್ಕೆ ಚೊಂಬನ್ನು ಜಾಹಿರಾತಿನಲ್ಲಿ ಬಳಸಿದ್ದಾರೋ ಅದನ್ನೇ ನಾವು ಮೋದಿ ನೇತೃತ್ವದಲ್ಲಿ ಅಕ್ಷಯ ಪಾತ್ರೆ ಮಾಡುತ್ತೇವೆ ಎಂದು ಘೋಷಿಸಿದರು. ಯುಪಿಎ ಸರಕಾರ ದೇಶವನ್ನು ಲೂಟಿ ಮಾಡಿ, ಹಲವು ಯೋಜನೆಗಳಲ್ಲಿ ಭಾರೀ ಭ್ರಷ್ಟಾಚಾರ ಮಾಡಿ ದೇಶದ ಖಜಾನೆ ಲೂಟಿ ಮಾಡಿ 2014ರಲ್ಲಿ ಪ್ರಧಾನಿ ಆಗಿದ್ದ ಶ್ರೀ ನರೇಂದ್ರ ಮೋದಿ ಕೈಗೆ ಖಾಲಿ ಚೊಂಬನ್ನು ಕೊಟ್ಟಿದ್ದರು. 10 ವರ್ಷಗಳಲ್ಲಿ ಖಾಲಿ ಚೊಂಬಿಗೆ ಸಂಪತ್ತು ತುಂಬಿ ದೇಶವನ್ನು ಸರಿಯಾದ ದಿಕ್ಕಿನತ್ತ ಕೊಂಡೊಯ್ಯುತ್ತಿರುವ ಪ್ರಧಾನಿಗಳ ಬಗ್ಗೆ ರಾಜ್ಯದ ಮುಖ್ಯಮಂತ್ರಿ ಕ್ಷುಲ್ಲಕವಾಗಿ ಮಾತನಾಡುತ್ತಿರುವುದು ಅಕ್ಷಮ್ಯ ಅಪರಾಧ. ರಾಜ್ಯದ 28ಲೋಕಸಭಾ ಸ್ಥಾನಗಳಲ್ಲಿ 28ರಲ್ಲಿ ಎನ್‌ಡಿಎ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ, ಇದು ಸತ್ಯ.ಎಂದರು. ಚಿಕ್ಕಬಳ್ಳಾಪುರ, ಕೋಲಾರದ ಅಭ್ಯರ್ಥಿಗಳಾದ ಡಾ.ಕೆ. ಸುಧಾಕರ್, ಶ್ರೀ ಮಲ್ಲೇಶ್‌ಬಾಬು ಅವರನ್ನು ಗೆಲ್ಲಿಸುವ ಮೂಲಕ ಪ್ರಧಾನಿ ಶ್ರೀ ಮೋದಿ ಅವರ ಕೈಯನ್ನು ಬಲಪಡಿಸುವಂತೆ ಮನವಿ ಮಾಡಿದರು.

**ಬೆಂಗಳೂರು:** ಕಾಂಗ್ರೆಸ್ ಮತ್ತು ಇಂಡಿ ಮೈತ್ರಿಕೂಟದವರು ತಂತ್ರಜ್ಞಾನ ವಿರೋಧಿಗಳು. ಆದರೆ, ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದಲ್ಲಿ ಪ್ರಧಾನಿಯಾಗಿ ಇದೇ ತಂತ್ರಜ್ಞಾನ ಮತ್ತು ಕಾಂಗ್ರೆಸ್ ವ್ಯಂಗ್ಯವಾಡಿದ್ದ ಡಿಜಿಟಲ್ ಆರ್ಥಿಕತೆಯನ್ನು ಬಳಸಿಕೊಂಡು ಭಾರತವನ್ನು ವಿಶ್ವದ ಅಗ್ರಮಾನ್ಯ ದೇಶಗಳ ಸಾಲಿನಲ್ಲಿ ನಿಲ್ಲಿಸಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.



ನಗರದ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ವಿಜಯ ಸಂಕಲ್ಪ ಯಾತ್ರೆಯಲ್ಲಿ ಬೆಂಗಳೂರು ಕೇಂದ್ರ, ಉತ್ತರ, ದಕ್ಷಿಣ ಮತ್ತು ಗ್ರಾಮಾಂತರ ಕ್ಷೇತ್ರಗಳ ಎನ್‌ಡಿಎ ಅಭ್ಯರ್ಥಿಗಳ ಪರ ಮತಯಾಚನೆ ಮಾಡಿ ಮಾತನಾಡಿ, ಬೆಂಗಳೂರು ಯುವ ಶಕ್ತಿ, ಯುವ ಪ್ರತಿಭೆ ಮತ್ತು ತಂತ್ರಜ್ಞಾನದ ಪವರ್ ಹೌಸ್. ಆದರೆ, ಕಾಂಗ್ರೆಸ್ ಮತ್ತು ಇಂಡಿ ಮೈತ್ರಿಕೂಟ ತಂತ್ರಜ್ಞಾನ ವಿರೋಧಿಗಳು. ಇಡೀ ವಿಶ್ವವೇ ಡಿಜಿಟಲ್ ಇಂಡಿಯಾ, ತಂತ್ರಜ್ಞಾನವನ್ನು ಪ್ರಶಂಸೆ ಮಾಡುತ್ತಿದ್ದರೆ ಕಾಂಗ್ರೆಸ್ ಆಧಾರ್ ವಿರೋಧ ಮಾಡಿತ್ತು. ಜನಧನ ಖಾತೆಯನ್ನು ವಿರೋಧಿಸಿತ್ತು. ಡಿಜಿಟಲ್ ಪಾವತಿ ಬಗ್ಗೆ ವ್ಯಂಗ್ಯವಾಡಿತ್ತು. ಪಡಿತರ ವ್ಯವಸ್ಥೆಯಲ್ಲಿ ಡಿಜಿಟಲ್ ದೃಢೀಕರಣಕ್ಕೆ ವಿರೋಧಿಸಿತ್ತು ಎಂದರು.

2014ರಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಾಗ ಭಾರತದ ಬ್ಯಾಂಕುಗಳು ಸಮಸ್ಯೆಯಲ್ಲಿದ್ದವು. ಸಾವಿರಾರು ಕೋಟಿ ರೂಪಾಯಿ ಮೊತ್ತದ ಭ್ರಷ್ಟಾಚಾರಗಳಿಂದಾಗಿ ವಿದೇಶಿ ಬ್ಯಾಂಕ್‌ಗಳು ಭಯದಿಂದಿದ್ದವು. ವಿದೇಶಿ ಹೂಡಿಕೆಗಳು ಪಾತಾಳಕ್ಕಿಳಿದಿದ್ದವು. ಆದರೆ ಈಗ ವಿಶ್ವದೆಲ್ಲೆಡೆ ರಾಷ್ಟ್ರಗಳು ಭಾರತದ ಜೊತೆ ಸ್ನೇಹ ಬಯಸುತ್ತಿದ್ದಾರೆ. ವಿದೇಶಿ ಹೂಡಿಕೆದಾರರು ದಾಖಲೆಯ ಹೂಡಿಕೆ ಮಾಡಿದ್ದಾರೆ. ರಫ್ತು, ಉತ್ಪಾದನೆಯಲ್ಲಿ ದಾಖಲೆ ಬರೆದಿದ್ದೇವೆ. ವಿಶ್ವದ 11ನೇ ಆರ್ಥಿಕತೆಯಾಗಿದ್ದ ಭಾರತ ಈಗ ಆರ್ಥಿಕತೆಯಲ್ಲಿ 5ನೇ ಸ್ಥಾನದಲ್ಲಿದೆ. ಇದಕ್ಕೆಲ್ಲಾ ಕಾರಣ 2014ರಲ್ಲಿ ನಿಮ್ಮ ಒಂದು ಮತದಿಂದ ಅಧಿಕಾರಕ್ಕೆ

ತಂದ ಸುಭದ್ರ ಸರಕಾರ. ಈಗ ಭಾರತ ಇತರರನ್ನು ಅನುಸರಿಸುವ ರಾಷ್ಟ್ರವಲ್ಲ, ಮುಂಚೂಣಿ ರಾಷ್ಟ್ರವಾಗಿ ನಿಂತಿದೆ ಎಂದು ಹೇಳಿದರು.

**ಎಚ್‌ಎಎಲ್ ದಾಖಲೆಯ ವಹಿವಾಟು**

ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಬೆಂಗಳೂರಿನ ಎಚ್‌ಎಎಲ್ ಸೇರಿದಂತೆ ಹಲವು ಸಂಸ್ಥೆಗಳನ್ನು ಹಾಳು ಮಾಡಿತು. ನಾವು ಅಧಿಕಾರಕ್ಕೆ ಬಂದ ಮೇಲೆ ಎಚ್‌ಎಎಲ್ ವಿಚಾರ ತೆಗೆದುಕೊಂಡು ಮೋದಿ ಹೆಸರನ್ನು ಹಾಳು ಮಾಡಲು ಪ್ರಯತ್ನಿಸಿತ್ತು. ಆದರೆ, ಈಗ ಎಚ್‌ಎಎಲ್ ದಾಖಲೆಯ ವಹಿವಾಟು ನಡೆಸುತ್ತಿದೆ. ಸಾಮರ್ಥ್ಯಕ್ಕೆ ತಕ್ಕಂತೆ ಕಾರ್ಯಾದೇಶಗಳು ಬಂದಿದ್ದು ಲಾಭದಾಯಕವಾಗಿ ಹೊರಹೊಮ್ಮಿದೆ. ಏಷ್ಯಾದ ಅತಿ ದೊಡ್ಡ ಹೆಲಿಕಾಪ್ಟರ್ ಘಟಕ ಸ್ಥಾಪನೆಯಾಗಿದೆ. ಭಾರತಕ್ಕೆ ಹೆಚ್ಚು ಕಂಪನಿಗಳು ಬರುತ್ತಿದ್ದು, ಉದ್ಯೋಗವೂ ಹೆಚ್ಚಾಗುತ್ತಿದೆ ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಹೇಳಿದರು.

ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯರೂ ಆಗಿರುವ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ, ವಿಧಾನಸಭಾ ಪ್ರತಿಪಕ್ಷ ನಾಯಕ ಶ್ರೀ ಆರ್.ಅಶೋಕ, ಮಾಜಿ ಮುಖ್ಯಮಂತ್ರಿ ಶ್ರೀ ಡಿ.ವಿ. ಸದಾನಂದಗೌಡ, ಬಿಜೆಪಿ ಅಭ್ಯರ್ಥಿಗಳಾದ ಡಾ. ಸಿ.ನ್.ಮಂಜುನಾಥ್, ಕು. ಶೋಭಾ ಕರಂದ್ಲಾಜೆ, ಶ್ರೀ ಪಿ.ಸಿ.ಮೋಹನ್, ಶ್ರೀ ತೇಜಸ್ವಿ ಸೂರ್ಯ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ಶ್ರೀ ನಿಖಿಲ್ ಕುಮಾರಸ್ವಾಮಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಬೆಳಗಾವಿ:** ನಮ್ಮ ಸಂಸ್ಕೃತಿ ಮೇಲೆ ಅನಾಚಾರ ಎಸಗಿದ ಔರಂಗಜೇಬನನ್ನು ಹೊಗಳುವವರ ಜತೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದೆ. ನವಾಬರು, ನಿಜಾಮರು ಹಾಗೂ ಸುಲ್ತಾನರ ಕ್ರೌರ್ಯದ ಕುರಿತು ಮಾತನಾಡದ ಇವರು ನಮ್ಮ ರಾಜ ಮಹಾ ರಾಜರ ಕುರಿತು ನಾಲಿಗೆ ಹರಿಬಿಡುವವರಿಗೆ ಮತ ನೀಡಬೇಡಿ ಎಂದು ಪ್ರಧಾನಿ ಮೋದಿ ಹರಿಹಾಯ್ದರು.




ವಿಕಸಿತ ಭಾರತಕ್ಕಾಗಿ ಬಿಜೆಪಿ ವಿಜಯ ಸಂಕಲ್ಪ ಸಮಾವೇಶ ಉದ್ದೇಶಿಸಿ ಮಾತನಾಡಿದ ಇವರು. ಭಾರತದ ಬೆಳವಣಿಗೆಯಲ್ಲಿ ರಾಜ ಮಹಾರಾಜರ ಪಾತ್ರ ಬಹುಮುಖ್ಯವಾಗಿದೆ. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿದೇಶಿ ವ್ಯಾಸಂಗಕ್ಕೆ ಗಾಯಕ್‌ವಾಡ್ ಮಹಾರಾಜರು ಸಹಾಯ ಮಾಡಿದರು. ಮಹಾರಾಣಿ ಅಹಲ್ಯಾ ಬಾಯಿ ಇಲ್ಲದಿದ್ದರೆ ದೇಶಗಳಲ್ಲಿ ದೇವಸ್ಥಾನ, ಮಂದಿರಗಳ ನಿರ್ಮಾಣ ಆಗುತ್ತಿತ್ತಾ? ಎಂದು ಮೋದಿ ಪ್ರಶ್ನಿಸಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಸಂಪೂರ್ಣ ಕಾನೂನು ಸುವ್ಯವಸ್ಥೆ ಹಾಳಾಗಿದೆ. ವಂಟಮೂರಿಯಲ್ಲಿ ದಲಿತ ಮಹಿಳೆ ಮೇಲೆ ಹಲ್ಲೆ, ಚಿಕ್ಕೋಡಿಯಲ್ಲಿ ಜೈನ ಮುನಿ ಹತ್ಯೆ, ಹುಬ್ಬಳ್ಳಿ ನೇಹಾ ಹಿರೇಮಠ ಕೊಲೆ ಹಾಗೂ ಬೆಂಗಳೂರು ಬಾಂಬ್ ಸ್ಫೋಟದಂತ ಪ್ರಕರಣಗಳು ನಡೆದಿದ್ದು ಖಂಡನೀಯ. ಒಂದು ವರ್ಗದ ಓಲೈಕೆ ರಾಜಕಾರಣದ ಫಲವಾಗಿ ಇಂದು ರಾಜ್ಯದ ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಕಾಂಗ್ರೆಸ್ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಸರಕಾರದ ಆಡಳಿತಾವಧಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಇದರಿಂದ ರಾಜ್ಯದ ಜನರಿಗೆ ತೊಂದರೆಯಾಗಿದೆ. ಈ ಹಿಂದೆ ಕಿಸಾನ್ ಸನ್ಮಾನ್ ಯೋಜನೆ ಅಡಿಯಲ್ಲಿ ರಾಜ್ಯ ಬಿಜೆಪಿ ಸರಕಾರದ ಸಂದರ್ಭದಲ್ಲಿ ನಾಲ್ಕು ಸಾವಿರ ರೂ ಹಾಗೂ ಕೇಂದ್ರದ ಹಣ ಸೇರಿ ಒಟ್ಟು 10 ಸಾವಿರ ರೂ. ರೈತರ ಖಾತೆಗೆ ನೀಡಲಾಗುತ್ತಿತ್ತು.

ಆದರೆ ರೈತರಿಂದ ಮತ ಪಡೆದ ಸರಕಾರ ಅವರನ್ನು ಮರೆತು ಹಣ ಕಡಿತ ಮಾಡಿದ್ದಾರೆ. ಮೋದಿ ಸರಕಾರದಿಂದ ಈ ಯೋಜನೆ ಮುಂದುವರಿಸುವ ಗ್ಯಾರಂಟಿ ನೀಡುತ್ತೇನೆ ಎಂದು ಹೇಳಿದರು.

**ದಾವಣಗೆರೆ:** ರಾಜ್ಯದಲ್ಲಿ ಎಲ್ಲೇ ಹೋದರೂ ಮತ್ತೊಮ್ಮೆ ಬಿಜೆಪಿ ಸರಕಾರ ಕೂಗು ಕೇಳಿ ಬರುತ್ತಿದೆ. ಜೂನ್ 4 ರಂದು ರಾಜ್ಯದಲ್ಲಿ ಬಿಜೆಪಿ ವಿಜಯೋತ್ಸವ ನಡೆಯಲಿದ್ದು ದಾವಣಗೆರೆಯಲ್ಲಿ ವಿಶೇಷವಾಗಿ ಬೆಣ್ಣೆದೋಸೆಯೊಂದಿಗೆ ವಿಜಯೋತ್ಸವ ಆಚರಿಸಲು ಈಗಲೇ ಸಿದ್ಧತೆ ಮಾಡಿಕೊಳ್ಳಿ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಾಸದ ನುಡಿಗಳನ್ನಾಡಿದ್ದಾರೆ.



ಬಿಜೆಪಿ ವಿಕಸಿತ ಭಾರತಕ್ಕಾಗಿ ವಿಜಯ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿ, ರಾಜ್ಯದಲ್ಲಿ ನಡೆದ ಮೊದಲ ಹಂತದ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮೇಲಿನಿಂದ ಕೆಳಗಿನವರೆಗೆ ಸಂಕಷ್ಟ ಮಾಡಿದೆ. ದೆಹಲಿಯಲ್ಲಿ ಕಾಂಗ್ರೆಸ್ ಒಂದೇ ಒಂದು ಖಾತೆ ತೆರೆಯುವ ಸಂಭವದ

ಬಾಗಿಲು ಮುಚ್ಚಿ ಹೋಗಿದೆ. ದಾವಣಗೆರೆಯಲ್ಲಿ ನೆರೆದ ಜನಸ್ತೋಮ ನೋಡಿದರೆ ರಾಜ್ಯದ ಜನತೆ ಕಾಂಗ್ರೆಸ್ ಸರಕಾರದ ಪಾಪಗಳಿಗೆ ಶಿಕ್ಷೆ ಕೊಡುವುದು ನಿಶ್ಚಿತ. ಕಾಂಗ್ರೆಸ್‌ನಲ್ಲಿನ ಆಂತರಿಕ ಜಗಳ ಬೀದಿಗೆ ಬರಲಿದೆ. ಎಲ್ಲ ಸುಳ್ಳುಗಳು ಬಯಲಾಗಲಿವೆ. ಒಬ್ಬರ ಮೇಲೊಬ್ಬರು ಆರೋಪ ಮಾಡುತ್ತಿದ್ದಾರೆ. ಚುನಾವಣೆ ಬಂದಾಗಲೆಲ್ಲ ಕಾಂಗ್ರೆಸ್ ಇವಿಎಂ ಮೇಲೆ ಆರೋಪದ ಮಂತ್ರ ಜಪಿಸುತ್ತಿತ್ತು. ಮೋದಿ ಗೆದ್ದರೂ ವಿಇಎಂ ಕಾರಣ ಎಂದು ಅವರ ಕಾರ್ಯಕರ್ತರನ್ನು ಸಮಾಧಾನಪಡಿಸುತ್ತಿದ್ದರು. ಇವಿಎಂ ಬಗ್ಗೆ ಮಾತನಾಡದಂತೆ ಸುಪ್ರಿಂಕೋರ್ಟ್ ಸರಿಯಾಗಿ ಚಾಟಿ ಬೀಸಿದೆ. ಈಗ ಅವರು ಚುನಾವಣೆಯಲ್ಲಿ ಸೋತರೆ ಏನು ಹೇಳಬಹುದು ಎಂಬ ತಯಾರಿ ನಡೆಸಿದ್ದಾರೆ. ಅವರಿಗೆ ಈಗ ನಿಜವಾದ ಸಂಕಷ್ಟ ಎದುರಾಗಿದೆ ಎಂದರು.

**ಶಿರಸಿ:** ನಾನು ದೇಶದ, ನಿಮ್ಮೆಲ್ಲರ ಸೇವಕ. ನಿಮ್ಮ ಸೇವಕನ ಆಯ್ಕೆಗಾಗಿ ನಿಮ್ಮ ಅಮೂಲ್ಯವಾದ ಮತ ನೀಡಿ ಸಾಕು. ನನ್ನ ಪ್ರತಿನಿಧಿಯಾಗಿ ವಿಶ್ವೇಶ್ವರ ಹೆಗಡೆ ಕಾಗೇರಿ ಇದ್ದಾರೆ. ಕಾಗೇರಿಯವರನ್ನು ದಾಖಲೆ ಮತಗಳಿಂದ ಗೆಲ್ಲಿಸಿ. ಇಲ್ಲಿ ನೆರೆದಿದ್ದ ಜನ ಸಾಗರವನ್ನು ನೋಡಿದರೆ ನನಗೆ ಭರವಸೆ ಇದೆ ನಿಮ್ಮ ಮೇಲೆ ಎಂಬ ವಿಶ್ವಾಸವನ್ನು ಪ್ರಧಾನಿ ನರೇಂದ್ರ ಮೋದಿ ವ್ಯಕ್ತಪಡಿಸಿದರು.



ಭಾರತಕ್ಕೆ ವಿಜಯ ಸಂಕಲ್ಪ ಯಾತ್ರೆಯಲ್ಲಿ ಮಾತನಾಡಿ, ಕಾಂಗ್ರೆಸ್ ಸರಕಾರಕ್ಕೆ ಕಾನೂನು, ಸುವ್ಯವಸ್ಥೆ ಮೇಲೆ ಹತೋಟಿ ತಪ್ಪಿದೆ. ವೋಟ್ ಬ್ಯಾಂಕ್ ರಾಜಕಾರಣದಿಂದ ಇಂದು ಈ ತರದ ಸಮಸ್ಯೆ ಜನರು ಅನುಭವಿಸುತ್ತಿದ್ದಾರೆ. ಹುಬ್ಬಳ್ಳಿ ನೇಹಾ ಕೊಲೆ ಪ್ರಕರಣ ಇಡೀ ದೇಶದಲ್ಲಿ ಆತಂಕ ಸೃಷ್ಟಿಸಿದೆ. ಕಾಂಗ್ರೆಸ್ ಪತನವಾಗಲಿದೆ. ಪವಿತ್ರ ಮಂಗಲ ಸೂತ್ರ ಕೂಡ ಕಿತ್ತು ವೋಟ್ ಬ್ಯಾಂಕ್‌ಗೆ ಕೊಡಲಿದೆ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ರಾಮ ಮಂದಿರ ನಿರ್ಮಾಣ ಕಾರ್ಯದಲ್ಲಿ ನಮ್ಮ ಪೂರ್ವಜರ ತ್ಯಾಗ ಬಲಿದಾನವಾಗಿದೆ. 500 ವರ್ಷಗಳ ಬಳಿಕ ನಿಮ್ಮ ಮತದ ತಾಕತ್ತನಿಂದ ಪ್ರಭು ಶ್ರೀರಾಮನ ಮಂದಿರ ನಿರ್ಮಾಣವಾಗಿದೆ. ದೇಶದ ಜನತೆಯ ಹತ್ತು ರೂಪಾಯಿಂದ ಕೋಟಿ ರೂ.ಗಳ ದಾನದಿಂದ ಮಂದಿರ ನಿರ್ಮಾಣವಾಗಿದೆ. ರಾಮಲಲ್ಲಾನನ್ನು ತಿರಸ್ಕರಿಸಿದ ಪಕ್ಷವನ್ನು ರಾಜ್ಯದ ಜನತೆ ತಿರಸ್ಕರಿಸುವ ಕಾಲ ಬಂದಿದೆ ಎಂದರು.

**ಹೊಸಪೇಟೆ :** ಕೊಪ್ಪಳ, ರಾಯಚೂರು ಹಾಗೂ ಬಳ್ಳಾರಿ ಲೋಕಸಭೆ ಕ್ಷೇತ್ರಗಳ ಅಭ್ಯರ್ಥಿ ಪರ ಆಯೋಜಿಸಿದ್ದ ಪ್ರಚಾರ ಸಭೆಯಲ್ಲಿ ಮಾತನಾಡಿದರು. ಬಾಬಾ ಸಾಹೇಬರು ರಚಿಸಿದ ಸಂವಿಧಾನದ ಲಾಭವನ್ನು ಕಾಶ್ಮೀರದ ಜನತೆಗೆ ತಲುಪಿಸದೆ ಕಾಂಗ್ರೆಸ್ ದಶಕಗಳಿಂದ ಕತ್ತಲೆಯಲ್ಲಿರಿಸಿತ್ತು. ಕಾಶ್ಮೀರಕ್ಕೆ ಸಂವಿಧಾನದಲ್ಲಿರುವ ಹಕ್ಕುಗಳನ್ನು ಅಲ್ಲಿನ ನಿವಾಸಿಗಳಿಗೆ ದೊರಕಿಸಲು ಬಿಜೆಪಿ ಅಧಿಕಾರಕ್ಕೆ ಬರಬೇಕಾಯಿತು. 370ನೇ ವಿಧಿ ರದ್ದತಿ ನಂತರ ಕಾಶ್ಮೀರದಲ್ಲಿ ಜನರ ಬದುಕು ಸಮೃದ್ಧಿಯತ್ತ ದಾಪುಗಾಲಿಡುತ್ತಿದೆ. ಇದು ಸಂವಿಧಾನದ ಆಶಯಗಳೆಡೆ ಬಿಜೆಪಿ ಬದ್ಧತೆ ತೋರಿದೆ ಎಂದರು.



ಕಾಂಗ್ರೆಸ್‌ಗೆ ಭ್ರಷ್ಟಾಚಾರಮುಕ್ತ ವ್ಯವಸ್ಥೆ ಮೇಲೆ ನಂಬಿಕೆಯಿಲ್ಲ. ಆ ಪಕ್ಷದ ಅವಧಿಯಲ್ಲಿ ಭ್ರಷ್ಟಾಚಾರ ಹಾಸು ಹೊಕ್ಕಾಗಿತ್ತು. ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ 2014ಕ್ಕೂ ಮೊದಲು ದೆಹಲಿಯಲ್ಲಿದ್ದ ಆ ಪಕ್ಷದ ದಲ್ಲಾಳಿಗಳು ದೇಶದ ನಾನಾ ರಾಜ್ಯಗಳಲ್ಲಿ ಆಶ್ರಯ ಪಡೆದಿದ್ದು, ಕರ್ನಾಟಕದಲ್ಲೂ ಬೀಡುಬಿಟ್ಟಿದ್ದಾರೆಂದು ಎಚ್ಚರಿಸಿದರು.

ವಿಕಸಿತ ಭಾರತದ ಕಲ್ಪನೆಗೆ ಪ್ರಚಾರಕ್ಕೆ ಹೋದಲ್ಲೆಲ್ಲ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಇದು ದೇಶದ ಒಕ್ಕೊರಲ ದನಿಯಾಗಿದ್ದು, ಮತ್ತೊಮ್ಮೆ ಮೋದಿ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲೆಂದು ಸಾರಿ ಹೇಳುತ್ತಿದೆ. ಕಾಂಗ್ರೆಸ್ ಎಷ್ಟೇ ಅಡ್ಡಿಪಡಿಸಿದರೂ ಭಾರತದ ಪ್ರಗತಿ ವೇಗ ತಡೆಯಲಾಗದು ಎಂದರು.

ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಬಿಜೆಪಿ ಸದಾ ಬದ್ಧತೆ ತೋರಿದೆ ಎಂದು ಒತ್ತಿ ಹೇಳಿದ ನರೇಂದ್ರ ಮೋದಿ, ಕೇಂದ್ರವು ಸಾವಿರಾರು ಕೋಟಿ ರೂ.ಗಳನ್ನು ಈ ಭಾಗದ ಅಭಿವೃದ್ಧಿಗೆ ಕೊಡುಗೆಯಾಗಿ ನೀಡಿದೆ. ಮುನಿರಾಬಾದ್-ಮಹೆಬೂಬ್ ನಗರ ರೈಲು ಮಾರ್ಗ ಸೇರಿ ಅನೇಕ ಸಂಪರ್ಕ ವ್ಯವಸ್ಥೆ ಸುಧಾರಣಾ ಹಾಗೂ ಆಧುನಿಕ ಸೌಲಭ್ಯ ಒದಗಿಸಿ ಭವಿಷ್ಯ ಸುಭದ್ರಗೊಳಿಸಿದೆ. ಟೆಕ್ಸ್‌ಟೈಲ್ ಪಾರ್ಕ್, ಕೈಗಾರಿಕೆಗಳ ಸ್ಥಾಪನೆ ಮೂಲಕ ಕಲ್ಯಾಣ ಕರ್ನಾಟಕ ಭಾಗದಲ್ಲಿ ನಿರುದ್ಯೋಗ ನಿವಾರಣೆ ಪ್ರಯತ್ನ ಮಾಡಲಾಗಿದೆ. ಬಳ್ಳಾರಿ ಜೀನ್ಸ್ ಉದ್ಯಮಕ್ಕೆ ವಿಶ್ವಮಟ್ಟದಲ್ಲಿ ಮಾರುಕಟ್ಟೆ ರೂಪಿಸುವ ಕಾರ್ಯ ನಡೆದಿದೆ. ಕೊಪ್ಪಳದ ಆಟಿಕೆ ಕ್ಲಸ್ಟರ್‌ನಲ್ಲಿ ಕೋಟ್ಯಂತರ ಹೂಡಿಕೆ ಕಂಡಿದೆ. ಆಟಿಕೆ ಉತ್ಪನ್ನಗಳು ವಿದೇಶಕ್ಕೆ ರಫ್ತು ಆಗುತ್ತಿವೆ. ವಿರೋಧಿಗಳು ಈ ವಿಚಾರವನ್ನು ಹಿಂದೊಮ್ಮೆ ಗೇಲಿ ಮಾಡುತ್ತಿದ್ದರು.



ಈಗ ವಿರೋಧಿಗಳಿಗೆ ಬಾಯಿಮುಚ್ಚಿಸುವ ರೀತಿಯಲ್ಲಿ ಕೇಂದ್ರವು ಆಟಿಕೆಗಳ ರಫ್ತು ಮಾಡುತ್ತಿದೆ ಎಂದು ಸಮರ್ಥಿಸಿಕೊಂಡರು.

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಪಕ್ಷವು ಮೂರು ದಶಕಗಳ ಹಿಂದೆ ನಡೆಸಿದ ತಿರಂಗಾ ಯಾತ್ರೆ ರಾಯಚೂರು ತಲುಪಿದಾಗ ಬೆಳಗಿನ ಜಾವ ಮೂರು ಗಂಟೆಯಾಗಿತ್ತು. ಆದರೂ ಇಡೀ ರಾಯಚೂರು ಜನತೆ ಕಾದಿದ್ದು ಮರೆಯಲಾಗದ ಕ್ಷಣ. ಅದೇ ರೀತಿ ಬಳ್ಳಾರಿ ಕ್ಷೇತ್ರದೊಂದಿಗೆ ಮತ್ತು ಬಿಜೆಪಿ ನಾಯಕಿಯಾಗಿದ್ದ ಸುಷ್ಮಾ ಸ್ವರಾಜ್ ಅವರ ನಂಟು ಚಿರಸ್ಥಾಯಿಯಾಗಿದೆ ಎಂದು ಪ್ರಧಾನಿ ಶ್ರೀ ಮೋದಿ ಸ್ಮರಿಸಿದರು.

**ಬಾಗಲಕೋಟೆ :** ಬಾಗಲಕೋಟೆ ತೋಟಗಾರಿಕೆ ವಿವಿ ಬಳಿಯ ಮೈದಾನದಲ್ಲಿ ಆಯೋಜಿಸಿದ್ದ ವಿಜಯ ಸಂಕಲ್ಪ ಸಮಾವೇಶದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು ಮಾತನಾಡಿ, ಕರ್ನಾಟಕದಲ್ಲಿ ವಸೂಲಿ ಗ್ಯಾಂಗ್ ಆಡಳಿತ ನಡೆಸುತ್ತಿದೆ. ಖಜಾನೆಗೆ ಹಣ ಬರುತ್ತಿದ್ದಂತೆ ಲೂಟಿ ಹೊಡೆದು ತಮ್ಮ ಖಜಾನೆ ತುಂಬಿಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಲೂಟಿಗೆ ಕರ್ನಾಟಕವನ್ನು ಎಟಿಎಂ ಮಾಡಿಕೊಂಡಿದೆ ಎಂದೂ ಆರೋಪಿಸಿದರು.

ನಾವು ಬೆಂಗಳೂರನ್ನು ಐಟಿ ಹಬ್ ಮಾಡಲು ಹೊರಟರೆ ಕಾಂಗ್ರೆಸ್ ಸರ್ಕಾರ ಕುಡಿವ ನೀರಿನ ಅಭಾವ ಸೃಷ್ಟಿಸಿ ಟ್ಯಾಂಕರ್ ಮಾಫಿಯಾ ನಡೆಸುತ್ತಿದೆ. ಅದರಲ್ಲೂ ಕಮಿಷನ್ ತೆಗೆದುಕೊಳ್ಳುತ್ತಿದೆ. ಕೋಟ್ಯಂತರ ಮೊತ್ತದ ಹಗರಣ ಮಾಡುವ ಕನಸನ್ನು ಕಾಂಗ್ರೆಸ್‌ನವರು ಕಾಣುತ್ತಿದ್ದಾರೆ. ರಾಜ್ಯ ಲೂಟಿ ಹೊಡೆಯುವವರಿಗೆ ಮೇ 7ರಂದು ಶಿಕ್ಷೆ ಆಗಬೇಕಲ್ಲವೆ ಎಂದು ಹೇಳಿದರು. ನಾವು ಬಾಲಾಕೋಟ್‌ನಲ್ಲಿ ಏರ್‌ಸ್ಟೈಕ್ ಮಾಡಿದೆವು. ಅದು ಕಾಂಗ್ರೆಸ್‌ನವರಿಗೆ ಅರ್ಥವಾಗಲಿಲ್ಲ. ಅವರು ಬಾಗಲಕೋಟೆ ಅಂದುಕೊಂಡರು. ದಾಳಿ ಮಾಡಿದ್ದ ಸೈನಿಕರ ಬಗ್ಗೆ ಅಪಪ್ರಚಾರ ಮಾಡಿದರು. ದೇಶದಲ್ಲಿ ಮೋದಿ ಬಂದ ಮೇಲೆ ಭಯೋತ್ಪಾದನೆ, ಉಗ್ರರಿಗೆ ಅವಕಾಶ ಇಲ್ಲ. ಏಕೆಂದರೆ ಮೋದಿ 'ಉಗ್ರರ ಮನೆಗೆ ನುಗ್ಗಿ ಹೊಡೀತಾನೆ' ಎಂದು ನೇರ ಎಚ್ಚರಿಕೆ ಕೊಟ್ಟರು.

## ಕಾರ್ಯಕರ್ತರ ಶಕ್ತಿ




**ಯಾವ ಪಕ್ಷಕ್ಕೂ ಇಲ್ಲದ ಕಾರ್ಯಕರ್ತರ ಶಕ್ತಿ ನಮ್ಮ ಬಿಜೆಪಿ ಪಕ್ಷಕ್ಕೆ ಇರುವುದಕ್ಕೆ ಇದೂ ಒಂದು ನಿದರ್ಶನ**

ಲೋಕಸಭಾ ಚುನಾವಣೆ ಪ್ರಚಾರದ ಸಮಯದಲ್ಲಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ತೇಗೂರಿನಲ್ಲಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿದ್ದಾಗ ತೇಗೂರು ಗೇಟ್‌ನ ಚುರುಮುರಿ ವ್ಯಾಪಾರಿಯಾದ ಶ್ರೀ ಲೋಕೇಶ್ ಅವರ ಅಂಗಡಿಗೆ ತೆರಳಿದೆವು.

ನಮ್ಮ ಪಕ್ಷದ ಕಾರ್ಯಕರ್ತರೂ ಆಗಿರುವ ಲೋಕೇಶ್ ರವರು ಚುನಾವಣಾ ಠೇವಣಿಗೆ ರೂ. 25,000 ನೀಡಿ ಶುಭಾಶಯ ಕೋರಿದರು. ಅವರ ಪ್ರೀತಿಗೆ ನಾನು ನಿರುತ್ತರನಾದೆ. ಚಿಕ್ಕಮಗಳೂರಿನ ಕಾರ್ಯಕರ್ತರ ಪ್ರೀತಿಯನ್ನು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. (ಈ ಹಣವನ್ನು ಚಿಕ್ಕಮಗಳೂರು ಜಿಲ್ಲಾ ಭಾಜಪಾ ಕಾರ್ಯಾಲಯದಲ್ಲಿ ಚುನಾವಣಾ ಖರ್ಚಿಗೆ ದೇಣಿಗೆ ನೀಡಿದೆ)

**– ಸಿ.ಟಿ. ರವಿ,**
**ನಿಕಟಪೂರ್ವ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು**
**(ಫೇಸ್‌ಬುಕ್ ಕೃಪೆ)**



# ವಿಜಯ ಭಾರತ

## ಪ್ರಧಾನಿ ಮೋದಿ ಸಂಕಲ್ಪ

**ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ರವರ ವಿಶೇಷ ಸಂದರ್ಶನದ ಅಕ್ಷರರೂಪ**



**ಕಾಂಗ್ರೆಸ್ ಅಪಪ್ರಚಾರಕ್ಕೆ ಕಿವಿಗೊಡಬೇಡಿ 10 ವರ್ಷದ ಟ್ರ್ಯಾಕ್ ರೆಕಾರ್ಡ್ ನೋಡಿ**

**ದೇಶಾದ್ಯಂತ ಅಬ್ಬರದ ಪ್ರಚಾರ ನಡೆಸಿದ್ದೀರಿ. ಮತದಾರರ ನಾಡಿಮಿಡಿತ ಹೇಗಿದೆ?**

ಸಬ್ ಕಾ ಸಾಥ್ ಸಬ್ ಕಾ ವಿಕಾಸ್, ವಿಕಸಿತ ಭಾರತ ನಮ್ಮ ಸಂಕಲ್ಪ. ದೇಶದ ಪ್ರಗತಿಗಾಗಿ ಜನತೆ ಈ ಬಾರಿಯೂ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವನ್ನು ಬೆಂಬಲಿಸಲಿದ್ದಾರೆ.

**ದಕ್ಷಿಣ ಭಾರತದಲ್ಲಿ ಕರ್ನಾಟಕ ಹೊರತುಪಡಿಸಿದರೆ ಇತರ ರಾಜ್ಯಗಳಲ್ಲಿ ಬಿಜೆಪಿಗೆ ಹೆಚ್ಚು ಬಲ ಇಲ್ಲ. ಈ ಬಾರಿ ಪರಿಸ್ಥಿತಿ ಹೇಗಿದೆ?**

ಈ ಬಾರಿ ದಕ್ಷಿಣದ ರಾಜ್ಯಗಳಲ್ಲಿ ಎಲ್ಲರೂ ಅಚ್ಚರಿ ಪಡುವಷ್ಟು ಲೋಕಸಭಾ ಸ್ಥಾನ ಗೆಲ್ಲಲಿದ್ದೇವೆ.  ಫಲಿತಾಂಶ ಬಿಜೆಪಿ–ಎನ್‌ಡಿಎ ಪರವಾಗಿ ಹೊರಬೀಳಲಿದೆ. ತಮಿಳುನಾಡು ಆಂಧ್ರಪ್ರದೇಶ, ಕೇರಳ ಹಾಗೂ ತೆಲಂಗಾಣದಲ್ಲಿ ಈ ಸಲ ನಿರೀಕ್ಷೆಗೂ ಮೀರಿದ ಸಾಧನೆ ಮಾಡಲಿದ್ದೇವೆ.  ನಾವು ಲೋಕಸಭೆ ಚುನಾವಣೆಯಲ್ಲಿ ಈ ಹಿಂದಿಗಿಂತ  ಹೆಚ್ಚು ಸ್ಥಾನಗಳನ್ನು ಗೆಲ್ಲಲಿದ್ದೇವೆ. ಉತ್ತರ ಹಾಗೂ ಪಶ್ಚಿಮ ಭಾರತದ ರಾಜ್ಯಗಳಲ್ಲೂ ನಾವು ಅತ್ಯಧಿಕ ಲೋಕಸಭಾ ಸ್ಥಾನಗಳನ್ನು ಗೆಲ್ಲಲಿದ್ದೇವೆ.

**ಬಿಜೆಪಿ ಸಂಖ್ಯೆ ಕಡಿಮೆ ಆಗುತ್ತೆ ಅಂತ ಜೆಡಿಎಸ್ ಜತೆ ಮೈತ್ರಿ ಮಾಡಿಕೊಂಡಿದ್ದೇ?**

ಕಮಲ ಮತ್ತು ಕರ್ನಾಟಕದ ಮಧ್ಯೆ ವಿಶೇಷ ಬಾಂಧವ್ಯವಿದೆ. ಕಮಲ ಕರ್ನಾಟಕಕ್ಕಾಗಿ ಕೆಲಸ ಮಾಡಲು ಬಯಸುತ್ತದೆ. ಲೋಕಸಭೆ ಚುನಾವಣೆಗಳಲ್ಲಿ ಸತತವಾಗಿ ಬಿಜೆಪಿಯ ಅಧಿಕ ಸಂಖ್ಯೆಯ ಸಂಸದರನ್ನು ಇಲ್ಲಿಂದ ಕಳುಹಿಸಲಾಗುತ್ತಿದೆ. ಕಳೆದ ಬಾರಿ ರಾಜ್ಯದ ಜನತೆ ಹೊಸ ದಾಖಲೆ ಬರೆದಿದ್ದರು. ರಾಷ್ಟ್ರೀಯ ಹಿತಾಸಕ್ತಿ ಮತ್ತು ಜನ ಹಿತಾಸಕ್ತಿಗಳಿಗೆ ಆದ್ಯತೆ ನೀಡುವುದರಿಂದಲೇ ಕರ್ನಾಟಕದ ಜನರು ಬಿಜೆಪಿಯನ್ನು ಬಹುವಾಗಿ ಪ್ರೀತಿಸುತ್ತಾ ಬಂದಿದ್ದಾರೆ. ಜೆಡಿಎಸ್ ಮೈತ್ರಿ ರಾಜ್ಯದ ಮಟ್ಟಿಗೆ ಉತ್ತಮ ಬೆಳವಣಿಗೆ ಎಂದು ನಾನು ಭಾವಿಸುತ್ತೇನೆ.

**ಎನ್‌ಡಿಎ ಸರ್ಕಾರದ ಹಲವಾರು ಸಾಧನೆಗಳ ಹೊರತಾಗಿಯೂ, ಯಾವುದಾದರೂ ಕಾರ್ಯಕ್ರಮಗಳು ಅಥವಾ ಯೋಜನೆಗಳನ್ನು ಇಷ್ಟೊತ್ತಿಗೆ ಪೂರ್ಣಗೊಳಿಸಿರಬೇಕಿತ್ತು ಅಥವಾ ಅನುಷ್ಠಾನಕ್ಕೆ ತಂದಿರಬೇಕಿತ್ತು ಎಂದು ನಿಮಗೆ ವೈಯಕ್ತಿಕವಾಗಿ ಅನ್ನಿಸಿದೆಯೇ?**

ಎಷ್ಟೇ ದೊಡ್ಡ ಸಾಧನೆಗಳನ್ನು ಮಾಡಿದ್ದರೂ ಪ್ರಸ್ತುತ ಸಾಧನೆಗಳ ಬಗ್ಗೆ ತೃಪ್ತಿಪಟ್ಟುಕೊಂಡು ಸುಮ್ಮನಿರುವಂತಹ ವ್ಯಕ್ತಿ ನಾನಲ್ಲ.  ವಿಶ್ವದಲ್ಲಿ 11ನೇ ಸ್ಥಾನದಲ್ಲಿದ್ದ ಭಾರತದ ಆರ್ಥಿಕತೆಯನ್ನು 10 ವರ್ಷಗಳಲ್ಲಿ 5ನೇ ಸ್ಥಾನಕ್ಕೆ ಕೊಂಡೊಯ್ದಿದ್ದೇವೆ. ಆದರೆ, ಆದಷ್ಟು ಬೇಗ ಭಾರತ ಹೇಗೆ ವಿಶ್ವದ ಮೂರನೇ ಆರ್ಥಿಕತೆ ಆಗಬಲ್ಲದು ಎಂಬುದರ ಬಗ್ಗೆ ನಾನು ಸದಾ ಯೋಚಿಸುತ್ತಿರುತ್ತೇನೆ. ಬಡತನದ ವಿರುದ್ಧದ ಹೋರಾಟವನ್ನು ಗೆಲ್ಲಲು ನಾವು 25 ಕೋಟಿ ಜನರಿಗೆ ಸಹಾಯ ಮಾಡಿದ್ದೇವೆ. ಆದರೆ, ಭಾರತದಲ್ಲಿನ ತೀರಾ ಕಡುಬಡತನವನ್ನು ಹೇಗೆ ಕೊನೆಗೊಳಿಸಬಹುದು ಎಂಬುದರ ಕುರಿತಂತೆ ಗಮನಹರಿಸಿ, ಕಾರ್ಯಪ್ರವೃತ್ತನಾಗಿದ್ದೇನೆ. ಯಾವುದೇ ಸೌಲಭ್ಯ,

ಸೌಕರ್ಯಗಳಿಲ್ಲದ ಬಡವರಿಗೆ ಬ್ಯಾಂಕ್ ಖಾತೆ, ಎಲ್‌ಪಿಜಿ ಗ್ಯಾಸ್ ಸಂಪರ್ಕ, ನಲ್ಲಿ ನೀರು, ಆರೋಗ್ಯ ವಿಮೆ, ಮನೆಗಳು, ಶೌಚಗೃಹಗಳ ನಿರ್ಮಾಣ ಹೀಗೆ ಹಲವು ಅವಶ್ಯಕ ಸೌಕರ್ಯ ಕಲ್ಪಿಸಿ ಅವರ ಜೀವನಮಟ್ಟವನ್ನು ಉತ್ತಮಪಡಿಸಿದ್ದೇವೆ. ಆದರೆ, ಬಡವರು ಚಿಂತೆಗಳಿಂದ ಸಂಪೂರ್ಣ ಮುಕ್ತರಾಗಿ, ಸಾಧ್ಯತೆಗಳಿಂದ ಯುಕ್ತರಾಗಿ ಬದುಕು ಸಾಗಿಸುವಂತಾಗಬೇಕು ಎಂಬುದರತ್ತ ಗಮನಹರಿಸಿದ್ದೇನೆ. ವಿಕಸಿತ ಭಾರತದಲ್ಲಿ ದೇಶದ ಪ್ರತಿಯೊಬ್ಬ ನಾಗರಿಕನೂ ಘನತೆ ಮತ್ತು ಸಂತೋಷದ ಜೀವನವನ್ನು ನಡೆಸುವಂತಾಗಬೇಕು ಎಂಬುದು ನನ್ನ ಗುರಿ. ಅದನ್ನು ಸಾಧಿಸುವವರೆಗೆ, ನೀವು ನನ್ನನ್ನು ಎಂದಿಗೂ ತೃಪ್ತನಾಗಿ ಕಾಣುವುದಿಲ್ಲ. ಅದಕ್ಕಾಗಿಯೇ ನಾನು ಹೇಳಿದ್ದು, 10 ವರ್ಷದಲ್ಲಿ ನೀವು ನೋಡಿದ್ದು ಟ್ರೇಲರ್ ಮಾತ್ರ. ಇನ್ನೂ ಬಹಳಷ್ಟು ಕೆಲಸಗಳನ್ನು ಮಾಡುವುದಿದೆ.

**ಶ್ರೀರಾಮ ಮಂದಿರ ನಿರ್ಮಾಣದ ಕನಸನ್ನು ನನಸು ಮಾಡಿದ್ದೀರಿ. ಈ ಮೈಲಿಗಲ್ಲು ದಾಖಲಿಸುವಾಗ ನೀವು ಎದುರಿಸಿರುವ ಸವಾಲುಗಳೇನು ಎಂಬುದನ್ನು ಹಂಚಿಕೊಳ್ಳಬಹುದೇ?**

ಪ್ರಭು ಶ್ರೀರಾಮನ ಮಂದಿರವು ಸಾಕಾರಗೊಂಡಿದೆ. ಕಳೆದ ಐದು ಶತಮಾನಗಳಲ್ಲಿ ಶ್ರೀರಾಮನ ಭಕ್ತರು ಮಾಡಿದ ತ್ಯಾಗದಿಂದ ಇದು ಸಾಧ್ಯವಾಗಿದೆ. ವೈಯಕ್ತಿಕವಾಗಿ ಚಿಕ್ಕ ಚಿಕ್ಕ ವಿಷಯಗಳಲ್ಲೂ ಎಷ್ಟೋ ಸವಾಲುಗಳಿರುತ್ತವೆ. ಆದರೆ ಇದು ರಾಷ್ಟ್ರೀಯ ಕೆಲಸ, ಸಂಸ್ಕೃತಿ – ಸಭ್ಯತೆಗೆ ಸಂಬಂಧಿಸಿದ ಕಾರ್ಯ. ಹಾಗಾಗಿ ಇದರಲ್ಲಿ ಅಡಚಣೆ ಸವಾಲು ಇದ್ದೇ ಇರುತ್ತವೆ. ಅಲ್ಲಗಳೆಯಲು ಯತ್ನಿಸಿದವರೂ, ವಿಳಂಬ ಮಾಡಲು ಯತ್ನಿಸಿದವರೂ ಮತ್ತು ದಿಕ್ಕು ತಪ್ಪಿಸುವವರೂ, ಶ್ರೀರಾಮ ಕಾಲ್ಪನಿಕ ಎಂದು ಹೇಳಿದವರೂ ಇದ್ದರು. ಒಂದು ಸಮಾಜವಾಗಿ ನಮ್ಮ ತಾಳ್ಮೆ ಮತ್ತು ಪ್ರಬುದ್ಧತೆ, ಕೋಟ್ಯಂತರ ಜನರ ನಂಬಿಕೆ, ಶ್ರದ್ಧೆ, ಸಂವಿಧಾನ ಮತ್ತು ಸಂಬಂಧಪಟ್ಟ ಸಂಸ್ಥೆಗಳ ವಿಶ್ವಾಸದಿಂದ ಕೊನೆಗೂ ಶ್ರೀರಾಮ ಅಯೋಧ್ಯೆಗೆ ಮರಳಿದ್ದಾನೆ. ಈಗ ಭೂತಕಾಲದ ಬಗ್ಗೆ ಹೆಚ್ಚು ಗಮನ ಹರಿಸುವುದಕ್ಕಿಂತ, ಸಕಾರಾತ್ಮಕತೆಯಿಂದ ಸಾಗಲು ಇದು ಒಳ್ಳೆಯ ಸಮಯ ಎಂದೆನಿಸುತ್ತದೆ. ಭಾರತದ ಭವಿಷ್ಯಕ್ಕೆ ರಾಮಮಂದಿರವೆಂದರೆ ಏನು ಎಂಬುದರತ್ತ ಹೆಚ್ಚು ಗಮನ ಹರಿಸಬೇಕಿದೆ. ರಾಮನ ಪ್ರಾಣಪ್ರತಿಷ್ಠೆ ಬರೀ ಒಂದು ಮೈಲಿಗಲ್ಲಲ್ಲ. ಭಾರತದ ಆತ್ಮದೊಂದಿಗಿನ ಆಳವಾದ ಸಂಪರ್ಕ. ಇದು ಬಹಳ ದೀರ್ಘ ಸಮಯದ ನಂತರ ಪುನರುಜ್ಜೀವನಗೊಂಡಿದೆ. ಪ್ರಭು ಶ್ರೀರಾಮನ ಆಗಮನವು ಮುಂದಿನ 1,000 ವರ್ಷಗಳ ಶಾಂತಿ, ಸಮೃದ್ಧಿ ಮತ್ತು ಪ್ರಗತಿಗೆ ಅಡಿಪಾಯ ಹಾಕಿದೆ ಎಂದು ನಾನು ದೃಢವಾಗಿ ನಂಬುತ್ತೇನೆ. ನಾನು ಮೊದಲೇ ಹೇಳಿದಂತೆ, ರಾಮನಿಂದ ರಾಷ್ಟ್ರಕ್ಕೆ ಮತ್ತು ದೇವದಿಂದ ದೇಶಕ್ಕೆ ನಮ್ಮ ಪ್ರಜ್ಞೆಯನ್ನು ವಿಸ್ತರಿಸಲು ನಾವು ಈಗ ಈ ಸಾಂಸ್ಕೃತಿಕ ಮೈಲಿಗಲ್ಲಿನಿಂದ ಸಕಾರಾತ್ಮಕ ಶಕ್ತಿಯನ್ನು ವಿಸ್ತರಿಸಬೇಕು. ಶ್ರೀರಾಮನ ಮೌಲ್ಯಗಳಿಂದ ಪ್ರೇರಿತರಾಗಲು ಮತ್ತು ನಮ್ಮ ರಾಷ್ಟ್ರದ ಕಲ್ಯಾಣಕ್ಕಾಗಿ ನಮ್ಮನ್ನು ಅರ್ಪಿಸಿಕೊಳ್ಳಲು, ಒಗ್ಗಟ್ಟಿನಿಂದ ಇರಲು, ಸಮಾಜದ ಅತ್ಯಂತ ದುರ್ಬಲ ಮತ್ತು ಹಿಂದುಳಿದ ವರ್ಗಗಳಿಗೆ ಸೇವೆ ಸಲ್ಲಿಸಲು ಗಮನಹರಿಸಬೇಕಾದ ಸಮಯ ಇದು.

**ಚುನಾವಣಾ ಬಾಂಡ್ ಯೋಜನೆ ರದ್ದು ಮಾಡಿದ ಸುಪ್ರೀಂಕೋರ್ಟ್, ಅದನ್ನು ಅಸಾಂವಿಧಾನಿಕ ಎಂದು ವಿರೋಧಿಸಿತು. ಇದಕ್ಕೆ ನಿಮ್ಮ ಪ್ರತಿಕ್ರಿಯೆಯೇನು? ಕೇಂದ್ರ ಸರ್ಕಾರದ ಮೇಲೆ ಇದು ಪರಿಣಾಮ ಬೀರಿಲ್ಲವೇ?**

ನಮ್ಮ ಆರ್ಥಿಕತೆ ಮತ್ತು ಚುನಾವಣೆ ಮೇಲೆ ಕಪ್ಪು ಹಣ ಬೀರುತ್ತಿರುವ ದುಷ್ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡೇ ಕಳೆದ 10 ವರ್ಷಗಳಲ್ಲಿ ನಾವು ಕಪ್ಪುಹಣದ ವಿರುದ್ಧ ಹಲವು ಕಠಿಣ ಕ್ರಮಗಳನ್ನು ಕೈಗೊಂಡಿದ್ದೇವೆ. ನೋಟು ಅಮಾನ್ಯೀಕರಣ, ಅಧಿಕ ಮುಖಬೆಲೆಯ ನೋಟುಗಳ ರದ್ದತಿ, ರಾಜಕೀಯ ಪಕ್ಷಗಳಿಗೆ ನಗದು ದೇಣಿಗೆಯ ಮಿತಿಯಲ್ಲಿ ಕಡಿತ ಸೇರಿ ಹಲವು ಕ್ರಮಗಳು ಕಣ್ಣ ಮುಂದೆಯೇ ಇವೆ. ಈ ಹಿನ್ನೆಲೆ ಇಟ್ಟುಕೊಂಡೇ ಚುನಾವಣಾ ಬಾಂಡ್ ಯೋಜನೆ ಪ್ರಕಟಿಸಲಾಯಿತು. ಕಪ್ಪುಹಣದ ಪಿಡುಗು ತಪ್ಪಿಸಲೆಂದೇ ಚುನಾವಣಾ ಬಾಂಡ್ ಜಾರಿಗೆ ಬಂದಿತು. ಯಾವುದೇ ಭಯವಿಲ್ಲದೆ ದಾನಿಗಳು ಪಕ್ಷಗಳಿಗೆ ದೇಣಿಗೆ ನೀಡಲು ಸಾಧ್ಯವಾಯಿತು ಮತ್ತು ಮುಖ್ಯವಾಗಿ ರಾಜಕೀಯ ವ್ಯವಸ್ಥೆಗೆ ಶುದ್ಧ ಹಣ ಹರಿದುಬಂದಿತು. ಚುನಾವಣಾ ಬಾಂಡ್ ವಿಷಯದಲ್ಲಿ ಭಾರಿ ಗದ್ದಲ ಎಬ್ಬಿಸುತ್ತಿರುವವರು, ದೇಶದ ವಿಪಕ್ಷಗಳಿಗೇ ಬಾಂಡ್ ಮೂಲಕ ದೊಡ್ಡ ಪ್ರಮಾಣದಲ್ಲಿ ದೇಣಿಗೆ ಹರಿದುಬಂದಿರುವುದನ್ನು ಮತ್ತು ಬಿಜೆಪಿಗೆ ಸಣ್ಣ ಪ್ರಮಾಣದಷ್ಟು ದೇಣಿಗೆಯಷ್ಟೇ ಬಂದಿದೆ ಎಂಬುದನ್ನು ಗಮನಿಸುವುದು ಒಳಿತು.

**ನೀವು ಆಗಾಗ 'ವಿಷನ್ 2047'ರ ಬಗ್ಗೆ ಚರ್ಚಿಸುತ್ತೀರಿ, ದೇಶದ ಅಭಿವೃದ್ಧಿಗಾಗಿ ದೀರ್ಘಾವಧಿಯ ದೃಷ್ಟಿಕೋನವನ್ನು ಒತ್ತಿ ಹೇಳುತ್ತೀರಿ. ಆದಾಗ್ಯೂ, ಈ ದೃಷ್ಟಿಕೋನವನ್ನು ಕಾರ್ಯಗತಗೊಳಿಸಲು ನಿಮ್ಮ ಪಕ್ಷದ ಸರ್ಕಾರವು 2047ರವರೆಗೆ ಅಧಿಕಾರದಲ್ಲಿ ಮುಂದುವರೆಯುತ್ತದೆಯೇ?**

2047ರಲ್ಲಿ ಯಾರ ಸರ್ಕಾರ ಇರುತ್ತೆ ಅನ್ನೋದನ್ನು ಜನರೇ ತೀರ್ಮಾನಿಸುತ್ತಾರೆ, ತೀರ್ಮಾನಿಸಲಿ. ಆದರೆ, ಜನರ ಸಹಭಾಗಿತ್ವದೊಂದಿಗೆ, ನಾವು 2047ಕ್ಕಾಗಿ ವಿಷನ್ ರೂಪಿಸಿದ್ದೇವೆ. ಈ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಅಡಿಪಾಯ ಹಾಕಲು, ನಾವು ಮುಂದಿನ 5 ವರ್ಷಗಳವರೆಗೆ ಸ್ಪಷ್ಟ ಮಾರ್ಗಸೂಚಿಯನ್ನು ನೀಡಿದ್ದೇವೆ. ಮುಂದಿನ ಸರ್ಕಾರದ ಮೊದಲ 100 ದಿನಗಳ ಕೆಲಸಗಳನ್ನು ಪ್ರಾರಂಭಿಸಲು ಈಗಾಗಲೇ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿದ್ದೇವೆ. ಕಳೆದ ಕೆಲವು ವರ್ಷಗಳಲ್ಲಿ ನಮ್ಮ ಎಲ್ಲ ಕೆಲಸಗಳು ವಿಕಸಿತ ಭಾರತವನ್ನು ರೂಪಿಸುವ ದಿಕ್ಕಿನತ್ತ ಮುನ್ನಡೆಯುತ್ತಿವೆ,

ಬ್ಯಾಂಕಿಂಗ್ ಸೌಲಭ್ಯಗಳಿಲ್ಲದ 50 ಕೋಟಿಗೂ ಹೆಚ್ಚು ಜನರಿಗೆ ಜನಧನ್ ಖಾತೆ ಮೂಲಕ ಬ್ಯಾಂಕಿಂಗ್ ವಲಯಕ್ಕೆ ತಂದಿದ್ದು, 12 ಕೋಟಿ ಶೌಚಗೃಹಗಳ ನಿರ್ಮಾಣ, 4 ಕೋಟಿಗೂ ಹೆಚ್ಚು ಮನೆಗಳನ್ನು ನಿರ್ಮಿಸುವುದರ ಮೂಲಕ ಬಡವರಿಗೆ ಸೂರು ಒದಗಿಸಿದ್ದು ಸೇರಿದಂತೆ ಹಲವು ಕೆಲಸಗಳಾಗಿವೆ. ನಾವು ಭಾರತದ ಇತಿಹಾಸದಲ್ಲಿ ಅತಿ ದೊಡ್ಡ ಮೂಲಸೌಕರ್ಯ ನಿರ್ಮಾಣ ಅಭಿಯಾನವನ್ನು ಮುನ್ನಡೆಸಿದ್ದೇವೆ. ಅಷ್ಟೇ ಅಲ್ಲ, ಉತ್ಪಾದನಾ ಕ್ರಾಂತಿಯನ್ನು ಮುನ್ನಡೆಸುತ್ತಿದ್ದೇವೆ. ಭಾರತದಿಂದ ರಫ್ತು ಹೆಚ್ಚುತ್ತಿದೆ. ಕಳೆದ ದಶಕದಲ್ಲಿ ನಮ್ಮ ರಕ್ಷಣಾ ರಫ್ತು 20 ಪಟ್ಟು ಹೆಚ್ಚಾಗಿದೆ, ಭಾರತವೀಗ ವಿಶ್ವದ 2ನೇ ಅತಿ ದೊಡ್ಡ ಮೊಬೈಲ್ ತಯಾರಕ ಮತ್ತು 3ನೇ ಅತಿದೊಡ್ಡ ಸ್ಟಾರ್ಟ್‌ಅಪ್ ಇಕೋಸಿಸ್ಟಮ್‌ನ್ನು ಹೊಂದಿದೆ. 2047ರ ವೇಳೆಗೆ ವಿಕಸಿತ ಭಾರತದ ಗುರಿ ಸಾಧಿಸಲು ಈ ಬಹುವಲಯ ಪ್ರಯತ್ನಗಳು ನಡೆಯುತ್ತಿವೆ.

**ಇತ್ತೀಚೆಗೆ ಪರಿಚಯಿಸಲಾದ 'ಮೋದಿ ಕಿ ಗ್ಯಾರಂಟಿ' ಕರ್ನಾಟಕದಲ್ಲಿ ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳನ್ನು ಪ್ರತಿಧ್ವನಿಸುತ್ತದೆ, ಆದರೆ ಉಚಿತ ವಿದ್ಯುತ್ ಮತ್ತು ಹಣದಂತಹ ಗ್ಯಾರಂಟಿಗಳನ್ನು ಒದಗಿಸುವುದರ ಸಂಭಾವ್ಯ ಅಪಾಯಗಳನ್ನು ನೀವು ಒಪ್ಪಿಕೊಳ್ಳುತ್ತೀರಾ? ಇದು ರಾಜ್ಯ ಅಥವಾ ದೇಶದ ಆರ್ಥಿಕತೆಯ ಮೇಲೆ ಪರಿಣಾಮ ಬೀರಬಹುದೇ ಮತ್ತು ಉತ್ತಮ ಆಡಳಿತದ ಮೇಲೆ ಅವಲಂಬನೆಯನ್ನು ಉತ್ತೇಜಿಸಬಹುದೇ?**

ನಾವು ನೀಡಿದ ದೊಡ್ಡ ಭರವಸೆಗಳು ಯಾವುವು? ಜಮ್ಮು, ಕಾಶ್ಮೀರ ಮತ್ತು ಲಡಾಖ್‌ನಲ್ಲಿ 370ನೇ ವಿಧಿಯ ನಿಯಮವನ್ನು ಕೊನೆಗೊಳಿಸುವುದಾಗಿ ಭರವಸೆ ನೀಡಿದ್ದೆವು. ಇಂದು, ಅದನ್ನು ಸಾಕಾರಗೊಳಿಸಲಾಗಿದೆ. ಇದು ಮೋದಿ ಕಿ ಗ್ಯಾರಂಟಿ. ನಾವು ಶಾಂತಿಯುತವಾಗಿ ಮತ್ತು ಸಾಂವಿಧಾನಿಕವಾಗಿ ರಾಮಮಂದಿರ ವಿಷಯದಲ್ಲಿ ಪರಿಹಾರಕ್ಕಾಗಿ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದ್ದೆವು. ರಾಮ ಮಂದಿರ ನಿರ್ಮಾಣ ಪೂರ್ಣಗೊಂಡಿದೆ. ಇದು ಮೋದಿ ಕಿ ಗ್ಯಾರಂಟಿ. ಹಾಗಾಗಿ, 'ಮೋದಿ ಕಿ ಗ್ಯಾರಂಟಿ' ಎಂದರೆ ಜನರು ಗುರುತಿಸುತ್ತಾರೆ ಮತ್ತು ಬೆಂಬಲಿಸುತ್ತಾರೆ. ಏಕೆಂದರೆ ಅದು ನಂಬಿಕೆ ಮತ್ತು ಟ್ರ್ಯಾಕ್ ರೆಕಾರ್ಡ್ ಮೇಲೆ ಆಧಾರಿತವಾಗಿದೆ ಎಂಬುದು ಅವರಿಗೆ ತಿಳಿದಿದೆ. ಹಾಗಾಗಿಯೇ, 70 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲ ಜನರು ಆಯುಷ್ಮಾನ್ ಭಾರತ್ ವ್ಯಾಪ್ತಿಗೆ ಬರುತ್ತಾರೆ ಎಂದು ನಾನು ಹೇಳಿದಾಗ, ಅದು ಖಂಡಿತ ನೆರವೇರುತ್ತದೆ ಎಂಬ ವಿಶ್ವಾಸ ಜನರಲ್ಲಿದೆ. 80 ಕೋಟಿ ಜನರಿಗೆ ಇನ್ನೂ 5 ವರ್ಷಗಳವರೆಗೆ ಉಚಿತ ಆಹಾರಧಾನ್ಯ ಸಿಗುತ್ತದೆ ಎಂದು ನಾನು ಹೇಳಿದಾಗ, ಅದು ಈಡೇರುತ್ತದೆ ಎಂಬುದು ಜನರಿಗೆ ಖಚಿತವಾಗಿದೆ. 'ಮೋದಿ ಕಿ ಗ್ಯಾರಂಟಿ'ಯ ಈ ವಿಶ್ವಾಸಾರ್ಹತೆಯು ಹೇಗಾದರೂ ಮಾಡಿ ಅಧಿಕಾರಕ್ಕೆ ಬರಲು ಯತ್ನಿಸುವವರಿಗೆ ಮತ್ತು ಭರವಸೆಗಳನ್ನು ಹೇಗೆ ಪೂರೈಸಬೇಕು ಎಂಬುದು ತಿಳಿಯದಿದ್ದರೂ ಭರವಸೆಗಳನ್ನು ನೀಡುವವರಿಗಿಂತ ಬಹಳ ಭಿನ್ನವಾಗಿದೆ. ಇತ್ತೀಚಿನ ದಿನಗಳಲ್ಲಿ ಕರ್ನಾಟಕದ ಜನರ ಅನುಭವದಿಂದ ಇದು ಸ್ಪಷ್ಟವಾಗಿದೆ ಕಾಂಗ್ರೆಸ್‌ನ ಭರವಸೆಗಳಲ್ಲಿ ಅರ್ಥವಿಲ್ಲ. ಅವರು ಉಚಿತ ವಿದ್ಯುತ್ ನೀಡುವ ಬಗ್ಗೆ ದೊಡ್ಡ ಭರವಸೆ ನೀಡಿದರು, ಆದರೆ ವಿದ್ಯುತ್ ಕಡಿತವನ್ನು (ಪವರ್ ಕಟ್) ನೀಡಿದರು.

ಕಾಂಗ್ರೆಸ್ ರೈತರಿಗೆ ಭರವಸೆಗಳನ್ನೇನೋ ನೀಡಿತು. ಆದರೆ, ಕರ್ನಾಟಕ ಸರ್ಕಾರವು ಪಿಎಂ ಕಿಸಾನ್ ಜೊತೆಗೆ 55 ಲಕ್ಷಕ್ಕೂ ಹೆಚ್ಚು ರೈತರಿಗೆ ನೀಡುತ್ತಿದ್ದ ಹೆಚ್ಚುವರಿ ಹಣವನ್ನು ಕಡಿತಗೊಳಿಸಿತು. ಯುವಕರಿಗೆ ಸಹಾಯ ಮಾಡುವುದಾಗಿ ಭರವಸೆ ನೀಡಿ, ವಿದ್ಯಾರ್ಥಿವೇತನದಲ್ಲಿ ಕಡಿತ ಮಾಡಿದರು!

ಟೆಕ್ ಹಬ್ ಆದ ಬೆಂಗಳೂರನ್ನು ಟ್ಯಾಂಕರ್ ಹಬ್ ಆಗಿ ಬದಲಾಯಿಸಿದ್ದಾರೆ. ಭರವಸೆಗಳನ್ನು ಹೇಗೆ ಈಡೇರಿಸಲಾಗುವುದು ಎಂದು ಹೇಳಲು ಚುನಾವಣೆಗೂ ಮುನ್ನ ನಿರಾಕರಿಸಿದ ಅವರು, ಅಧಿಕಾರಕ್ಕೆ ಬಂದ ನಂತರ ಏನನ್ನು ಮಾಡುವುದಕ್ಕೂ ತಮ್ಮ ಬಳಿ ಹಣವಿಲ್ಲ ಎಂದು ಹೇಳುತ್ತಾರೆ.

**ದಕ್ಷಿಣದಲ್ಲಿ ಐಎನ್‌ಡಿಐಎ ಮೈತ್ರಿಕೂಟ ಬಲಿಷ್ಠವಾಗಿದೆ, ಇದು ಹೇಗೆ ಸಾಧ್ಯ?**

ಇಂಡಿ ಮೈತ್ರಿಕೂಟದಲ್ಲಿ ನಾಯಕನೂ ಇಲ್ಲ, ವಿಷನ್ ಮೊದಲೇ ಇಲ್ಲ. ನಾನು 2014ರಲ್ಲಿ ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿತವಾದಾಗ ನನಗೂ ಅನುಭವ ಇರಲಿಲ್ಲ. ಗುಜರಾತ್ ಮುಖ್ಯಮಂತ್ರಿಯಾಗಿ 13 ವರ್ಷ ಉತ್ತಮ ಸಾಧನೆ ಮಾಡಿದರೂ ಮೋದಿಗೆ ಸಂಸದನಾಗಿ ಕೆಲಸ ಮಾಡಿದ ಪಾರ್ಲಿಮೆಂಟ್ ಅನುಭವ ಇರಲಿಲ್ಲ. ಒಂದು ರಾಜ್ಯದ ಆಡಳಿತ ನಡೆಸಿ ಮಾತ್ರ ಗೊತ್ತಿರುವವನು ದೇಶವನ್ನು ಹೇಗೆ ನಡೆಸಬಲ್ಲ? ವಿದೇಶಾಂಗ ನೀತಿ, ಆರ್ಥಿಕತೆಯನ್ನು ಹೇಗೆ ನಿಭಾಯಿಸಬಲ್ಲ ಎಂಬ ಅನೇಕ ಪ್ರಶ್ನೆ, ಸಂದೇಹಗಳು ಇದ್ದವು. ಲೋಕತಂತ್ರದಲ್ಲಿ ಇದು ಸಹಜ ಕೂಡ. ಆದರೂ ದೇಶದ ಜನತೆ ರಾಷ್ಟ್ರವನ್ನು ಮುನ್ನಡೆಸುವ ಒಂದು ಅವಕಾಶ ಮಾಡಿಕೊಟ್ಟರು. ನಾನು ಅವರ ವಿಶ್ವಾಸಕ್ಕೆ ಚ್ಯುತಿ ಬಾರದಂತೆ ನಡೆದುಕೊಂಡಿದ್ದೇನೆ. ಹೀಗಾಗಿ ಜನ ನನ್ನ ಮೇಲೆ ಅಪಾರ ವಿಶ್ವಾಸ ಇಟ್ಟಿದ್ದಾರೆ. ಆದರೆ, ಇಂಡಿ ಮೈತ್ರಿಕೂಟದಲ್ಲಿ ಆಂತರಿಕ ಗುದ್ದಾಟ ಹಾಗೂ ವೈರುಧ್ಯಗಳು ಹೆಚ್ಚಿವೆ. ಕೇರಳದಲ್ಲಿ ಇಂಡಿ ಮೈತ್ರಿಕೂಟದ ಪಿಣರಾಯಿ ವಿಜಯನ್ ಅವರೇ ಅಮೇಥಿಯಿಂದ ವಯನಾಡಿಗೆ ಓಡಿ ಹೋಗಿರುವ ರಾಹುಲ್ ಗಾಂಧಿಯನ್ನು ಸೋಲಿಸಲು ಅಣಿಯಾಗಿದ್ದಾರೆ. ಕೇರಳ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಇಂಡಿ ಮೈತ್ರಿಕೂಟದ ಪಕ್ಷಗಳಲ್ಲಿ ಹೊಂದಾಣಿಕೆ ಇಲ್ಲ. ಮೈತ್ರಿಕೂಟದ ಪಕ್ಷಗಳೇ ಒಬ್ಬರನ್ನೊಬ್ಬರನ್ನು

ಸೋಲಿಸಲಿವೆ. ಹೀಗಾಗಿ ಎನ್‌ಡಿಎಗೆ ಈ ಬಾರಿ ಹೆಚ್ಚು ಸ್ಥಾನ ಗೆಲ್ಲುವ ಅವಕಾಶಗಳಿವೆ.

**ಕರ್ನಾಟಕಕ್ಕೆ ಅನುದಾನ ನೀಡುವಲ್ಲಿ ಕೇಂದ್ರ ಸರ್ಕಾರ ನಿರ್ಲಕ್ಷ್ಯ ಧೋರಣೆ ತಾಳಿದೆ ಎಂದು ಕಾಂಗ್ರೆಸ್ ಆರೋಪಿಸುತ್ತಿದೆ. ನಿಮ್ಮ ಉತ್ತರವೇನು?**

ಕರ್ನಾಟಕದಲ್ಲಿ ಮಕ್ಕಳಿಗೂ ಕೂಡ ರಾಷ್ಟ್ರಕವಿ ಕುವೆಂಪು ಅವರ ಬಗ್ಗೆ ಗೊತ್ತಿರುತ್ತದೆ. ಕುವೆಂಪು ಅವರ 'ಜಯಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ' ಎಂಬ ನಾಡಗೀತೆಯ ಆಶಯವನ್ನೇ ನಾವೂ ಅನುಸರಿಸುತ್ತಿದ್ದೇವೆ. ರಾಷ್ಟ್ರೀಯ ಪ್ರಗತಿಯ ಜತೆಜತೆಗೇ ಪ್ರಾದೇಶಿಕ ಅಭಿವೃದ್ಧಿಯ ವಿಷನ್ ನಮ್ಮದು. ಕೆಲ ಸಂಗತಿಗಳನ್ನು ನಾನು ಸ್ಪಷ್ಟಪಡಿಸುತ್ತೇನೆ. ಕಳೆದ 10 ವರ್ಷಗಳಲ್ಲಿ ಕರ್ನಾಟಕಕ್ಕೆ ಕೇಂದ್ರ ನೀಡುವ ಅನುದಾನ ಪ್ರಮಾಣ ಗಣನೀಯವಾಗಿ ಹೆಚ್ಚಿದೆ. 2004ರಿಂದ 2014ರವರೆಗಿನ ಕಾಂಗ್ರೆಸ್ ಅವಧಿಗೆ ಹೋಲಿಸಿದರೆ 2014ರಿಂದ 2024ರವರೆಗಿನ ಅವಧಿಯಲ್ಲಿ ಕರ್ನಾಟಕಕ್ಕೆ ತೆರಿಗೆ ವಿಕೇಂದ್ರೀಕರಣದಲ್ಲಿ ಶೇ. 273ರಷ್ಟು ಏರಿಕೆಯಾಗಿದೆ. ತೆರಿಗೆ ವಿಕೇಂದ್ರೀಕರಣ ಹೊರತುಪಡಿಸಿ ರಾಜ್ಯಕ್ಕೆ ನೀಡಲಾದ ಅನುದಾನ ಹಂಚಿಕೆಯಲ್ಲಿ 244% ಹೆಚ್ಚಳವಾಗಿದೆ. ಅಂದರೆ, ಕರ್ನಾಟಕಕ್ಕೆ ಕಾಂಗ್ರೆಸ್‌ಗಿಂತ ಬಿಜೆಪಿ ಸರ್ಕಾರ ಹೆಚ್ಚಿನ ಅನುದಾನ ಖಾತರಿಪಡಿಸಿದೆ ಎಂದಾಯಿತು. ಹಾಗೆಯೇ, ಕರ್ನಾಟಕದಲ್ಲಿ ಕೈಗೊಳ್ಳಲಾದ ಕೆಲಸದ ಮೇಲೂ ಗಮನಹರಿಸೋಣ. 4,900 ಕಿ.ಮೀ.ಗೂ ಹೆಚ್ಚು ಉದ್ದದ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ. ದಕ್ಷಿಣ ಭಾರತದ ಮೊದಲ ಕೈಗಾರಿಕಾ ಕಾರಿಡಾರ್ ರಾಜ್ಯದಲ್ಲಿದೆ. ಮೈಸೂರು ಬೆಂಗಳೂರು ನಡುವಿನ ಹೆದ್ದಾರಿ ಈ ಪ್ರದೇಶದ ಅಭಿವೃದ್ಧಿಗೆ ಹೊಸ ವೇಗ ನೀಡಿದೆ. ಕಲಬುರಗಿ ರಾಯಚೂರು ನಡುವೆ ಉತ್ತರ ಕರ್ನಾಟಕದ ಮೊದಲ ಆರು ಲೇನ್‌ಗಳ ಗ್ರೀನ್‌ಫೀಲ್ಡ್ ಹೆದ್ದಾರಿ ನಿರ್ಮಿಸಲು ಸುಮಾರು 5,500 ಕೋ.ರೂ. ಬಿಡುಗಡೆ ಮಾಡಿದ್ದೇವೆ. ರಾಜ್ಯದಲ್ಲಿ 7 ವಂದೇ ಭಾರತ್ ರೈಲುಗಳು ಓಡುತ್ತಿವೆ. ರಾಜ್ಯಕ್ಕೆ ರೈಲ್ವೆ ಹಂಚಿಕೆಯಲ್ಲಿ ಶೇ. 800ರಷ್ಟು ಹೆಚ್ಚಳವಾಗಿದೆ. ಈ ವರ್ಷ ಕರ್ನಾಟಕದಲ್ಲಿ ರೈಲ್ವೆ ಅಭಿವೃದ್ಧಿಗೆಂದು ಮೀಸಲಿಟ್ಟ ಹಣದ ಪ್ರಮಾಣ (7,500 ಕೋ.ರೂ.) 2009 ರಿಂದ 2014ರವರೆಗೆ ಮೀಸಲಿಟ್ಟ ಪ್ರಮಾಣಕ್ಕಿಂತ (835 ಕೋ.ರೂ.) 9 ಪಟ್ಟು ಹೆಚ್ಚು. ಬೆಂಗಳೂರು ಮೆಟ್ರೋ ವಿಸ್ತರಣೆಗೆ 21,800 ಕೋ.ರೂ. ಕೇಂದ್ರದಿಂದ ಹೂಡಿಕೆಯಾಗಿದೆ. ರಾಜ್ಯದ 7 ನಗರಗಳಿಗೆ ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ 3,500 ಕೋ.ರೂ. ಅನುಮೋದಿಸಲಾಗಿದೆ. 5 ವಿಮಾನ ನಿಲ್ದಾಣಗಳನ್ನು ಕಾರ್ಯಗತಗೊಳಿಸಲಾಗಿದೆ. ಧಾರವಾಡದಲ್ಲಿ ಐಐಟಿ ಉದ್ಘಾಟನೆಯಾಗಿದೆ. ಪಿಎಂ ಮಿತ್ರ ಮೆಗಾ ಟೆಕ್ಸ್‌ಟೈಲ್ಸ್ ಪಾರ್ಕ್‌ಗೆ ಯೋಜನೆ ರೂಪಿಸಲಾಗಿದೆ ಮತ್ತು ಏಷ್ಯಾದ ಅತಿ ದೊಡ್ಡ ಹೆಲಿಕಾಪ್ಟರ್ ಕಾರ್ಖಾನೆಯನ್ನು ತುಮಕೂರಿನಲ್ಲಿ ನಿರ್ಮಿಸಲಾಗುತ್ತಿದೆ. ಕೇಂದ್ರದ ಯೋಜನೆಗಳ ನೇರ ಪ್ರಯೋಜನಗಳನ್ನು ಪಡೆಯುವ ಕೋಟಿಗಟ್ಟಲೆ ಫಲಾನುಭವಿಗಳ ಬಗ್ಗೆ ಹೇಳಲು ಸಮಯಾವಕಾಶ ಬಹಳ ಬೇಕಾಗಿರುವುದರಿಂದ, ಕಾಂಗ್ರೆಸ್ ಮಾಡುತ್ತಿರುವ ಆರೋಪಗಳಿಗೆ ನೈಜ ಕಾರಣಗಳನ್ನು ಅರ್ಥ ಮಾಡಿಕೊಳ್ಳಬೇಕು. ಅವರು ತಮ್ಮ ಪಕ್ಷದ ರಾಷ್ಟ್ರವ್ಯಾಪಿ ಚುನಾವಣಾ ನಿರ್ವಹಣೆಗೆ ಕರ್ನಾಟಕವನ್ನು ಎಟಿಎಂ ಮಾಡಿಕೊಂಡಿದ್ದಾರೆ.

**ದಕ್ಷಿಣ ಭಾರತದಲ್ಲಿ ಹೆಚ್ಚು ಸೀಟುಗಳನ್ನು ಗೆಲ್ಲಲು ನೀವು ಭಾರಿ ಪ್ರಯತ್ನಪಡುತ್ತಿದ್ದೀರಿ. ಬಿಜೆಪಿಗೆ ದಕ್ಷಿಣಭಾರತ ಮತ ಹಾಕಲಿದೆ ಎಂದು ನಿಮಗನಿಸುತ್ತದೆಯೇ?**

ನಿಮ್ಮಲ್ಲಿ ಒಂದು ಸರಳ ಪ್ರಶ್ನೆ ಕೇಳುತ್ತೇನೆ. 2019ರ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣ ಭಾರತದಿಂದ ಅತಿ ಹೆಚ್ಚು ಸಂಸದರು ಯಾವ ಪಕ್ಷದಿಂದ ಆಯ್ಕೆಯಾದರು? ಉತ್ತರ ಬಿಜೆಪಿ ಎಂಬುದು ನಿಮಗೆ ಗೊತ್ತಿದೆ. 2019ರಲ್ಲಿ ಕರ್ನಾಟಕದಲ್ಲಿ ಹೆಚ್ಚು ಸೀಟು ಪಡೆದ ಪಕ್ಷ ಯಾವುದು? ನಾವು ಕರ್ನಾಟಕದಲ್ಲಿ ಹಲವು ಚುನಾವಣೆಗಳನ್ನು ಗೆದ್ದಿದ್ದೇವೆ ಮತ್ತು ಉತ್ತಮ ಸರ್ಕಾರವನ್ನೂ ನೀಡಿದ್ದೇವೆ. ದೇಶಾದ್ಯಂತ ಪಕ್ಷ ಬಲವಾಗಿದೆ. ದಕ್ಷಿಣದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಸೀಟುಗಳನ್ನು ಗೆಲ್ಲಲಿದ್ದೇವೆ.

**ಜಗಜ್ಯೋತಿ ಬಸವೇಶ್ವರರ ಬಗ್ಗೆ ನೀವು ಸದಾ ಮೆಚ್ಚುಗೆಯ ಮಾತುಗಳನ್ನು ಆಡುತ್ತಿರುತ್ತೀರಿ. ಬಸವಣ್ಣನವರ ಬಗ್ಗೆ ನಿಮಗೆ ಇಷ್ಟವಾಗುವ ಸಂಗತಿ ಏನು?**

ರಾಜ ಮಹಾರಾಜರು, ರಾಣಿಯರು, ಸಂತರು, ವೀರ ಮಹಿಳೆಯರು, ಸ್ವಾತಂತ್ರ್ಯ ಹೋರಾಟಗಾರರು ಸೇರಿದಂತೆ ಮಹಾನ್ ಸಾಧಕರನ್ನು ಕಂಡ ಅದ್ಭುತ ನಾಡು ಈ ಕರ್ನಾಟಕ. ದೇಶದ ಪ್ರತಿ ಪ್ರದೇಶದಲ್ಲೂ ಕಾಲಕಾಲಕ್ಕೆ ಮಹಾನ್ ಚೇತನಗಳು ಹುಟ್ಟಿ, ಸಮಾಜದ ಅಂಕುಡೊಂಕುಗಳನ್ನು ಸರಿಪಡಿಸಿ, ನಮ್ಮೆಲ್ಲರಿಗೆ ಸನ್ಮಾರ್ಗ ತೋರಿಸುತ್ತ ಬಂದಿರುವುದು ವಿಶೇಷವೇ ಸರಿ. ಅಂಥವರಲ್ಲಿ ಬಸವಣ್ಣನವರು ಅಗ್ರಗಣ್ಯರು. ಅವರ ಅನೇಕ ಚಿಂತನೆ, ಆದರ್ಶಗಳು ಸಮಯಕ್ಕಿಂತ ಬಹಳ ಮುಂದಿದ್ದವು. 13ನೇ ಶತಮಾನದಲ್ಲಿ ಸಿದ್ಧವಾದ ಮ್ಯಾಗ್ನಾಕಾರ್ಟಾ ಪ್ರಜಾಪ್ರಭುತ್ವಕ್ಕೆ ಅಡಿಪಾಯ ಹಾಕಿತು ಎಂದು ಹೇಳಲಾಗುತ್ತದೆ. ಅದು ಮಹತ್ವದ ಮೈಲಿಗಲ್ಲು ಕೂಡ ಹೌದು. ಆದರೆ, ಅನುಭವ ಮಂಟಪ ಎಂಬ ಪ್ರಜಾಸತ್ತಾತ್ಮಕ ವೇದಿಕೆಯನ್ನು ಬಸವೇಶ್ವರರು 12ನೇ ಶತಮಾನದಲ್ಲಿಯೇ (ಮ್ಯಾಗ್ನಾಕಾರ್ಟಾಕ್ಕಿಂತ ಮುನ್ನ) ಸ್ಥಾಪಿಸಿದ್ದರು. ಇದನ್ನು 2015ರಲ್ಲಿ ಲಂಡನ್‌ಗೆ ಭೇಟಿ ನೀಡಿ, ಬಸವೇಶ್ವರರ ಪ್ರತಿಮೆ ಅನಾವರಣಗೊಳಿಸಿದ್ದ ವೇಳೆ ಅಂದಿನ ಬ್ರಿಟನ್ ಪ್ರಧಾನಿಯವರಿಗೂ

ತಿಳಿಸಿದ್ದೆ. ಭಾರತದಲ್ಲಿ ನಡೆದ, ಜಾಗತಿಕ ನಾಯಕರು ಪಾಲ್ಗೊಂಡಿದ್ದ, ಜಿ20 ಸಮಾವೇಶದ ಸ್ಥಳಕ್ಕೂ ಭಾರತ ಮಂಟಪ ಎಂದು ನಾಮಕರಣ ಮಾಡಿ, ಇಡೀ ಪ್ರಪಂಚದ ಮುಂದೆ ಗುರು ಬಸವೇಶ್ವರರಿಗೆ ಗೌರವ ಸಲ್ಲಿಸಿದ್ದೆವು. ಈ ಮೂಲಕ ಅವರ ಮಹತ್ವವನ್ನು ನಾವು ಎತ್ತಿ ತೋರಿಸಿದ್ದೇವೆ. ಇದಲ್ಲದೆ, ಮಹಿಳಾ ಸಬಲೀಕರಣ, ಸಾಮಾಜಿಕ ಸಮಾನತೆ ಕುರಿತು ಅವರ ಚಿಂತನೆಗಳು ನಮ್ಮ ಆಡಳಿತಕ್ಕೂ ಸ್ಫೂರ್ತಿಯಾಗಿವೆ.

**'ಪ್ರತಿ ಲೋಕಸಭಾ ಕ್ಷೇತ್ರದಲ್ಲೂ ಮೋದಿ ಅಭ್ಯರ್ಥಿಯಾಗಿರುವಂತೆ ತೋರುತ್ತಿದೆ' ಎಂಬುದು ಕೆಲವರ ವಾದ. ಬಿಜೆಪಿಯು ಚುನಾವಣೆಯಲ್ಲಿ ನಿಮ್ಮ ಜನಪ್ರಿಯತೆಯ ಮೇಲೆ ಹೆಚ್ಚು ಅವಲಂಬಿತವಾಗಿದೆ, ಇದು ಸ್ಥಳೀಯ ಸಮಸ್ಯೆಗಳು ಮತ್ತು ವೈಯಕ್ತಿಕ ಸಂಸದರ ಸಾಧನೆಗಳನ್ನು ಗೌಣವಾಗಿಸುತ್ತದೆಯೇ? ಪಕ್ಷ ಮತ್ತು ಅಭ್ಯರ್ಥಿಗಳು ನಿಮ್ಮನ್ನು ಅತಿಯಾಗಿ ಅವಲಂಬಿಸಿದ್ದಾರೆ ಎಂದು ನಿಮಗೆ ಅನಿಸುವುದಿಲ್ಲವೇ?**

ನರೇಂದ್ರ ಮೋದಿ ಇರುವುದು ಬಿಜೆಪಿಯಿಂದ. ಬಿಜೆಪಿ ಇಲ್ಲದೆ ಮೋದಿ ಇಲ್ಲ. ನಮ್ಮದು ಕೇಡರ್ ಆಧಾರಿತ ಪಕ್ಷ, ನನ್ನಂತಹ ಸಾಮಾನ್ಯ ಕಾರ್ಯಕರ್ತರಿಗೂ ಬೆಳೆಯಲು ಅವಕಾಶವಿದೆ. ನಾನು ಪನ್ನಾ ಪ್ರಮುಖನಾಗಿರಲಿ ಅಥವಾ ಪ್ರಧಾನಿಯಾಗಿರಲಿ, ನಾನು ಪಂಚಾಯತ್‌ನಲ್ಲಿರಲಿ ಅಥವಾ ಸಂಸತ್ತಿನಲ್ಲಿರಲಿ, ಪಕ್ಷದ ನಿರ್ದೇಶನ ನನ್ನ ನಿರ್ದೇಶನವಾಗಿದೆ. ಪ್ರತಿ ಕ್ಷೇತ್ರದಲ್ಲೂ ಮತದಾರರ ಮುಂದೆ ಸರಳ ಮತ್ತು ಸ್ಪಷ್ಟವಾದ ಆಯ್ಕೆ ಇದೆ. ಎನ್‌ಡಿಎ ಅಭ್ಯರ್ಥಿಗೆ ಮತ ಹಾಕಿದರೆ ಮೋದಿ ಕಿ ಗ್ಯಾರಂಟಿಗೆ ಮತ ಹಾಕುತ್ತಿದ್ದೇವೆ ಎಂಬ ಭಾವನೆ ಜನರಲ್ಲಿರುತ್ತದೆ. ಜನರ ಸಮಸ್ಯೆಗಳು ಮತ್ತು ಆಕಾಂಕ್ಷೆಗಳ ವಿಷಯದಲ್ಲಿ ಸ್ಥಳೀಯ ಅಂಶಗಳು ಮುಖ್ಯವಾಗುತ್ತವೆ. ಅದಕ್ಕಾಗಿಯೇ, ನೀವು ನಮ್ಮ ಪ್ರಣಾಳಿಕೆಯನ್ನು ನೋಡಿದರೆ, ನಾವು ಹೇಳಿರುವ ಎಲ್ಲವನ್ನೂ ಸ್ಥಳೀಯ ಆಕಾಂಕ್ಷೆಗಳ ಮೇಲೆ ಕೇಂದ್ರೀಕರಿಸಿರುವುದನ್ನು ಸ್ಪಷ್ಟವಾಗಿ ಕಂಡುಕೊಳ್ಳಬಹುದು. ಉದಾಹರಣೆಗೆ, ನಾವು 'ಸ್ಥಳೀಯ ಭಾಷೆಗಳನ್ನು ಉತ್ತೇಜಿಸುತ್ತೇವೆ' ಎಂದು ಹೇಳಿದಾಗ ಅದು ಕನ್ನಡದ ಸಬಲೀಕರಣವಾಗಿದೆ. ಪರಂಪರೆ ಮತ್ತು ಪ್ರವಾಸೋದ್ಯಮವನ್ನು ಬಲಪಡಿಸುತ್ತೇವೆ ಎಂದಾಗ ಕರ್ನಾಟಕದ ಹಂಪಿ, ಬಾದಾಮಿಯಂತಹ ಸ್ಥಳಗಳ ಜನರಿಗೆ ಹೆಚ್ಚಿನ ಅವಕಾಶಗಳು ಸಿಗುತ್ತವೆ. ನಮ್ಮ ದೃಷ್ಟಿ ಪ್ರತಿಯೊಂದು ಪ್ರದೇಶಕ್ಕೆ ಸೇರಿದ ಪ್ರತಿಯೊಬ್ಬರಿಗೂ ಆಗಿದೆ. ಕರ್ನಾಟಕ ಮತ್ತು ಇತರ ಪ್ರದೇಶಗಳ ಜನರು ಸ್ಥಳೀಯ ಆಕಾಂಕ್ಷೆಗಳು ಮತ್ತು ರಾಷ್ಟ್ರೀಯ ಪ್ರಗತಿಯನ್ನು ಪರಸ್ಪರ ಪೂರಕವಾಗಿ ನೋಡುತ್ತಾರೆ. ಕರ್ನಾಟಕದ ಅಭಿವೃದ್ಧಿಯಿಂದಲೇ ಭಾರತದ ಅಭಿವೃದ್ಧಿ ಎಂಬ ನಮ್ಮ ದೃಷ್ಟಿಯನ್ನು ಅವರು ಅರ್ಥ ಮಾಡಿಕೊಳ್ಳುತ್ತಾರೆ.

**ಬಿಜೆಪಿಯ ಭ್ರಷ್ಟಾಚಾರ ವಿರೋಧಿ ಪ್ರಯತ್ನಗಳು ಕೇವಲ ವಿರೋಧ ಪಕ್ಷಗಳನ್ನು ಗುರಿಯಾಗಿಸಿಕೊಂಡಿವೆ ಎಂಬ ಆರೋಪಗಳಿವೆ. ಕೆಲವು ಬಿಜೆಪಿ ನಾಯಕರು ಮತ್ತು ಇತ್ತೀಚೆಗೆ ಬಿಜೆಪಿಗೆ ಸೇರ್ಪಡೆಗೊಂಡ ನಾಯಕರು ಭ್ರಷ್ಟಾಚಾರದ ಗುರುತರ ಆಪಾದನೆಗಳನ್ನು ಹೊಂದಿದ್ದಾರೆ. ಬಿಜೆಪಿಗೆ ಬಂದ ಮೇಲೆ ಇವರ ಮೇಲಿನ ಭ್ರಷ್ಟಾಚಾರದ ಆರೋಪಗಳು ಗೌಣವಾಗುತ್ತವೆ ಎಂಬ ಟೀಕೆಗಳಿವೆ. ಇದಕ್ಕೆ ಏನು ಹೇಳುತ್ತೀರಿ?**

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಎಎಪಿ ವಿರುದ್ಧ ಕಾಂಗ್ರೆಸ್ ಸರಣಿ ಪತ್ರಿಕಾಗೋಷ್ಠಿಗಳನ್ನು ನಡೆಸುತ್ತಿತ್ತು. ಆದರೆ ಈ ಹಗರಣದಲ್ಲಿ ತನಿಖಾ ಸಂಸ್ಥೆ ಕಾನೂನು ಮತ್ತು ನ್ಯಾಯಾಲಯಗಳ ಪ್ರಕಾರ ಕ್ರಮ ಕೈಗೊಂಡಾಗ ಅವರು ಈಗ ಬೇರೆ ರಾಗ ತೆಗೆದಿದ್ದಾರೆ. ಅದೇ ರೀತಿ, ಕೆಲವು ದಿನಗಳ ಹಿಂದೆ, ಕಾಂಗ್ರೆಸ್‌ನ ಪ್ರಮುಖ ರಾಜವಂಶದ ನಾಯಕರೊಬ್ಬರು ಕಾಂಗ್ರೆಸ್ ಮುಖ್ಯಮಂತ್ರಿ ಭ್ರಷ್ಟ ಸರ್ಕಾರವನ್ನು ನಡೆಸುತ್ತಿದ್ದಾರೆ ಎಂದು ಆರೋಪಿಸಿದರು. ಆದರೆ ಈಗಾಗಲೇ ನಡೆಯುತ್ತಿರುವ ತನಿಖೆಗಳು ಏನಾದರೂ ಕ್ರಮಕ್ಕೆ ಕಾರಣವಾದರೆ, ಅದೇ ಕಾಂಗ್ರೆಸ್ ನಾಯಕರು ವಿಭಿನ್ನ ರಾಗ ಹಾಡುತ್ತಾರೆ. ತನಿಖಾ ಸಂಸ್ಥೆಗಳು ಯಾವುದೇ ತಾರತಮ್ಯವಿಲ್ಲದೆ ಕಾನೂನಿನ ಪ್ರಕಾರ ಎಲ್ಲ ಪ್ರಕರಣಗಳ ತನಿಖೆ ನಡೆಸುತ್ತಿವೆ. ರಾಜಕೀಯ ಸಂಬಂಧದಿಂದಾಗಿ ಯಾವುದೇ ಆರೋಪಿಗಳ ವಿರುದ್ಧದ ಒಂದೇ ಒಂದು ಪ್ರಕರಣವನ್ನು ಮುಚ್ಚಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಜಾರಿ ನಿರ್ದೇಶನಾಲಯ (ಇ.ಡಿ.) ಅಡಿಯಲ್ಲಿರುವ ಎಲ್ಲ ಪ್ರಕರಣಗಳ ಪೈಕಿ ಕೇವಲ ಶೇಕಡ 3ರಷ್ಟು ಪ್ರಕರಣಗಳು ರಾಜಕಾರಣಿಗಳ ವಿರುದ್ಧ ಮತ್ತು ಶೇಕಡ 97 ಪ್ರಕರಣಗಳು ರಾಜಕೀಯೇತರ ವ್ಯಕ್ತಿಗಳ ವಿರುದ್ಧ ಇವೆ ಎಂದು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ಇ.ಡಿ. ತನ್ನ ಕೆಲಸವನ್ನು ಸ್ವತಂತ್ರವಾಗಿ ಮಾಡಲು ಅವಕಾಶ ನೀಡಬೇಕು. 2014ರ ಮೊದಲು, ಇ.ಡಿ. ಕೇವಲ 5,000 ಕೋ.ರೂ.ಗಳನ್ನು ವಶಪಡಿಸಿಕೊಂಡಿತ್ತು. ಆದರೆ ನಮ್ಮ ಸರ್ಕಾರದ ಅವಧಿಯಲ್ಲಿ 1.2 ಲಕ್ಷ ಕೋ.ರೂ. ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಲಾಗಿದೆ.

2014ರ ಮೊದಲು, ಇ.ಡಿ. ದೇಶಾದ್ಯಂತ 34 ಲಕ್ಷ ರೂ. ನಗದು ವಶಪಡಿಸಿಕೊಂಡಿದ್ದರೆ, ಕಳೆದ ಹತ್ತು ವರ್ಷಗಳಲ್ಲಿ ಅದು 2,200 ಕೋ.ರೂ. ನಗದು ವಶಪಡಿಸಿಕೊಂಡಿದೆ. ಯಾವುದೇ ಭ್ರಷ್ಟರನ್ನು ಬಿಡುವುದಿಲ್ಲ ಎಂದು ನಾನು ದೇಶದ ಜನರಿಗೆ ಭರವಸೆ ನೀಡುತ್ತೇನೆ; ಇದು ಮೋದಿ ಕಿ ಗ್ಯಾರಂಟಿ.

**ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿರುವುದರಿಂದ ಕರ್ನಾಟಕದ ಮಟ್ಟಿಗೆ ಬಿಜೆಪಿ ಹಿನ್ನಡೆಯ ಹಾದಿಯಲ್ಲಿದೆ ಎಂದು ನಿಮಗೆ ಅನಿಸುವುದಿಲ್ಲವೇ?**

ಕಳೆದ ಎರಡು ಲೋಕಸಭಾ ಚುನಾವಣೆಗಳ ಇತಿಹಾಸವನ್ನು ಒಮ್ಮೆ ನೋಡೋಣ. 2014ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿತ್ತು.

ರಾಜ್ಯದಲ್ಲಿ ಬಿಜೆಪಿ ಹೆಚ್ಚು ಲೋಕಸಭೆ ಸೀಟುಗಳನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ಹಲವರು ಹೇಳಿದ್ದರು. ಆದರೆ, ಕರ್ನಾಟಕದ ಜನರು ನಮಗೆ ಆಶೀರ್ವಾದ ಮಾಡಿದರು. ನಂತರ, ಅವರ ನಂಬಿಕೆಯನ್ನು ಸಾಕಷ್ಟು ಅಭಿವೃದ್ಧಿ ಕಾರ್ಯ ಮತ್ತು ಪ್ರಗತಿಯ ಮೂಲಕ ಉಳಿಸಿಕೊಂಡೆವು. 2019ರಲ್ಲೂ ರಾಜ್ಯದಲ್ಲಿ ಬಿಜೆಪಿಯೇತರ ಸರ್ಕಾರವಿತ್ತು. ಆಗಲೂ, 2014ನ್ನು ಮೀರಿಸುವ ಜನಾದೇಶ ನಮ್ಮ ಪಕ್ಷಕ್ಕೆ ಬಂದಿತು. 2024ರಲ್ಲೂ ಕಾಂಗ್ರೆಸ್ ಸರ್ಕಾರವಿದೆ. ದೇಶದ ಭವಿಷ್ಯದ ದೂರದೃಷ್ಟಿ ಹಾಗೂ ಕಲ್ಯಾಣ ಕಾರ್ಯಕ್ರಮಗಳ ಪಟ್ಟಿಯನ್ನು ಜನರ ಮುಂದಿಟ್ಟಿದ್ದೇವೆ. ಹೀಗಾಗಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿರುವುದು ನಮ್ಮ ಪಕ್ಷಕ್ಕೆ ಯಾವುದೇ ಹಾನಿ ಮಾಡುವುದಿಲ್ಲ. ಕರ್ನಾಟಕ 'ಮೋದಿ ಗ್ಯಾರಂಟಿ'ಯಲ್ಲಿ ನಂಬಿಕೆ ಇಟ್ಟಿದೆ. ಇದಲ್ಲದೆ, ಕರ್ನಾಟಕದ ಜನರು ಕಾಂಗ್ರೆಸ್ ಬಗ್ಗೆ ಹತಾಶರಾಗಿದ್ದಾರೆ. ಕಾಂಗ್ರೆಸ್ ಎಂತಹ ಭಯಾನಕ ವಾತಾವರಣ ಸೃಷ್ಟಿಸಿದೆ ಎನ್ನುವುದಕ್ಕೆ ಹುಬ್ಬಳ್ಳಿಯ ಕಾಲೇಜಿನ ಹೆಣ್ಣು ಮಗಳ ಪ್ರಕರಣವೇ ಸಾಕ್ಷಿ. ಕಾಂಗ್ರೆಸ್ಸಿನ ತುಷ್ಟೀಕರಣ ರಾಜಕೀಯದಿಂದ ಸಮಾಜವಿರೋಧಿಗಳು ಸಾಮಾನ್ಯರ ಮೇಲೆ ದಾಳಿ ಮಾಡುತ್ತಿರುವ ಸುದ್ದಿಗಳು ಬರುತ್ತಲೇ ಇವೆ. ರಾಜ್ಯದಲ್ಲಿ ಭ್ರಷ್ಟಾಚಾರ, ದುರಾಡಳಿತ ಉತ್ತುಂಗಕ್ಕೇರಿದೆ. ದ್ರೋಹ ಬಗೆದಿರುವ ಕಾಂಗ್ರೆಸ್‌ಗೆ ತಕ್ಕ ಶಾಸ್ತಿ ಮಾಡುವ ಮನಸ್ಥಿತಿಯಲ್ಲಿ ಜನರಿದ್ದಾರೆ.

**ಕರ್ನಾಟಕದ ಜನರಿಗೆ ನಿಮ್ಮ ಸಂದೇಶವೇನು? ರಾಜ್ಯದ ಬಗ್ಗೆ ನಿಮ್ಮ ವಿಷನ್ ಏನು?**

ಪ್ರಗತಿಯ ಜತೆಗೆ ನಮ್ಮ ಸಂಸ್ಕೃತಿಗೆ ಹೊಸ ಚೈತನ್ಯ ನೀಡುವಲ್ಲಿ ಒಂದು ಸರ್ಕಾರವಾಗಿ ನಾವು ಕೆಲಸ ಮಾಡುತ್ತಿದ್ದೇವೆ. ಇದು ಕರ್ನಾಟಕದ ಪ್ರಕೃತಿ, ಸಂಸ್ಕೃತಿ, ಸಂಪ್ರದಾಯ, ತಂತ್ರಜ್ಞಾನ, ಆಧುನಿಕತೆ, ಆಧ್ಯಾತ್ಮದ ಆತ್ಮದೊಂದಿಗೆ ಹೊಂದಿಕೆಯಾಗುತ್ತದೆ. ಬಾದಾಮಿಯ ಐತಿಹಾಸಿಕ ಅದ್ಭುತಗಳಾಗಲಿ ಅಥವಾ ಬೆಂಗಳೂರಿನ ಸಾಫ್ಟ್‌ವೇರ್ ಕೇಂದ್ರವಾಗಿರಲಿ, ವಿಶ್ವಕ್ಕೆ ಕರ್ನಾಟಕದ ಕೊಡುಗೆ ದೊಡ್ಡದಿದೆ. ಕಳೆದ 10 ವರ್ಷಗಳಲ್ಲಿ ನಮ್ಮ ಆಡಳಿತ ನೀತಿಗಳ ಪರಿಣಾಮದಿಂದಲೇ ರಾಜ್ಯದಲ್ಲಿ ಹೂಡಿಕೆ, ಮೂಲಸೌಕರ್ಯ ಹೆಚ್ಚಾಗಿ ಅಭಿವೃದ್ಧಿಯೂ ವೇಗದಲ್ಲಿ ಸಾಗುತ್ತಿದೆ. ಕೇಂದ್ರದಲ್ಲಿ ಸ್ಥಿರ, ಬಲಿಷ್ಠ ಸರ್ಕಾರವಿರುವುದರಿಂದ ಇದು ಸಾಧ್ಯವಾಗಿದೆ. ಸ್ಪಷ್ಟ ಬಹುಮತ ಇರುವ ಸುಭದ್ರ ಸರ್ಕಾರ ಅಧಿಕಾರಕ್ಕೆ ಬಂದರೆ ಆ ಸರ್ಕಾರ ತನ್ನ ಅಸ್ತಿತ್ವದ ಬಗ್ಗೆ ಚಿಂತೆ ಮಾಡದೇ ಜನಕಲ್ಯಾಣಕ್ಕಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಇದಲ್ಲದೆ, ಇದು ಬಡವರು, ನಿರ್ಲಕ್ಷ್ಯಕ್ಕೊಳಗಾದವರ ರಕ್ಷಣೆಗಾಗಿ ಇರುವ ಸರ್ಕಾರ. ಬೆಳವಣಿಗೆಯ ಪ್ರಯೋಜನಗಳು ರಾಜ್ಯದ ಅನೇಕ ಪ್ರದೇಶಗಳಿಗೆ ಇನ್ನೂ ಸಂಪೂರ್ಣವಾಗಿ ತಲುಪಿಲ್ಲ ಎನ್ನುವುದು ನಮಗೆ ತಿಳಿದಿದೆ. ಅಂತಹ ಪ್ರದೇಶಗಳಿಗಾಗಿ ನಾವು ಅನೇಕ ಯೋಜನೆಗಳನ್ನು ಪ್ರಾರಂಭಿಸಿದ್ದೇವೆ ಮತ್ತು ಆ ಪ್ರದೇಶಗಳನ್ನೂ ಪ್ರಗತಿಯ ಹಾದಿಯಲ್ಲಿ ಕೊಂಡೊಯ್ಯಲಿದ್ದೇವೆ. ಕರ್ನಾಟಕದ ಜನರ ಆಶೀರ್ವಾದ ಜನ ಕಲ್ಯಾಣಕ್ಕಾಗಿ ಇನ್ನೂ ಹೆಚ್ಚಿನ ಯೋಜನೆಗಳನ್ನು ಹೊರತರಲು ಮತ್ತು ಅಸ್ತಿತ್ವದಲ್ಲಿರುವ ಯೋಜನೆಗಳನ್ನು ಬಲಪಡಿಸಲು ನಮಗೆ ಸಹಾಯ ಮಾಡುತ್ತದೆ. ವಿಕಸಿತ ಭಾರತಕ್ಕಾಗಿ 'ನಮ್ಮ ವಿಕಸಿತ ಕರ್ನಾಟಕ'ದ ವಿಷನ್‌ನ್ನು ಜನ ಬೆಂಬಲಿಸುತ್ತಾರೆ ಎಂಬ ನಂಬಿಕೆ ನನ್ನದು.

**ಕೃಪೆ – ವಿಜಯವಾಣಿ ದಿನಪತ್ರಿಕೆ**

# ಕಾರ್ಯಕರ್ತರ ಅನುಕರಣೀಯ ನಡೆ



ಕರ್ನಾಟಕದ ಬೆಳ್ತಂಗಡಿ ಸಹಸಿಲ್‌ನ ಉಜಿರೆ ಜಿಲ್ಲಾ ಪರಿಷತ್ತಿನ ಬಂಜಾರು ಮಾಲೆ ಮತಗಟ್ಟೆಯ ಕಾರ್ಯಕರ್ತರು ಒಟ್ಟಾಗಿ ಸೇರಿ ಗುಡ್ಡಗಾಡು ಪ್ರದೇಶದಲ್ಲಿ ಹತ್ತಾರು ಕಿಲೋಮೀಟರ್ ನಡೆದು ತಮ್ಮ ಮತಗಟ್ಟೆಯ ಪ್ರತಿಯೊಬ್ಬ ಮತದಾರರನ್ನು ಮತದಾನ ಮಾಡುವಂತೆ ಪ್ರೇರೇಪಿಸಿ 100% ಮತದಾನ ಮಾಡಿಸಿದ್ದಾರೆ. ಇಡೀ ದೇಶಕ್ಕೆ ಮಾದರಿಯಾಗಿರುವ ಈ ಕಾರ್ಯಕರ್ತರ ನಡೆ ನಿಜಕ್ಕೂ ಅನುಕರಣೀಯ ಹಾಗೂ ಪ್ರೇರಣೀಯ.

# ಜೈ ಶ್ರೀರಾಮ್... ನಮೋ ನಮೋ ಎಂದ ಕ್ಷಣಗಳು



ಶ್ರೀ ಲಕ್ಷ್ಮಣ ನಾಯ್ಕ ಡೊಂಬೆ ರವರು  ಅಯೋಧ್ಯಾ ಕರಸೇವಕರು. ಲಕ್ಷ್ಮಣ ಅವರು ವೃತ್ತಿಯಲ್ಲಿ ಮರಗೆಲಸಗಾರರು. ರಾಮ ಮಂದಿರ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು. ಬ್ರಹ್ಮಚಾರಿಗಳಾಗಿರುವ ಇವರು ಅಪ್ರತಿಮ ರಾಮಭಕ್ತ; ದೇಶಭಕ್ತ. ರಾಮಮಂದಿರ ನಿರ್ಮಾಣ ಆಗುವವರೆಗೂ ಕ್ಷೌರ ಮಾಡಿಸಲಾರೆ ಎಂಬ ವ್ರತದಾರಿಗಳು.



ಶ್ರೀಮತಿ ರಾಧಾ ಹರಿಜನ, ಶಿರಸಿ, ನಿವೃತ್ತ ಪೌರ ಕಾರ್ಮಿಕರು. ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ನೆಚ್ಚಿನ ಸ್ವಚ್ಛತಾ ಆಂದೋಲನದ ನಿತ್ಯ ನಿರಂತರ ಭಾಗ ಪೌರ ಕಾರ್ಮಿಕರು. ಕಾಯಕದಲ್ಲಿ ದೇವರನ್ನು ಕಾಣುವ ಇವರು ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದರು.



ಶ್ರೀಮತಿ ಮಾಹಿತಿ ಗೌಡ ಹಾಲಕ್ಕಿ, ಇವರು ಅಂಕೋಲಾದ ಬಸ್ ನಿಲ್ದಾಣದಲ್ಲಿ ಕಾಡು ಹಣ್ಣುಗಳನ್ನು ತಂದು ಮಾರಾಟ ಮಾಡಿ ಜೀವನ ನಿರ್ವಹಣೆ ಮಾಡುತ್ತಾರೆ. ತಮ್ಮ ಬಿಡುವಿನ ಸಮಯದಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೇ ಬಸ್ ನಿಲ್ದಾಣದ ಕಸವನ್ನು ಸ್ವಚ್ಛ ಮಾಡುವ ಪರಿಪಾಠ ಮುಂದುವರೆಸಿದ್ದಾರೆ.



ಶ್ರೀ ನಾಗೇಶ ಮಹಾಲೆ, ಅಂಕೋಲಾದಲ್ಲಿ ಇವರ ಕ್ಷೌರದ ಅಂಗಡಿ ಇದೆ. ಪ್ರಧಾನಿ ಶ್ರೀ ಮೋದಿ ಅವರ ಅಪ್ಪಟ ಅಭಿಮಾನಿ. ಕೈ ಮೇಲೆ ಅವರ ಹಚ್ಚೆ ಹಾಕಿಸಿಕೊಂಡಿದ್ದಾರೆ. ಯಾವುದೇ ಚುನಾವಣೆಯಲ್ಲಿ ಬಿಜೆಪಿ ಗೆದ್ದರೆ  ಆ ದಿನ ಇವರ ಕ್ಷೌರದ ಅಂಗಡಿಯಲ್ಲಿ ಎಲ್ಲರಿಗೂ ಉಚಿತ ಕ್ಷೌರ ಸೇವೆ.

ಹೀಗೆ ಇನ್ನೂ ಅನೇಕ ಎಲೆ ಮರೆಯ ಕಾಯಿಗಳ ಪರಿಚಯ ಮಾಡಿಸುವ ಪ್ರಯತ್ನವನ್ನು ಬಿಜೆಪಿಯ ವತಿಯಿಂದ ಮಾಡಲಾಗಿದೆ. ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಪ್ರತಿಯೊಬ್ಬರ ಪರಿಚಯ ಕೇಳಿ, ಸಾಧಕರ ವಿವರ ಪಡೆದಿದ್ದಾರೆ; ನಮೋ ನಮೋ ಎಂದು ವಂದಿಸಿದ್ದಾರೆ. ಇದಲ್ಲವೇ ಅಚ್ಛೆ ದಿನ್!?

## ಚರ್ಚೆಗೊಂದು ಸಾಲು...

## ಸೋಲು ಒಂದು ಸವಾಲು, ಗೆಲುವು ಒಂದು ಜವಾಬ್ದಾರಿ







# ರಾಜ್ಯಾಧ್ಯಕ್ಷರ ಪ್ರವಾಸ

**ಬೆಂಗಳೂರು :** ರಾಜ್ಯ ಬಿಜೆಪಿ ಸಾಮಾಜಿಕ ಜಾಲತಾಣ ಪ್ರಕೋಷ್ಠದ ವತಿಯಿಂದ ಆಯೋಜಿಸಿದ್ದ ಪ್ರಬುದ್ಧರ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಭಾಗವಹಿಸಿ ಭಾರತದ ರಾಜಕೀಯ ಇತಿಹಾಸದಲ್ಲಿ ಮಹತ್ವದ ಘಟ್ಟವಾಗಲಿರುವ 2024 ರ ಈ ಲೋಕಸಭಾ ಚುನಾವಣೆಯಲ್ಲಿ ಎಲ್ಲರ ಸಮರ್ಪಿತ ಸಹಭಾಗಿತ್ವ ಬಹುದೊಡ್ಡ ಕೊಡುಗೆಯಾಗಬೇಕೆಂಬುದು ನಮ್ಮ ನಿರೀಕ್ಷೆ ಮತ್ತು ಆಶಯವಾಗಿದ್ದು, ವಿಕಸಿತ ಭಾರತಕ್ಕಾಗಿ ಮತ್ತೊಮ್ಮೆ ಮೋದಿ ಸರ್ಕಾರ ಅಧಿಕಾರಕ್ಕೆ ತರುವ ಸಂಕಲ್ಪಕ್ಕೆ ಜೊತೆಯಾಗಿ ಶ್ರಮಿಸೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೇಂದ್ರ ಹಣ ಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್, ವಿಧಾನಪರಿಷತ್ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ, ಬಿಜೆಪಿ ರಾಜ್ಯ ಸಾಮಾಜಿಕ ಜಾಲತಾಣ ಪ್ರಕೋಷ್ಠದ ಸಂಚಾಲಕರಾದ ಶ್ರೀ ಪ್ರಶಾಂತ ಮಾಕನೂರು, ಸಹ ಸಂಚಾಲಕರಾದ ಶ್ರೀ ಪ್ರದೀಪ್ ಕಡಾಡಿ, ಶ್ರೀ ನರೇಂದ್ರ ಮೂರ್ತಿ, ಪಕ್ಷದ ಪದಾಧಿಕಾರಿಗಳು ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಆಯೋಜಿಸಿದ್ದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮದ ಉದ್ಘಾಟನೆಯನ್ನು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ನೆರವೇರಿಸಿದರು. ಶೋಷಿತ ಸಮುದಾಯಗಳ ಕಲ್ಯಾಣಕ್ಕಾಗಿ ತಮ್ಮ ಬದುಕನ್ನೇ ಮೀಸಲಿಟ್ಟು ಶ್ರೇಷ್ಠ ಸಂವಿಧಾನ ನೀಡಿದ ಡಾ. ಬಾಬಾ ಸಾಹೇಬರ ಅನನ್ಯ ಕೊಡುಗೆಗಳನ್ನು ಸ್ಮರಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ. ಟಿ. ರವಿ, ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರಾದ ಶ್ರೀ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಶರಣು ತಳ್ಳೀಕೆರೆ, ರಾಜ್ಯ ವಕ್ತಾರರಾದ ಶ್ರೀ ಹೆಚ್. ವೆಂಕಟೇಶ್ ದೊಡ್ಡೇರಿ ಮತ್ತು ಪ್ರಮುಖರು ಉಪಸ್ಥಿತರಿದ್ದರು.

ಬೆಂಗಳೂರು ಉತ್ತರ ಲೋಕಾಸಭಾ ಕ್ಷೇತ್ರದ ವೃಷಭಾವತಿ ನಗರ ಹಾಗೂ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಬೃಹತ್ ರೋಡ್ ಶೋ ಹಾಗೂ ಸಾರ್ವಜನಿಕ ಸಭೆಯಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಭಾಗವಹಿಸಿದ್ದರು. ಭಾರತವನ್ನು ವಿಶ್ವದಲ್ಲೇ ನಂ1 ಸ್ಥಾನಕ್ಕೆ ಕೊಂಡೊಯ್ಯುವ ಸಂಕಲ್ಪ ತೊಟ್ಟಿರುವ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ಕೈ ಬಲಪಡಿಸಲು ಎನ್‌ಡಿಎ ಅಭ್ಯರ್ಥಿ ಕು. ಶೋಭಾ ಕರಂದ್ಲಾಜೆ ಅವರನ್ನು ಪ್ರಚಂಡ ಮತಗಳ ಅಂತರಗಳಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಕೆ. ಗೋಪಾಲಯ್ಯ, ಮಾಜಿ ಶಾಸಕರಾದ ಶ್ರೀ ನೆ.ಲ.ನರೇಂದ್ರ ಬಾಬು, ಜಿಲ್ಲಾಧ್ಯಕ್ಷರಾದ ಶ್ರೀ ಹರೀಶ್, ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ರಮೇಶ್ ಗೌಡ ಸೇರಿದಂತೆ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ವಿಜಯನಗರದಲ್ಲಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಶ್ರೀ ಪಿ.ಸಿ. ಮೋಹನ್ ಅವರ ಪರವಾಗಿ ಬೃಹತ್ ರೋಡ್ ಶೋ ನಡೆಸುವ ಮೂಲಕ ಮತಯಾಚನೆಯಲ್ಲಿ ಭಾಗಿಯಾಗಿದ್ದರು. ಭಾರತ ಮತ್ತೆ ವಿಶ್ವಗುರುವಿನ ಪ್ರಧಾನ ಪಾತ್ರ ವಹಿಸುವತ್ತ ಪ್ರಧಾನಿ ಶ್ರೀ ನರೇಂದ್ರ ಮೋದಿ ರವರ ನೇತೃತ್ವದಲ್ಲಿ ಸಾಗುತ್ತಿದ್ದು, ಜಗತ್ತಿನ ನಂ.1 ಆರ್ಥಿಕ ರಾಷ್ಟ್ರವನ್ನಾಗಿಸಲು ಎನ್‌ಡಿಎ ಅಭ್ಯರ್ಥಿಯನ್ನು ದಾಖಲೆಯ ಮತಗಳ ಅಂತರಗಳಿಂದ ಗೆಲ್ಲಿಸುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಬೆಂಗಳೂರು ದಕ್ಷಿಣದ ಜಿಲ್ಲಾಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಸಿ.ಕೆ. ರಾಮಮೂರ್ತಿ, ಮುಖಂಡರಾದ ಶ್ರೀ ಹೆಚ್. ರವೀಂದ್ರ, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಉಡುಪಿ – ಚಿಕ್ಕಮಗಳೂರು :** ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ತರೀಕೆರೆಯಲ್ಲಿ ಆಯೋಜಿಸಿದ್ದ ಬೃಹತ್ ಚುನಾವಣಾ ಪ್ರಚಾರ ಸಭೆಯನ್ನು ಉದ್ಘಾಟಿಸಿ ಸರಳ ಹಾಗೂ ಸಜ್ಜನ ಎನ್‌ಡಿಎ ಅಭ್ಯರ್ಥಿ ಶ್ರೀ ಕೋಟ ಶ್ರೀನಿವಾಸ ಪೂಜಾರಿ ರವರನ್ನು

ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ಉಡುಪಿಯಲ್ಲಿ ಬಿಜೆಪಿ ಯುವ ಮೋರ್ಚಾ ವತಿಯಿಂದ ಆಯೋಜಿಸಿದ್ದ ಸಮಾವೇಶವನ್ನು ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಬೃಹತ್ ರೋಡ್ ಶೋ ಮೂಲಕ ತೆರಳಿ ಉದ್ಘಾಟಿಸಿದರು. ದೇಶವೇ ನನ್ನ ಪರಿವಾರವೆಂದು ಭಾವಿಸಿ ಒಂದು ದಿನವೂ ವಿಶ್ರಾಂತಿ ಪಡೆಯದೇ ಭಾರತದ ಉಜ್ವಲ ಭವಿಷ್ಯಕ್ಕಾಗಿ ಶ್ರಮಿಸುತ್ತಿರುವ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿಜೀ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ದೃಷ್ಟಿಯಿಂದ ಎನ್‌ಡಿಎ ಅಭ್ಯರ್ಥಿ ಶ್ರೀ ಕೋಟಾ ಶ್ರೀನಿವಾಸ ಪೂಜಾರಿ ಅವರನ್ನು ದಾಖಲೆಯ ಮತಗಳ ಅಂತರಗಳಿಂದ ಗೆಲ್ಲಿಸುವಂತೆ ಮನವಿ ಮಾಡಲಾಯಿತು.



ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿ. ಸುನೀಲ್ ಕುಮಾರ, ಶಾಸಕರಾದ ಶ್ರೀ ಯಶಪಾಲ್ ಸುವರ್ಣ, ಶ್ರೀ ಗುರ್ಮೆ ಸುರೇಶ್ ಶೆಟ್ಟಿ, ಶ್ರೀ ಕಿರಣ್ ಕುಮಾರ್ ಕೊಡ್ಗಿ, ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹರೀಶ್ ಪೂಂಜಾ, ಮಾಜಿ ಶಾಸಕರಾದ ಶ್ರೀ ರಘುಪತಿ ಭಟ್, ಮುಖಂಡರಾದ ಶ್ರೀ ಅರುಣ್ ಪುತ್ತಿಲ, ಜಿಲ್ಲಾಧ್ಯಕ್ಷರಾದ ಶ್ರೀ ಕಿಶೋರ್, ಪಕ್ಷದ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಬಂಟ್ವಾಳ :** ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಬಂಟ್ವಾಳ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಕಾರ್ಯಕರ್ತರ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಭಾಗವಹಿಸಿದ್ದರು. ಈ ವೇಳೆ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ನಾಯಕತ್ವ ಮೆಚ್ಚಿ ಅನ್ಯ ಪಕ್ಷಗಳ ಹಲವಾರು ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಳ್ಳಲಾಗಿದೆ ಎಂದು ಹೇಳಿದರು. ದೇಶದಲ್ಲಿ ನಡೆಯುತ್ತಿರುವ ಲೋಕಸಭಾ ಚುನಾವಣೆ ಭಾರತ ಗೆಲ್ಲಿಸುವ ಚುನಾವಣೆಯಾಗಿದ್ದು ಮತ್ತೊಮ್ಮೆ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರಕಾರವನ್ನು ಅಧಿಕಾರಕ್ಕೆ ತರಲು ಎನ್‌ಡಿಎ ಅಭ್ಯರ್ಥಿ ಕ್ಯಾಪ್ಟನ್ ಬ್ರಿಜೇಶ್‌ಚೌಟ ಅವರನ್ನು ಪ್ರಚಂಡ ಮತಗಳ ಅಂತರದಿಂದ ಗೆಲ್ಲಿಸಲು ಶ್ರಮಿಸುವಂತೆ ಅವರು ಮನವಿ ಮಾಡಿದರು. ಈ ಸಂದರ್ಭದಲ್ಲಿ ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಜನಪ್ರಿಯ ಶಾಸಕರಾದ ಶ್ರೀ ಹರೀಶ್ ಪೂಂಜಾ, ಜಿಲ್ಲಾಧ್ಯಕ್ಷರಾದ ಶ್ರೀ ಸತೀಶ್ ಕುಂಪಲ, ಪಕ್ಷದ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

**ಹಾವೇರಿ :** ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಹಾವೇರಿಯಲ್ಲಿ ಆಯೋಜಿಸಿದ್ದ ಬೃಹತ್ ರೋಡ್ ಶೋ ಮೂಲಕ ಲೋಕಸಭಾ ಚುನಾವಣೆಯ ಯುವ ಸಮಾವೇಶದಲ್ಲಿ ಭಾಗವಹಿಸಿದ್ದರು.



ಈ ಸಂದರ್ಭದಲ್ಲಿ ಮಾತನಾಡಿದ ಅವರು ವಿಶ್ವಗುರು ಭಾರತವನ್ನಾಗಿಸಿ, ವಿಕಸಿತ ಭಾರತದ ಕನಸು ನನಸು ಮಾಡುವ ನಿಟ್ಟಿನಲ್ಲಿ ದೇಶದ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ದೃಷ್ಟಿಯಿಂದ ನಾಡಿಗೆ ತಮ್ಮದೇ ಆದ ಕೊಡುಗೆ ನೀಡಿ ಬಿಜೆಪಿ ಅಭ್ಯರ್ಥಿಯಾಗಿರುವ ಶ್ರೀ ಬಸವರಾಜ ಬೊಮ್ಮಾಯಿ ರವರನ್ನು ಪ್ರಚಂಡ ಮತಗಳ ಅಂತರದಲ್ಲಿ ಗೆಲ್ಲಿಸುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, ಮಾಜಿ ಸಚಿವರಾದ ಶ್ರೀ ಬಿ.ಸಿ. ಪಾಟೀಲ್, ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀ ಅರುಣ್ ಕುಮಾರ್ ಪೂಜಾರ್, ಶ್ರೀ ರಾಜು ಕುರಡಗಿ ಸೇರಿದಂತೆ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಚಾಮರಾಜನಗರ :** ಕೊಳ್ಳೆಗಾಲದಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಶ್ರೀ ಶ್ರೀ ಎಸ್ ಬಾಲರಾಜ್ ಅವರ ಪರವಾಗಿ ಆಯೋಜಿಸಿದ್ದ ಬೃಹತ್ ರೋಡ್ ಶೋನಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಭಾಗವಹಿಸಿ ಕಿಸಾನ್ ಸಮ್ಮಾನ್, ವಿಶ್ವಕರ್ಮ ಯೋಜನೆಗಳ ಮೂಲಕ ರೈತರು ಹಾಗೂ ಶ್ರಮಿಕ ವರ್ಗಗಳ ಜನರ ಸ್ವಾವಲಂಬಿ ಬದುಕು ಕಟ್ಟಿಕೊಡಲು ಶ್ರಮಿಸುತ್ತಿರುವ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ಅತ್ಯಧಿಕ ಮತಗಳ ಅಂತರಗಳಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಶ್ರೀ ಎನ್ . ಮಹೇಶ್,



ಹನೂರು ಶಾಸಕರಾದ ಶ್ರೀ ಎಂ.ಆರ್. ಮಂಜುನಾಥ್, ಜಿಲ್ಲಾಧ್ಯಕ್ಷರಾದ ಶ್ರೀ ಸಿ.ಎಸ್. ನಿರಂಜನ್ ಕುಮಾರ್, ಪ್ರೊ. ಮಲ್ಲಿಕಾರ್ಜುನಪ್ಪ ಸೇರಿದಂತೆ ಸ್ಥಳೀಯ ಬಿಜೆಪಿಯ ಮತ್ತು ಜೆಡಿಎಸ್‌ನ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

**ಮೈಸೂರು :** ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಮೈಸೂರು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಪರವಾಗಿ ಮತಯಾಚಿಸಲು ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ ನಾಡಿಗೆ ಅತ್ಯಮೂಲ್ಯ ಕೊಡುಗೆ ನೀಡಿರುವ ಶ್ರೇಷ್ಠ ಮನೆತನದ ಮಹಾರಾಜರಿಗೆ ಗೌರವ ಸಲ್ಲಿಸುವ ಜೊತೆಗೆ ಭಾರತವನ್ನು ಗೆಲ್ಲಿಸುವ ಅವಕಾಶ ಮೈಸೂರು ಜನತೆಗೆ ದೊರೆತಿದ್ದು, ತಮ್ಮ ಅಮೂಲ್ಯವಾದ ಮತವನ್ನು ನಮ್ಮ ಅಭ್ಯರ್ಥಿಗೆ ನೀಡುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರೀತಂಗೌಡ, ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸಾ, ಓಬಿಸಿ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಆರ್. ರಘು ಕೌಟಿಲ್ಯ, ಮಾಜಿ ಮೇಯರ್ ಶ್ರೀ ಶಿವಕುಮಾರ್, ಸ್ಥಳೀಯ ಬಿಜೆಪಿಯ ಮತ್ತು ಜೆಡಿಎಸ್‌ನ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.



ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ಉಪಸ್ಥಿತಿಯಲ್ಲಿ ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಪಿರಿಯಾಪಟ್ಟಣ ಹಾಗೂ ಹುಣಸೂರಿನಲ್ಲಿ ಎನ್‌ಡಿಎ ಅಭ್ಯರ್ಥಿ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಪರವಾಗಿ ಬೃಹತ್ ರೋಡ್ ಶೋ ಮೂಲಕ ಮತ ಯಾಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವರಾದ ಶ್ರೀ ಎಸ್.ಎ ರಾಮದಾಸ್, ಶಾಸಕರಾದ ಶ್ರೀ ಜಿ.ಡಿ ಹರೀಶ್ ಗೌಡ, ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀ ಎಲ್.ಆರ್. ಮಹದೇವಸ್ವಾಮಿ, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.



ಮೈಸೂರಿನಲ್ಲಿ ಆಯೋಜಿಸಿದ್ದ ಮಾದಿಗ ಸಮುದಾಯದ ಮುಖಂಡರು ಹಾಗೂ ಕಾರ್ಯಕರ್ತರ ಸಮಾವೇಶವನ್ನು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿದರು. ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಸ್ಮರಿಸುವ ಎಲ್ಲಾ ಸ್ಥಳಗಳನ್ನು ಪಂಚತೀರ್ಥ ಕ್ಷೇತ್ರವಾಗಿ ಅಭಿವೃದ್ಧಿಪಡಿಸಿ ಪ್ರಾಮಾಣಿಕ ಗೌರವ ಸಲ್ಲಿಸಿದೆ. 'ಆಡದೇ ಮಾಡುವವ ರೂಢಿಯೊಳಗುತ್ತಮನು' ಎಂಬಂತೆ ವಿಶ್ವಕರ್ಮ ಯೋಜನೆ, ಮುದ್ರಾ ಯೋಜನೆಗಳ ಮೂಲಕ ದಲಿತ ಸಮುದಾಯಗಳ ಸ್ವಾಭಿಮಾನಿ ಬದುಕು ಕಟ್ಟಿಕೊಡುತ್ತಿರುವ ಮೋದಿಯವರ ಸರ್ಕಾರವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ನಮ್ಮ ಅಭ್ಯರ್ಥಿ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಗೆಲ್ಲಿಸುವಂತೆ ರಾಜ್ಯಾಧ್ಯಕ್ಷರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವರಾದ ಶ್ರೀ ಎ. ನಾರಾಯಣಸ್ವಾಮಿ, ಜಿಲ್ಲಾಧ್ಯಕ್ಷರಾದ ಶ್ರೀ ಎಲ್. ನಾಗೇಂದ್ರ, ದಲಿತ ಸಮುದಾಯದ ಮುಖಂಡರು, ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

**ಬಳ್ಳಾರಿ:** ಬಿಜೆಪಿಯ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಲೋಕಸಭಾ ಚುನಾವಣೆಯ ಎನ್‌ಡಿಎ ಅಭ್ಯರ್ಥಿ ಶ್ರೀ ಬಿ. ಶ್ರೀರಾಮುಲು ಅವರ ನಾಮಪತ್ರ ಸಲ್ಲಿಕೆಯ ಬೃಹತ್ ರೋಡ್ ಶೋ ಹಾಗೂ ಪ್ರಬುದ್ಧರ ಸಭೆಯಲ್ಲಿ ಭಾಗವಹಿಸಿ ವಿಕಸಿತ ಭಾರತಕ್ಕಾಗಿ ಶ್ರಮಿಸುತ್ತಿರುವ ವಿಶ್ವ ಮೆಚ್ಚಿದ ಪ್ರಧಾನಿ ಶ್ರೀ ನರೇಂದ್ರ ಮೋದಿ ರವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ದೃಷ್ಟಿಯಿಂದ ಬಿಜೆಪಿಗೆ



ಅಮೂಲ್ಯವಾದ ಮತ ನೀಡುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಂಸದರಾದ ಶ್ರೀ ದೇವೇಂದ್ರಪ್ಪ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್. ರವಿಕುಮಾರ್, ಸಚಿವರಾದ ಶ್ರೀ ಆನಂದ್ ಸಿಂಗ್, ಮಾಜಿ ಶಾಸಕರಾದ ಶ್ರೀ ಸೋಮಶೇಖರ್ ರೆಡ್ಡಿ, ಶ್ರೀಮತಿ ಅರುಣಾ ದೇವಿ, ಎಸ್‌ಟಿ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಬಂಗಾರು ಹನುಮಂತು, ಜಿಲ್ಲಾಧ್ಯಕ್ಷರಾದ ಶ್ರೀ ಅನಿಲ್ ಕುಮಾರ್, ಶ್ರೀ ಚನ್ನಬಸವನಗೌಡ ಪಾಟೀಲ್, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು ಕಾರ್ಯಕರ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

**ಚಿತ್ರದುರ್ಗ** : ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಬೂತ್ ಕಾರ್ಯಕರ್ತರ ಸಮಾವೇಶವನ್ನು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿ ಮಾತನಾಡಿ ಬಿಜೆಪಿ-ಜೆಡಿಎಸ್ ಕಾರ್ಯಕರ್ತರ ಸಂಘಟಿತ ಪ್ರಯತ್ನದಿಂದ ಎನ್‌ಡಿಎ ಅಭ್ಯರ್ಥಿ ಶ್ರೀ ಗೋವಿಂದ ಕಾರಜೋಳ ಅವರನ್ನು ಪ್ರಚಂಡ ಮತಗಳ ಅಂತರಗಳಿಂದ ಗೆಲ್ಲಿಸಿ ಮತ್ತೊಮ್ಮೆ ಮೋದಿ ಸಂಕಲ್ಪದ ಸಾಕಾರಕ್ಕಾಗಿ ವಿರಮಿಸದೇ ಶ್ರಮಿಸಬೇಕೆಂದು ಕರೆ ನೀಡಿದರು.



ಈ ಸಂದರ್ಭದಲ್ಲಿ ಶಾಸಕರಾದ ಶ್ರೀ ಎಂ. ಚಂದ್ರಪ್ಪ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ.ಎಸ್. ನವೀನ್, ಲೋಕಸಭಾ ಚುನಾವಣಾ ಸಹ ಸಂಚಾಲಕರಾದ ಶ್ರೀ ಲಿಂಗಮೂರ್ತಿ, ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳಿಕೇರಿ, ಜಿಲ್ಲಾಧ್ಯಕ್ಷರಾದ ಶ್ರೀ ಎ. ಮುರುಳಿ, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ತುಮಕೂರು** : ತುಮಕೂರು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶ್ರೀ ವಿ. ಸೋಮಣ್ಣ ಅವರ ಪರ ಮತಯಾಚನೆಗಾಗಿ ನೊಣವಿನಕೆರೆ ಹಾಗೂ ತುರುವೇಕೆರೆಗಳಲ್ಲಿ ಆಯೋಜಿಸಿದ್ದ ಬೃಹತ್ ರೋಡ್



ಶೋನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಭಾಗವಹಿಸಿದ್ದರು. ನರೆದಿದ್ದ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರ ರಣೋತ್ಸಾಹ ಪ್ರಚಂಡ ಗೆಲುವಿನ ವಿಶ್ವಾಸ ಮೂಡಿಸಿತ್ತು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ರಾಜ್ಯಸಭಾ ಸದಸ್ಯರಾದ ಶ್ರೀ ಜಗ್ಗೇಶ್, ಮಾಜಿ ಸಚಿವರಾದ ಶ್ರೀ ಕೆ.ಗೋಪಾಲಯ್ಯ, ಶ್ರೀ ಬಿ.ಸಿ.ನಾಗೇಶ್, ಶಾಸಕರಾದ ಶ್ರೀ ಎಂ.ಟಿ.ಕೃಷ್ಣಪ್ಪ, ಮಾಜಿ ಶಾಸಕರಾದ ಶ್ರೀ ಮಸಾಲಾ ಜಯರಾಂ, ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ್ ಸೇರಿದಂತೆ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

**ಹಾಸನ** : ಹಾಸನ ಲೋಕಸಭಾ ಕ್ಷೇತ್ರದ ಹೊಳೆನರಸೀಪುರದಲ್ಲಿ ಆಯೋಜಿಸಿದ್ದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

ರಾಜ್ಯ ಹಾಗೂ ರಾಷ್ಟ್ರದ ಹಿತ ಹಾಗೂ ಸಮಗ್ರ ಅಭಿವೃದ್ಧಿಗಾಗಿ ಮತ್ತೊಮ್ಮೆ ಮೋದಿ ಸರ್ಕಾರ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಎನ್‌ಡಿಎ ಅಭ್ಯರ್ಥಿಯನ್ನು ಪ್ರಚಂಡ ಮತಗಳ ಅಂತರದಿಂದ ಗೆಲ್ಲಿಸುವ ಮೂಲಕ ಸ್ವಾವಲಂಬಿ ಹಾಗೂ ಸ್ವಾಭಿಮಾನಿ ಬದುಕು ಕಟ್ಟಿಕೊಡುವ ಶಾಶ್ವತ ಗ್ಯಾರಂಟಿಯಾಗಿರುವ ಮೋದಿ ಸರ್ಕಾರಕ್ಕೆ ಬಲ ತುಂಬಬೇಕೆಂದು ಮನವಿ ಮಾಡಲಾಯಿತು. ನಂತರ ಸಂಕಲೇಶಪುರದಲ್ಲಿ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಲಾಯಿತು.

**ಮಂಡ್ಯ** : ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಮಂಡ್ಯ ಲೋಕಸಭಾ ಕ್ಷೇತ್ರದ ಮಳವಳ್ಳಿಯಲ್ಲಿ ಬೃಹತ್ ರೋಡ್ ಶೋ ಮೂಲಕ ತೆರಳಿ ಸಾರ್ವಜನಿಕ ಸಮಾವೇಶವನ್ನು ಉದ್ಘಾಟಿಸಿ ಎನ್‌ಡಿಎ ಅಭ್ಯರ್ಥಿ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರ ಪರವಾಗಿ ಮತ ಯಾಚಿಸಿದರು. ಅನ್ನದಾತರ ಆದಾಯವನ್ನು ದ್ವಿಗುಣಗೊಳಿಸುವ ಸಂಕಲ್ಪ ತೊಟ್ಟು ಸಾಗುತ್ತಿರುವ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ಸರ್ಕಾರವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ದಾಖಲೆಯ ಮತಗಳ ಅಂತರದಿಂದ ಎನ್‌ಡಿಎ ಅಭ್ಯರ್ಥಿ




ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಗೆಲ್ಲಿಸುವ ಮೂಲಕ ರೈತರು ಹಾಗೂ ಹಿಂದುಳಿದ ವರ್ಗಗಳ ಜನರಿಗೆ ದ್ರೋಹ ಬಗೆದಿರುವ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕಪಾಠ ಕಲಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ಕೋರ್ ಕಮಿಟಿ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೇಗೌಡ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಹೆಚ್. ವಿಶ್ವನಾಥ್, ಮಾಜಿ ಸಚಿವರಾದ ಶ್ರೀ ಕೆ.ಸಿ. ನಾರಾಯಣಗೌಡ, ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀ ಇಂದ್ರೇಶ್, ಮಾಜಿ ಶಾಸಕರಾದ ಶ್ರೀ ಸಿ.ಎಸ್. ಪುಟ್ಟರಾಜು, ಶ್ರೀ ಅನ್ನದಾನಿ, ಶ್ರೀಕಂಠೇಗೌಡರು, ಮುಖಂಡರಾದ ಶ್ರೀ ಮುನಿರಾಜು, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

**ಚಿಕ್ಕಬಳ್ಳಾಪುರ :** ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ದೊಡ್ಡಬಳ್ಳಾಪುರದಲ್ಲಿ ಎನ್‌ಡಿಎ ಅಭ್ಯರ್ಥಿ ಡಾ. ಸುಧಾಕರ ರವರ ಪರವಾಗಿ ಬೃಹತ್ ರೋಡ್ ಶೋ ಮೂಲಕ ಆಯೋಜಿಸಿದ್ದ ಮತಯಾಚನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರತಿಯೊಂದು ಮನೆಗಳಿಗೂ ಒಂದಿಲ್ಲೊಂದು ಜನಪರ ಯೋಜನೆಗಳನ್ನು ನೀಡಿರುವ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ಕಮಲದ ಗುರುತಿಗೆ ಅಮೂಲ್ಯವಾದ ಮತ ನೀಡಿ ದಾಖಲೆಯ ಮತಗಳ ಅಂತರದಿಂದ ಗೆಲ್ಲಿಸಲು ಮನವಿ ಮಾಡಿದರು.



ಈ ಸಂದರ್ಭದಲ್ಲಿ ಬಿಜೆಪಿ ಯುವಮೋರ್ಚಾ ರಾಜ್ಯ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಧೀರಜ್ ಮುನಿರಾಜು, ಮುಖಂಡರುಗಳಾದ ಶ್ರೀ ಮುನೇಗೌಡರು, ಶ್ರೀ ಹರೀಶ್ ಗೌಡ, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಕಲಬುರಗಿ :** ಕಲಬುರಗಿ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಡಾ. ಉಮೇಶ್ ಜಾಧವ್ ಅವರ ಬೃಹತ್ ರೋಡ್ ಶೋ ಹಾಗೂ ನಾಮಪತ್ರ ಸಲ್ಲಿಕೆ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಭಾಗವಹಿಸಿದ್ದರು. ಕಲಬುರಗಿ ಅಭಿವೃದ್ಧಿಯೊಂದಿಗೆ ದೇಶದ ಸಮಗ್ರ ಅಭಿವೃದ್ಧಿಗಾಗಿ ಮತ್ತೊಮ್ಮೆ ಮೋದಿ ಸರ್ಕಾರ ಅಧಿಕಾರಕ್ಕೆ ತರಲು ಜನರಿಗಿರುವ ಒಲವನ್ನು ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಜನಸಮೂಹವೇ ಸಾಕ್ಷೀಕರಿಸಿತು.



ಈ ಸಂದರ್ಭದಲ್ಲಿ ಸಂಸದರಾದ ಶ್ರೀ ರಮೇಶ್ ಜಿಗಜಿಣಗಿ, ಮಾಜಿ ಸಚಿವರಾದ ಶ್ರೀ ಅರವಿಂದ ಲಿಂಬಾವಳಿ, ಶಾಸಕರಾದ ಶ್ರೀ ಬಸವರಾಜ ಮತ್ತಿಮಡು, ಜಿಲ್ಲಾಧ್ಯಕ್ಷರಾದ ಶ್ರೀ ಶಿವರಾಜ್ ಪಾಟೀಲ್ ರದ್ದೇವಾಡಿ, ಶ್ರೀ ಚಂದು ಪಾಟೀಲ್, ಶ್ರೀ ನಿತಿನ್ ಗುತ್ತೇದಾರ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

**ದಾವಣಗೆರೆ :** ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ದಾವಣಗೆರೆಯ ಜಿಎಂಐಟಿ ಸಭಾಂಗಣದಲ್ಲಿ ಆಯೋಜಿಸಿದ್ದ ದಾವಣಗೆರೆ ಉತ್ತರ ಹಾಗೂ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಬೂತ್ ಅಧ್ಯಕ್ಷರುಗಳ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ ಅಭಿವೃದ್ಧಿಗೆ ಹೆಸರಾಗಿರುವ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ಪ್ರತಿ ಬೂತ್ ಮಟ್ಟದಲ್ಲಿ ಮತಗಳಿಕೆಯ ಪ್ರಮಾಣ ಹೆಚ್ಚಿಸುವ ಮೂಲಕ ಎನ್‌ಡಿಎ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ್ ಅವರನ್ನು ದಾಖಲೆಯ ಮತಗಳ ಅಂತರಗಳಿಂದ ಗೆಲ್ಲಿಸಲು ವಿರಮಿಸದೇ ಶ್ರಮಿಸಬೇಕೆಂಬ ಕರೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವರು ಹಾಗೂ ಸಂಸದರಾದ ಶ್ರೀ ಜಿ.ಎಂ ಸಿದ್ದೇಶ್ವರ್, ಮಾಜಿ ಸಚಿವರಾದ ಶ್ರೀ ರವೀಂದ್ರ ನಾಥ್, ಮಾಜಿ ಮುಖ್ಯ ಸಚೇತಕರಾದ ಶ್ರೀ ಶಿವಯೋಗಿ ಸ್ವಾಮಿ, ಜಿಲ್ಲಾಧ್ಯಕ್ಷರಾದ ಶ್ರೀ ರಾಜಶೇಖರ್, ಯುವ ಮುಖಂಡರಾದ ಶ್ರೀ ಅಜಯ್, ಪಕ್ಷದ ಪದಾಧಿಕಾರಿಗಳು, ಮುಖಂಡರು, ಬೂತ್ ಅಧ್ಯಕ್ಷರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

**ಶಿವಮೊಗ್ಗ :** ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸೊರಬ ವಿಧಾನಸಭಾ ಕ್ಷೇತ್ರದಲ್ಲಿ ಬೈಕ್ ರ್‍ಯಾಲಿ ಮೂಲಕ ರೋಡ್ ಶೋ ನಡೆಸಿ ಮತಯಾಚನೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ವಿಶ್ವಮಟ್ಟದಲ್ಲಿ ಭಾರತದ ಕೀರ್ತಿ ಪತಾಕೆಯನ್ನು ಬಾನೆತ್ತರಕ್ಕೆ ಬೆಳೆಯುವಂತೆ ಮಾಡಿರುವ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿ ಮಾಡಲು ಹಾಗೂ ಅಭಿವೃದ್ಧಿಯ ಹರಿಕಾರ ಶ್ರೀ ಬಿ.ವೈ. ರಾಘವೇಂದ್ರ ರವರನ್ನು ಮತ್ತೊಮ್ಮೆ ಗೆಲ್ಲಿಸಲು ಪ್ರತಿ ಬೂತ್ ಮಟ್ಟದಲ್ಲಿ ಮತಗಳಿಕೆಯ ಪ್ರಮಾಣ ಹೆಚ್ಚಿಸಲು ವಿರಮಿಸದೇ ಶ್ರಮಿಸಬೇಕೆಂಬ ಸಂಕಲ್ಪವನ್ನು ಮಾಡಲಾಯಿತು.



ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಶ್ರೀ ಹರತಾಳು ಹಾಲಪ್ಪನವರು, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಶಿವಮೊಗ್ಗ ಲೋಕಸಭಾ ಕ್ಷೇತ್ರದ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ, ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರ, ಸಾಗರ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಪ್ರಚಾರ ನಡೆಸಿದರು.

**ರಾಯಚೂರು :** ಸುರಪುರ ವಿಧಾನಸಭಾ ಕ್ಷೇತ್ರದಲ್ಲಿಂದು ಆಯೋಜಿಸಿದ್ದ ಬೃಹತ್ ಸಾರ್ವಜನಿಕ ಸಭೆಯನ್ನು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿದರು.



ಬಿಜೆಪಿ ಹಾಗೂ ಪ್ರಧಾನಿ ಶ್ರೀ ನರೇಂದ್ರ ಮೋದಿಜೀ ಅವರ ಆಡಳಿತ ಎಂದರೆ ಅಭಿವೃದ್ಧಿಯ ಆಡಳಿತ, ಲೋಕಸಮರದಲ್ಲಿ ರಾಯಚೂರು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶ್ರೀ ರಾಜಾ ಅಮರೇಶ್ವರ ನಾಯಕ್ ಹಾಗೂ ಸುರಪುರ ವಿಧಾನಸಭಾ ಉಪ ಚುನಾವಣೆಯಲ್ಲಿ ನಮ್ಮ ಎನ್.ಡಿ.ಎ ಅಭ್ಯರ್ಥಿ ಶ್ರೀ ರಾಜುಗೌಡ ಅವರುಗಳನ್ನು ಕಮಲದ ಗುರುತಿಗೆ ಅಮೂಲ್ಯವಾದ ಮತ ನೀಡುವ ಮೂಲಕ ಪ್ರಚಂಡ ಮತಗಳ ಅಂತರದಿಂದ ಗೆಲ್ಲಿಸಲು ಮನವಿ ಮಾಡಲಾಯಿತು.

**ಕೊಪ್ಪಳ :** ಕೊಪ್ಪಳ ಲೋಕಸಭಾ ಕ್ಷೇತ್ರದ ಮಸ್ಕಿಯ ತೇರು ಬಂಜಾರದಲ್ಲಿ ಆಯೋಜಿಸಿದ್ದ ಕಾರ್ಯಕರ್ತರ ಸಭೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿದರು.

ಕಿಸಾನ್ ಸಮ್ಮಾನ್, ವಿಶ್ವಕರ್ಮ ಯೋಜನೆ ಸೇರಿದಂತೆ ನೂರಾರು ಜನಪರ ಯೋಜನೆಗಳನ್ನು ಜಾರಿಗೊಳಿಸಿ, ರೈತರು ಹಾಗೂ ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಸ್ವಾವಲಂಬಿ ಬದುಕು ಕಟ್ಟಿಕೊಡಲು ಶ್ರಮಿಸುತ್ತಿರುವ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿಜೀ ಅವರ ಸರ್ಕಾರವನ್ನು ಮತ್ತೊಮ್ಮೆ ಅಧಿಕಾರಕ್ಕೆ ತರಲು ಕ್ರ.ಸಂ.1 ರ ನಮ್ಮ ಬಿಜೆಪಿ (ಎನ್.ಡಿ.ಎ) ಅಭ್ಯರ್ಥಿ ಶ್ರೀ ಡಾ.ಬಸವರಾಜ ಕೆ ಶರಣಪ್ಪ ಅವರಿಗೆ ಅತ್ಯಮೂಲ್ಯವಾದ ಮತ ನೀಡಿ ಪ್ರಚಂಡ ಮತಗಳ ಅಂತರಗಳಿಂದ ಗೆಲ್ಲಿಸುವಂತೆ ಮನವಿ ಮಾಡಿದರು.



ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಶ್ರೀ ಹಾಲಪ್ಪ ಆಚಾರ್, ಶಾಸಕರಾದ ಶ್ರೀ ಮಾನಪ್ಪ ವಜ್ಜಲ್, ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್, ಮಾಜಿ ಶಾಸಕರಾದ ಶ್ರೀ ಪ್ರತಾಪ್ ಗೌಡ ಪಾಟೀಲ್, ಮುಖಂಡರಾದ ಶ್ರೀ ಸಿ.ವಿ ಚಂದ್ರಶೇಖರ್, ಶ್ರೀ ಬಸವನಗೌಡ ಸೇರಿದಂತೆ ಬಿಜೆಪಿಯ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಮತದಾರ ಬಂಧುಗಳು ಉಪಸ್ಥಿತರಿದ್ದರು.



# ಲೋಕಸಭಾ ಕ್ಷೇತ್ರವಾರು ಮತದಾನ

**70.64 %**

## ಮೊದಲನೇ ಹಂತದ ಮತದಾನ 26 ಏಪ್ರಿಲ್ 2024

| ಕ್ಷೇತ್ರ# | ಲೋಕಸಭಾ ಕ್ಷೇತ್ರ | ಮತದಾನ % |
|---|---|---|
| 15 | ಉಡುಪಿ ಚಿಕ್ಕಮಗಳೂರು | 77.15% |
| 16 | ಹಾಸನ | 77.68% |
| 17 | ದಕ್ಷಿಣಕನ್ನಡ | 77.56% |
| 18 | ಚಿತ್ರದುರ್ಗ | 73.30% |
| 19 | ತುಮಕೂರು | 78.05% |
| 20 | ಮಂಡ್ಯ | 81.67% |
| 21 | ಮೈಸೂರು | 70.62% |
| 22 | ಚಾಮರಾಜನಗರ | 76.82% |
| 23 | ಬೆಂಗಳೂರು ಗ್ರಾಮಾಂತರ | 68.30% |
| 24 | ಬೆಂಗಳೂರು ಉತ್ತರ | 54.45% |
| 25 | ಬೆಂಗಳೂರು ಕೇಂದ್ರ | 54.06% |
| 26 | ಬೆಂಗಳೂರು ದಕ್ಷಿಣ | 53.17% |
| 27 | ಚಿಕ್ಕಬಳ್ಳಾಪುರ | 77.00% |
| 28 | ಕೋಲಾರ | 78.27% |

## ಎರಡನೇ ಹಂತದ ಮತದಾನ 07 ಮೇ 2024

| ಕ್ಷೇತ್ರ# | ಲೋಕಸಭಾ ಕ್ಷೇತ್ರ | ಮತದಾನ % |
|---|---|---|
| 01 | ಚಿಕ್ಕೋಡಿ | 78.66% |
| 02 | ಬೆಳಗಾಂ | 71.49% |
| 03 | ಬಾಗಲಕೋಟೆ | 72.66% |
| 04 | ಬಿಜಾಪುರ | 66.32% |
| 05 | ಗುಲ್ಬರ್ಗಾ | 62.25% |
| 06 | ರಾಯಚೂರು | 64.66% |
| 07 | ಬೀದರ್ | 65.47% |
| 08 | ಕೊಪ್ಪಳ | 70.99% |
| 09 | ಬಳ್ಳಾರಿ | 73.59% |
| 10 | ಹಾವೇರಿ | 77.60% |
| 11 | ಧಾರವಾಡ | 74.37% |
| 12 | ಉತ್ತರ ಕನ್ನಡ | 76.53% |
| 13 | ದಾವಣಗೆರೆ | 76.99% |
| 14 | ಶಿವಮೊಗ್ಗ | 78.33% |

## ಮೊದಲನೇ ಹಂತದ ಮತದಾನ

ಲೋಕಸಭೆ ಚುನಾವಣೆ ಮೊದಲ ಹಂತದಲ್ಲಿ 14 ಕ್ಷೇತ್ರಗಳಿಗೆ ನಡೆದ ಮತದಾನ ಒಂದೆರಡು ಸಣ್ಣ ಪುಟ್ಟ ಘಟನೆಗಳನ್ನು ಹೊರತುಪಡಿಸಿ ಬಹುತೇಕ ಶಾಂತಿಯುತವಾಗಿ ಪೂರ್ಣಗೊಂಡಿದೆ. 14 ಕ್ಷೇತ್ರಗಳಲ್ಲಿ ಒಟ್ಟಾರೆ ಶೇ. 69.23 ರಷ್ಟು ಮತದಾನವಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ ಶೇ.81.67ರಷ್ಟು ಮತದಾನವಾಗಿದ್ದು, ಎಂದಿನಂತೆ ಬೆಂಗಳೂರಿನ ಮೂರು ಕ್ಷೇತ್ರಗಳಲ್ಲಿ ಅತಿ ಕಡಿಮೆ ಮತದಾನವಾಗಿದೆ. ಬೆಂಗಳೂರು ಕೇಂದ್ರದಲ್ಲಿ ಅತಿ ಕಡಿಮೆ ಅಂದರೆ ಶೇ. 54.06ರಷ್ಟು ಮತದಾನವಾಗಿದ್ದು, ಬೆಂಗಳೂರು ದಕ್ಷಿಣದಲ್ಲಿ ಶೇ. 53.17, ಬೆಂಗಳೂರು ಉತ್ತರದಲ್ಲಿ ಶೇ. 52.45ರಷ್ಟು ಮಂದಿ ತಮ್ಮ ಹಕ್ಕು ಚಲಾಯಿಸಿದ್ದಾರೆ.

ಚಾಮರಾಜನಗರ ಲೋಕಸಭಾ ಕ್ಷೇತ್ರದ ಮಹದೇಶ್ವರಬೆಟ್ಟ ವ್ಯಾಪ್ತಿಯ ಇಂಡಿಗನತ್ತ ಗ್ರಾಮದಲ್ಲಿ ಗ್ರಾಮಕ್ಕೆ ಮೂಲ ಸೌಕರ್ಯ ಕಲ್ಪಿಸಿಲ್ಲ ಎಂದು ಆರೋಪಿಸಿ ಮತದಾರರು ಕಲ್ಲು ತೂರಾಟ ನಡೆಸಿ ಇವಿಎಂ ಸೇರಿದಂತೆ ಮತಗಟ್ಟೆಯನ್ನೇ ಧ್ವಂಸ ಮಾಡಿದ್ದಾರೆ. ಮೂಲ ಸೌಕರ್ಯ ಕಲ್ಪಿಸಿಲ್ಲ ಎಂದು ಆರೋಪಿಸಿ ಗ್ರಾಮಸ್ಥರು ಮತದಾನ ಬಹಿಷ್ಕರಿಸಿದ್ದು, ಈ ವೇಳೆ ಅಧಿಕಾರಿಗಳು ಮನವೊಲಿಸಲು ಹೋದಾಗ ಆಕ್ರೋಶಗೊಂಡು ಅಧಿಕಾರಿಗಳು, ಪೊಲೀಸರು ಮತ್ತು ಮತಗಟ್ಟೆಯತ್ತ ಕಲ್ಲು ತೂರಿದ್ದಾರೆ. ಇದರಿಂದ ಅಧಿಕಾರಿಗಳು, ಪೊಲೀಸರು ಸೇರಿದಂತೆ ಕೆಲವು ಗ್ರಾಮಸ್ಥರಿಗೂ ಗಾಯವಾಗಿದ್ದು, ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ.

ಈ ಭಾಗದಲ್ಲಿ ಇಂಡಿಗನತ್ತ, ತೇಕಣೆ, ಮೆಂದಾರೆ ಹಾಗೂ ತುಳಸಿಕೆರೆ ಗ್ರಾಮಗಳಲ್ಲಿ ಮತದಾನ ಬಹಿಷ್ಕಾರ ಮಾಡಲಾಗಿತ್ತು. ಪಡಸಲನತ್ತ ಗ್ರಾಮದಲ್ಲಿ 85 ಮತದಾರರ ಪೈಕಿ ಕೇವಲ ಇಬ್ಬರು ಮತದಾನ ಮಾಡಿದ್ದಾರೆ. ಕೋಲಾರ ಲೋಕಸಭಾ ಕ್ಷೇತ್ರದ ಕೋಲಾರ ತಾಲೂಕು ಬೆಗ್ಲಿ ಬೆಣಜೇನಹಳ್ಳಿ ಗ್ರಾಮದ ಜನರು ಎಂಎಸ್ಐಎಲ್ ಮದ್ಯದಂಗಡಿ ಮುಚ್ಚುವಂತೆ ಆಗ್ರಹಿಸಿ, ಮಾಲೂರು ತಾಲೂಕಿನ ತೊರ್ನಹಳ್ಳಿ ಗ್ರಾಮಸ್ಥರು ಊರಿನ ಕೆರೆಗೆ ಕೆ.ಸಿ.ವ್ಯಾಲಿ ನೀರು ಹರಿಸುವಂತೆ ಒತ್ತಾಯಿಸಿ, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಾಗೇಪಲ್ಲಿ ತಾಲೂಕು ಗೂಳೂರು ಹೋಬಳಿ ದೇವಿಕುಂಟೆ ಗ್ರಾಮಸ್ಥರು ಸೂಕ್ತ ರಸ್ತೆ ನಿರ್ಮಾಣಕ್ಕೆ ಆಗ್ರಹಿಸಿ ಮತದಾನ ಬಹಿಷ್ಕರಿಸಿದ್ದರು.

ಗಣಿ ಬಾಧಿತ ಪ್ರದೇಶದಿಂದ ತಮ್ಮ ಗ್ರಾಮವನ್ನು ಹೊರಗಿಟ್ಟಿರುವುದನ್ನು ಖಂಡಿಸಿ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಯರೆಹಳ್ಳಿ ಮತ್ತು ಸಿದ್ದಾಪುರ ಗ್ರಾಮಸ್ಥರು ಮತದಾನ ಬಹಿಷ್ಕರಿಸಿದ್ದರು. ಅಧಿಕಾರಿಗಳು ಮನವೊಲಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಕೊನೆಗೆ ತರಳಬಾಳು ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಶ್ರೀಗಳು ಭೇಟಿ ನೀಡಿ ಮನವೊಲಿಸಿದ ಬಳಿಕ ಮತದಾನ ಮಾಡಿದ್ದು, ರಾತ್ರಿವರೆಗೆ ಮತದಾನ ಪ್ರಕ್ರಿಯೆ ಮುಂದುವರಿದಿತ್ತು. ಮೊದಲ ಹಂತದ ಮತದಾನದ ವೇಳೆ ಮತದಾನ ಮಾಡಿದ ಬಳಿಕ ಮೂವರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ತುಮಕೂರು ನಗರದ ಎಸ್. ಎಸ್.ಪುರಂನಲ್ಲಿ ಮತ ಚಲಾಯಿಸಿ ಮನೆಗೆ ಬಂದಿದ್ದ ರಮೇಶ್ (54) ಎಂಬುವವರಿಗೆ ಹೃದಯಾಘಾತವಾಗಿ ಮೃತಪಟ್ಟಿದ್ದಾರೆ. ಕೊಡಗು-ಮೈಸೂರು ಕ್ಷೇತ್ರದ ವೀರಾಜಪೇಟೆ ತಾಲೂಕಿನ ಬಿ.ಶೆಟ್ಟಿಗೇರಿ ಗ್ರಾಮದ ಮತಗಟ್ಟೆ ಸಮೀಪ ಮತ ಹಾಕಲು ಸರತಿ ಸಾಲಿನಲ್ಲಿ ನಿಂತಿದ್ದ ಮನೋಹರ (58) ಎಂಬುವವರು ಸಾವಿಗೀಡಾಗಿದ್ದಾರೆ. ಅದೇ ಕ್ಷೇತ್ರದ ಹುಣಸೂರು ತಾಲೂಕಿನ ತಿಪ್ಪೂರು ಗ್ರಾಮದ ವೃದ್ಧೆ ಪುಟ್ಟಮ್ಮ (90) ಎಂಬುವರು ಮತ ಹಾಕಿ ಖುಷಿಯಲ್ಲಿ ವಾಪಸಾಗುತ್ತಿದ್ದಾಗ ದಿಢೀರ್ ಕುಸಿದುಬಿದ್ದ ಮೃತಪಟ್ಟಿದ್ದಾರೆ.

ಬೆಂಗಳೂರಿನ ಜೆ.ಪಿ.ನಗರದ 8ನೇ ಹಂತದ ಜಂಬೂ ಸವಾರಿ ದಿನ್ನೆಯಲ್ಲಿ ಮತದಾನಕ್ಕೆ ಬಂದಿದ್ದ ಮಹಿಳೆ ಹೃದಯ ಸ್ಥಂಭನಕ್ಕೊಳಗಾಗಿ ಕುಸಿದು ಬಿದ್ದುದ್ದು, ಅದೇ ವೇಳೆ ಮತದಾನಕ್ಕಾಗಿ ಮತಗಟ್ಟೆಗೆ ಬಂದಿದ್ದ ವೈದ್ಯ ಗಣೇಶ್ ಶ್ರೀನಿವಾಸ ಪ್ರಸಾದ್ ಎಂಬುವರು ಆಕೆಗೆ ಪ್ರಾಥಮಿಕ ಚಿಕಿತ್ಸೆ ನೀಡಿ ಆ್ಯಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ರವಾನಿಸಿದ್ದಾರೆ. ಮಹಿಳೆ ಚೇತರಿಸಿಕೊಳ್ಳುತ್ತಿದ್ದಾರೆ.

### ಒಂದೇ ಕುಟುಂಬದ 85 ಮಂದಿ ಮತದಾನ

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಮತಗಟ್ಟೆ ಸಂಖ್ಯೆ 161ರಲ್ಲಿ ಬಾದಾಮ್ ಕುಟುಂಬದ 85 ಸದಸ್ಯರು ಒಟ್ಟಾಗಿ ತೆರಳಿ ಮತದಾನ ಮಾಡಿದ್ದಾರೆ. ತಾಯಿ, ಮಗಳು, ಮೊಮ್ಮಕ್ಕಳು ಸೇರಿದಂತೆ ಎಲ್ಲರೂ ಒಟ್ಟಾಗಿ ಮತದಾನ ಕೇಂದ್ರಕ್ಕೆ ತೆರಳಿ ತಮ್ಮ ಹಕ್ಕು ಚಲಾಯಿಸಿದ್ದಾರೆ.

## ಎರಡನೇ ಹಂತದ ಮತದಾನ

ಕರ್ನಾಟಕದಲ್ಲಿ ಎರಡನೇ ಹಂತದಲ್ಲಿ 14 ಲೋಕಸಭಾ ಕ್ಷೇತ್ರಗಳಿಗೆ ನಡೆದ ಮತದಾನ ಪೂರ್ಣಗೊಂಡಿದ್ದು, ಶಾಂತಯುತವಾಗಿ ನಡೆದಿದೆ. ಈ ಮೂಲಕ ರಾಜ್ಯದ ಎರಡೂ ಹಂತಗಳ ಚುನಾವಣೆ ಮುಗಿದಿದ್ದು ಇನ್ನೇನಿದ್ದರೂ ಜೂ.4ರ ಫಲಿತಾಂಶಕ್ಕಷ್ಟೇ ಕಾಯಬೇಕಾಗಿದೆ.

ಉತ್ತರ ಕರ್ನಾಟಕದ 14 ಲೋಕಸಭಾ ಕ್ಷೇತ್ರಗಳಿಗೆ ನಡೆದ ಚುನಾವಣೆ ಯಲ್ಲಿ ಶೇ.70ರಷ್ಟು ಮತದಾನ ನಡೆಯುವ ಮೂಲಕ, ಏ.27ರಂದು ನಡೆದಿದ್ದ ಮೊದಲ ಹಂತದ ಮತದಾನಕ್ಕಿಂತ ಹೆಚ್ಚಿನ ಮತದಾನವಾಗಿದೆ. ಚಿಕ್ಕೋಡಿಯಲ್ಲಿ ಶೇ.78.60 ಮತದಾನವಾಗಿದ್ದು, ಮೊದಲ ಸ್ಥಾನದಲ್ಲಿದ್ದರೆ, ಶೇ.62.25 ರಷ್ಟು ಮತದಾನವಾಗಿರುವ ಗುಲ್ಬರ್ಗಾ ಕೊನೆಯ ಸ್ಥಾನದಲ್ಲಿದೆ.

ಚುನಾವಣೆ ನಡೆದ ಬಹುತೇಕ ಕ್ಷೇತ್ರಗಳಲ್ಲಿ ಭಾರಿ ಬಿಸಿಲಿನ ಕಾರಣ ದಿಂದಾಗಿ ಅನೇಕ ಮತದಾರರು ನೆತ್ತಿಗೆ ಬಿಸಲು ಬರುವ ಮೊದಲೇ, ಮತದಾನ ಮಾಡಿ ಮನೆ ಸೇರಿಸಿ ಕೊಂಡಿದ್ದರು. ಇನ್ನು ಕೆಲವರು ಸಂಜೆ 4ರ ಬಳಿಕ ಮತಗಟ್ಟೆಯತ್ತ ಬಂದ ರು. ಅಲ್ಲಲ್ಲಿ ಸಣ್ಣಪುಟ್ಟ ಗೊಂದಲ ಹೊರತುಪಡಿಸಿ, ಕೆಲವೆಡೆ ಮತ ಯಂತ್ರ ದೋಷದಿಂದ ಮತದಾನ ವಿಳಂಬವಾಗಿದ್ದನ್ನು ಹೊರತುಪಡಿಸಿದರೆ, ಬಹುತೇಕ ಭಾಗದಲ್ಲಿ ಶಾಂತಿ ಯುತವಾಗಿ ಮತದಾನ ನಡೆದಿದೆ.

ಎರಡನೇ ಹಂತದಲ್ಲಿ 14 ಕ್ಷೇತ್ರಗಳ 227 ಅಭ್ಯರ್ಥಿಗಳ ರಾಜಕೀಯ ಭವಿಷ್ಯವನ್ನು ಮತದಾರ ನಿರ್ಧರಿಸಿದ್ದಾರೆ. ಎರಡನೇ ಹಂತದ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ಮತ ಚಲಾಯಿಸಿದ್ದಾರೆ. ಬಿರು ಬಿಸಿಲಿನ ಕಾರಣ ಹಲವೆಡೆ ಮತದಾರರಿಗೆ ತಂಪು ಪಾನೀಯ ವ್ಯವಸ್ಥೆಯನ್ನೂ ಮಾಡಲಾಗಿದ್ದು, ಪೆಂಡಾಲ್ ಹಾಕಿ ಬಿಸಿಲಿನ ಝಳದಿಂದ ಜನರನ್ನು ರಕ್ಷಿಸುವ ವ್ಯವಸ್ಥೆಯನ್ನೂ ಮಾಡಲಾಗಿತ್ತು.

# ದೇಹ ದುರ್ಬಲವಾದರೂ ದೇಶದ ಹಂಬಲ




ನನ್ನಪ್ಪನಿಗೆ ಈಗ 84 ವರ್ಷ ! ಅವರ ಮನಸ್ಸು ಸ್ವಸ್ಥವಾಗಿದೆ. ನೆನಪಿನ ಶಕ್ತಿಯೋ ಊಹಿಸಲೂ ಅಸಾಧ್ಯವಾದಷ್ಟು ಗಟ್ಟಿ ಇದೆ . ಆದರೆ ದೇಹಕ್ಕೆ ಬಾಧೆ . ಕೈ ಕಾಲು ಕ್ಷಣವೂ ವಿರಮಿಸದೆ ಕಂಪಿಸುತ್ತವೆ . ನಡೆಯಲು -ಓಡಾಡಲು ಸಾಧ್ಯವೇ ಇಲ್ಲವೆನ್ನುವಷ್ಟು ಕಂಪನ. ಅವರ ಆರೋಗ್ಯದ ದಿನಗಳಲ್ಲಿ ಅವರು ಸದಾ ಸಮಾಜಮುಖಿಯಾಗಿ ಬದುಕನ್ನು ರೂಪಿಸಿಕೊಂಡವರು . ರಕ್ತದಾನದಲ್ಲಿ ಶತಕ ಬಾರಿಸಿದವರು !!! ಆದರೂ ಇಳಿ ವಯಸ್ಸಿನ ಈ ಬವಣೆಯನ್ನು ಮೌನವಾಗಿದ್ದು ಅನುಭವಿಸುತ್ತಿರುವ ಹಿರಿಯ ಜೀವ .

ಈ ಬಾರಿಯ ಚುನಾವಣೆ ದಿನಾಂಕ ಘೋಷಣೆ ಆದಲ್ಲಿಂದ ಅಪ್ಪನದು ಒಂದೇ ಒರಾತ. ನಾನು ಓಟ್ ಹಾಕ್ಬೇಕು !!!! ಚುನಾವಣಾ ಆಯೋಗ ಮನೆಗೆ ಬಂದು ಹಿರಿಯ ನಾಗರೀಕರ ಮತ ಪಡೆಯುತ್ತಾರೆ ಎಂದು ತಿಳಿದು ಸಂಪರ್ಕಿಸಿದಾಗ 85 ವರ್ಷ ದಾಟಿದ ಹಿರಿಯರಿಗೆ ಮಾತ್ರ ಆ ಸೌಲಭ್ಯವಿರುವುದೆಂದು ಸ್ಪಷ್ಟವಾಯಿತು .

ಮತದಾನದ ದಿನ ಬೆಳಗಿನಿಂದ ಅಪ್ಪ ಅತಿ ಉತ್ಸಾಹದಿಂದ ಓಟ್ ಮಾಡುವ ಸಮಯಕ್ಕಾಗಿ ಕಾಯುತ್ತಿದ್ದರು. ನನ್ನ ಮಿತ್ರರ ಸಹಾಯದಿಂದ ಆ್ಯಂಬುಲೆನ್ಸ್ ಮೂಲಕ ಈ ಸುಡುವ ಬೇಸಿಗೆ ಬಿಸಿಲಿನಲ್ಲಿಯೂ ಅಪ್ಪನನ್ನು ಮತೆಗಟ್ಟೆಗೆ ಕರೆದೊಯ್ದು ಮತದಾನ ಮಾಡಿಸಿದಾಗ ಅವರ ನಿಶಕ್ತ ಮುಖದಲ್ಲೂ ಒಂದು ಸಾರ್ಥಕತೆಯ ನಗು ಮಿಂಚಿತ್ತು !!! ಸ್ವತಃ ವ್ಹೀಲ್ ಚೇರ್‌ನಲ್ಲಿರುವ ಅಪ್ಪನಿಗೆ , ತನ್ನ ದೇಶ ಸ್ವಾವಲಂಬಿಯಾಗಿ, ಆತ್ಮನಿರ್ಭರವಾಗಿ ಬೆಳೆಯಬೇಕೆಂಬ ಹಂಬಲ. ಭಾರತ ಸ್ವಾತಂತ್ರ್ಯ ಪಡೆದ ದಿನದಿಂದ ದೇಶದ ಆಗು ಹೋಗುಗಳನ್ನು ಹತ್ತಿರದಿಂದ ನೋಡಿರುವ ನನ್ನ ಅಪ್ಪನ ತಲೆಮಾರಿನವರಿಗೆ ಬದಲಾದ ಭಾರತದ ಸ್ಪಷ್ಟ ಚಿತ್ರಣ ಸಿಗುತ್ತದೆ . ಹಾಗಾಗಿಯೇ ಅಪ್ಪ ಓಟ್ ಮಾಡಲೇಬೇಕೆಂಬ ಹಟಕ್ಕೆ ಬಿದ್ದಿದ್ದು. ಅಸಲಿಗೆ ಭಾರತವಿಂದು ವಿಶ್ವದ ಭೂಪಟದಲ್ಲಿ ಸದ್ದು ಮಾಡುತ್ತಿರುವುದು ನನ್ನ ಅಪ್ಪನಂತಹ ಲಕ್ಷಾಂತರ ಅನಾಮಧೇಯ, ಸಾಮಾನ್ಯ ನಾಗರೀಕರ ಸಂಕಲ್ಪ ಶಕ್ತಿಯೂ ಕಾರಣವವೆಂದು ನಾನು ಬಲವಾಗಿ ನಂಬುತ್ತೇನೆ!

ಚುನಾವಣೆ ಎಂದರೆ ಮೂಗು ಮುರಿಯುವ , ಚುನಾವಣೆ ದಿನದಂದೇ ಔಟಿಂಗ್ ಹೋಗುವ, ಮತದಾನ ಮಾಡದೇ ಸರ್ಕಾರವನ್ನು ಅಥವಾ ಈ ದೇಶವನ್ನು ಸದಾ ಹೀಗಳೆಯುವ ಅಭಿಮಾನಶೂನ್ಯ ಮಂದಿಗೆ ಅಸಹಾಯಕತೆಯಲ್ಲೂ ಕರ್ತವ್ಯ ಪ್ರಜ್ಞೆ ಮೆರೆದ ಅಪ್ಪನ ಆ ಒಂದು ಓಟು ಅರ್ಪಣೆಯಾಗಲಿ . ದೇಶದ ಭವಿಷ್ಯದ ಕುರಿತು ಚಿಂತಿಸದೇ ಸ್ವಾರ್ಥದ ಬದುಕನ್ನೇ ರೂಪಿಸಿಕೊಂಡಿರುವ ಮಂದಿಗೆ '' ದೇಶವಿದ್ದರೆ ಮಾತ್ರ ನಮ್ಮ ಅಸ್ತಿತ್ವ'' ಎಂಬ ಪರಮ ಸತ್ಯವನ್ನು ಅರ್ಥ ಮಾಡಿಸುವುದು ಹೇಗೆ??!! .

ಮತದಾನ ನಮ್ಮ ಹಕ್ಕಲ್ಲ ಕರ್ತವ್ಯ .. ಹಕ್ಕು ಎಂದರೆ ಅಲ್ಲಿ ಆಗ್ರಹವಿದೆ , ಕರ್ತವ್ಯವೆಂದರೆ ಅಲ್ಲಿ ಪ್ರೀತಿ ಇದೆ , ದೇಶಭಕ್ತಿ ಇದೆ. ಹಿರಿಯರ ಸತ್ಸಂಕಲ್ಪದ, ಆಶೀರ್ವಾದದ ಬಲದಿಂದ ಈ ದೇಶ ಇನ್ನಷ್ಟು ಔನತ್ಯ ಹೊಂದಲಿ . ಇದೇ ಹೃದಯಾಂತರಾಳದ ಹಾರೈಕೆ.

**- ವಿನಯ್, ಶಿವಮೊಗ್ಗ**

**(ಫೇಸ್‌ಬುಕ್ ಕೃಪೆ)**

# ಥೀಮ್ ಆಧಾರಿತ ಮತದಾನ ಕೇಂದ್ರಗಳು





ಚಾಮರಾಜನಗರ






ದಕ್ಷಿಣ ಕನ್ನಡ – ಉಡುಪಿ



ಕನಕಪುರ




ಮಂಗಳೂರು



ಮೈಸೂರು



# ವಿಕಸಿತ ಭಾರತದ ವಿರುದ್ಧ ವಿದೇಶಿಗಳ ಹುನ್ನಾರ...



**ಅಜಿತ್ ಶೆಟ್ಟಿ ಹೆರಂಜೆ**
**ಸಹ ಸಂಚಾಲಕರು**
**ರಾಜ್ಯ ಪ್ರಕಾಶನ ಪ್ರಕೋಷ್ಠ**

**ಕ**ರ್ನಾಟಕದಲ್ಲಿ 2024 ಲೋಕಸಭಾ ಚುನಾವಣೆಯ ಎರಡೂ ಹಂತದ ಚುನಾವಣೆ ಮುಗಿದಿದ್ದು, ದೇಶದ ಉಳಿದ ಕಡೆಯೂ ಚುನಾವಣಾ ಕಾರ್ಯ ಪ್ರಗತಿಯಲ್ಲಿದೆ. ಪ್ರಧಾನಿ ನರೇಂದ್ರ ಮೋದಿಯವರು ಹಿಂದಿಗಿಂತಲೂ ಹೆಚ್ಚಿನ ಸ್ಥಾನಗಳೊಂದಿಗೆ ಗೆದ್ದು ಮೂರನೇ ಬಾರಿಗೆ ದೇಶದ ಗದ್ದುಗೆ ಏರುವುದು ನಿಶ್ಚಿತ. ವರ್ತಮಾನದ ರಾಜಕಾರಣದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಔಚಿತ್ಯವನ್ನು ಕಳೆದುಕೊಳ್ಳುತ್ತಿದೆ. 2014ರಲ್ಲಿ 44 ಸ್ಥಾನ, 2019ರಲ್ಲಿ 52 ಸ್ಥಾನ ಪಡೆದ ಕಾಂಗ್ರೆಸ್ ಅಧಿಕೃತ ವಿರೋಧ ಪಕ್ಷದ ಸ್ಥಾನವನ್ನೂ ಪಡೆಯಲು ವಿಫಲವಾಯಿತು. ಈಗ 2024ರ ಚುನಾವಣೆಯಲ್ಲಿ ನರೇಂದ್ರ ಮೋದಿಯವರ ಎನ್‌ಡಿಎ ಒಕ್ಕೂಟವನ್ನು ಎದುರಿಸಲು ಅಂದು ಕಾಂಗ್ರೆಸ್‌ನ್ನು ವಿರೋಧಿಸುತ್ತಿದ್ದ ಪಕ್ಷಗಳೇ ತಮ್ಮ ಸೈದ್ಧಾಂತಿಕ ಚಿಂತನೆಯನ್ನು ಬದಿಗಿಟ್ಟು ಇಂಡಿ ಒಕ್ಕೂಟವನ್ನು ಮಾಡಿಕೊಂಡು ಚುನಾವಣೆಯನ್ನು ಎದುರಿಸುತ್ತಿದ್ದಾರೆ. ಬಹುಮತ ಸಿಕ್ಕಿದರೆ ಇವರಲ್ಲಿ ಪ್ರಧಾನಿ ಯಾರಾಗುತ್ತಾರೆ ಎಂಬುದಕ್ಕೆ ಸ್ಪಷ್ಟತೆ ಇಲ್ಲದ ಈ ಒಕ್ಕೂಟಕ್ಕೆ ಪ್ರಧಾನಿ ನರೇಂದ್ರ ಮೋದಿಯವರನ್ನು ಸೋಲಿಸುವುದನ್ನು ಬಿಟ್ಟರೆ ಮತ್ತಿನ್ನಾವುದೇ ಉದ್ದೇಶಗಳಿಲ್ಲ. ಇದಕ್ಕಾಗಿ ಕೀಳು ರಾಜಕಾರಣದ ನಡೆ ನುಡಿಗಳನ್ನು ಆರಂಭಿಸಿ ಬಿಟ್ಟಿದ್ದಾರೆ.

### ಹೆಚ್ಚುತ್ತಿರುವ ಪ್ರಧಾನಿ ಮೋದಿಯವರ ವರ್ಚಸ್ಸು

ಕಳೆದ 10 ವರ್ಷದಲ್ಲಿ ವಿಶ್ವಮಟ್ಟದಲ್ಲಿ ಪ್ರಧಾನಿ ಮೋದಿಯವರ ವರ್ಚಸ್ಸು ಬಹಳಷ್ಟು ವೃದ್ಧಿಸಿದೆ. ವಿಶ್ವದ ಅತ್ಯಂತ ಪ್ರಭಾವಿ ನಾಯಕರ ಪಟ್ಟಿಯಲ್ಲಿ ಪ್ರಧಾನಿ ಮೋದಿಯವರು ಅಗ್ರಸ್ಥಾನದಲ್ಲಿದ್ದಾರೆ. ಕಳೆದ 10 ವರ್ಷದಲ್ಲಿ ಅತ್ಯಂತ ಕ್ಲಿಷ್ಟ ಸಂದರ್ಭಗಳಲ್ಲಿಯೂ ದೇಶದ ಹಿತಾಸಕ್ತಿಗೆ ವಿರುದ್ಧವಾದ ಯಾವ ನಿರ್ಧಾರಗಳನ್ನು ಮೋದಿ ಸರಕಾರ ತೆಗೆದುಕೊಳ್ಳಲಿಲ್ಲ. 2014ರ ಅಮೆರಿಕಾದ ತನ್ನ ಮೊದಲ ಪ್ರವಾಸದಿಂದ ಹಿಡಿದು ಇತ್ತೀಚಿನ ಇಸ್ರೇಲ್ ಮತ್ತು ಹಮಾಸ್ ಯುದ್ಧದ ತನಕ ಮೋದಿ ಸರಕಾರದ ವಿದೇಶಾಂಗ ನೀತಿಗಳು ವಿಶ್ವದ ಸಮಸ್ಯೆಗಳಿಗೆ ಪೂರಕವಾಗಿ ಸ್ಪಂದಿಸಿದ ಕಾರಣ ಪ್ರಧಾನಿ ಮೋದಿ ವಿಶ್ವದ ಅತ್ಯಂತ ಗಟ್ಟಿ ನಾಯಕರಾಗುವಲ್ಲಿ ಸಫಲರಾದರು. ಕೋವಿಡ್ ಸೇರಿದಂತೆ ಇನ್ನಿತರ ಅಂತರಾಷ್ಟ್ರೀಯ ಬಿಕ್ಕಟ್ಟಿನ ಸಂದರ್ಭಗಳಲ್ಲಿ ವಿಶ್ವಸಂಸ್ಥೆ ತನ್ನ ಕರ್ತವ್ಯವನ್ನು ಸಮರ್ಥವಾಗಿ ನಿಭಾಯಿಸದಿದ್ದಲ್ಲಿ ಮೊದಲು ಟೀಕಿಸಿದ್ದು ಮೋದಿ ಸರಕಾರ. ಚೀನಾ ಮತ್ತು ಪಾಕಿಸ್ಥಾನಗಳು ಭಾರತದ ಗಡಿಯಲ್ಲಿ ಅತಿಕ್ರಮಣ ಮಾಡಿದಾಗ ಅದೇ ಭಾಷೆಯಲ್ಲಿ ಪ್ರತ್ಯುತ್ತರ ನೀಡಿದ್ದು ವೋದಿ ಸರಕಾರ. ನೇಪಾಳದ ಭೂಕಂಪ, ಮಾಲ್ಡೀವ್ಸ್‌ನ ಜಲಕ್ಷಾಮ, ಟರ್ಕಿಯ ಭೂಕಂಪ ಪೀಡಿತ ಸಮಸ್ಯೆಗಳನ್ನು ನಿಭಾಯಿಸಲು ತನ್ನ ವಿಪತ್ತು ನಿರ್ವಹಣಾ ಪಡೆಗಳನ್ನು ಕಳುಹಿಸಿ ಸಹಾಯ ಹಸ್ತ ತೋರಿದ್ದು ಮೋದಿ ಸರಕಾರ. ಅತ್ಯಂತ ಸಂಕಷ್ಟದ

ಪರಿಸ್ಥಿಯಲ್ಲಿ ವಿದೇಶಗಳಿಂದ ಭಾರತೀಯರ ರಕ್ಷಣೆ, ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆ, ಭಾರತೀಯ ರಕ್ಷಣಾ ಉತ್ಪನ್ನಗಳ ರಫ್ತಿನಲ್ಲಿ ವೃದ್ಧಿ, ಕಾಶ್ಮೀರದೊಳಗಿನ ಉಗ್ರಗಾಮಿ ಚಟುವಟಿಕೆಯ ನಿಯಂತ್ರಣ ಹೀಗೆ ಅನೇಕ ಕೆಲಸಗಳು ಕಳೆದ ಹತ್ತು ವರ್ಷದಲ್ಲಿ ಭಾರತ ಮತ್ತು ಪ್ರಧಾನಿ ಮೋದಿಯವರ ಬಗ್ಗೆ ವಿಶ್ವ ಮಟ್ಟದಲ್ಲಿ ಉತ್ತಮ ಅಭಿಪ್ರಾಯ ಮೂಡಿಸಲು ಕಾರಣವಾಯಿತು. ಮೋದಿಯವರ ಈ ವರ್ಚಸ್ಸನ್ನು ಹಣಿಯಲು ದೇಶದ ಒಳಗೆ ಮತ್ತು ಹೊರಗೆ ಅನೇಕ ಯೋಜನೆಗಳು ರೂಪಗೊಂಡವು.

## ಪಕ್ಷಗಳ ಮಿಥ್ಯಾರೋಪ

ಮೋದಿಯವರ ವರ್ಚಸ್ಸಿಗೆ ಧಕ್ಕೆ ತರಲು ಕಾಂಗ್ರೆಸ್ ಸೇರಿದಂತೆ ಇಂಡಿ ಒಕ್ಕೂಟದ ವಿರೋಧಪಕ್ಷಗಳು ಮೋದಿ ಸರಕಾರದ ನೀತಿಗಳ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿತು ಇಲ್ಲವೇ, ಗಲಭೆಗಳನ್ನು ಸೃಷ್ಟಿ ಮಾಡಿ ಜನರ ದಿಕ್ಕು ತಪ್ಪಿಸುವ ಕೆಸಲ ಮಾಡಿತು. ರಫೇಲ್ ಯುದ್ಧ ವಿಮಾನ ಖರೀದಿ ಪ್ರಕರಣದಲ್ಲಿ ನ್ಯಾಯಾಲಯಕ್ಕೂ ಹೋಗಿ ಹಿನ್ನಡೆ ಅನುಭವಿಸಿತು. ಪೆಗಸಿಸ್ ಮೂಲಕ ಮೋದಿ ಸರಕಾರ ದೇಶದ ರಾಜಕಾರಣಿಗಳ ಮೇಲೆ ಬೇಹುಗಾರಿಕೆ ನಡೆಸುತ್ತಿದೆ ಎಂಬ ವಿದೇಶಿ ಮಾಧ್ಯಮದ ವರದಿಯನ್ನು ಆಧರಸಿಕೊಂಡು ಪ್ರತಿಭಟನೆಗಳನ್ನು ಮಾಡಿ, ಕಾನೂನು ಹೋರಾಟದಲ್ಲೂ ಸೋಲನುಭವಿಸಿತು. ದೇಶದ ಅತ್ಯಂತ ಗೌರವಾನ್ವಿತ ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗದ ನಡವಳಿಕೆ ಬಗ್ಗೆ ಇದೇ ಕಾಂಗ್ರೆಸ್ ಮಿತ್ರ ಮಂಡಳಿ ಅಪಪ್ರಚಾರ ಮಾಡಿತು. ತನ್ನ ಕಾಲದಲ್ಲೇ ಜಾರಿಗೆ ತಂದ ಇವಿಎಮ್ ಯಂತ್ರಗಳ ಬಗ್ಗೆ ದೇಶದ ಒಳಗೆ ಹೊರಗೆ ಅಪಪ್ರಚಾರ ಮಾಡಿ, ಅದರ ವಿಶ್ವಾಸಾರ್ಹತೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ ಸೋಲನುಭವಿಸಿತು.

ಕೋವಿಡ್ ಸಂದರ್ಭದಲ್ಲಿ ಲಸಿಕೆಯ ಬಗ್ಗೆ ಇದು ಬಿಜೆಪಿ ಲಸಿಕೆ, ಪಡೆದರೆ ಮರಣ ನಿಶ್ಚಿತ ಎಂದು ಅಪಪ್ರಚಾರ ಮಾಡಿತು. ಹೊಸ ಕೃಷಿ ನೀತಿಯ ವಿರುದ್ಧ ರೈತರ ಮುಖವಾಡ ಧರಿಸಿ ಖಾಲಿಸ್ಥಾನಿ ಉಗ್ರರು ಮಾಡಿದ ಪ್ರತಿಭಟನೆಗೆ ಕಾಂಗ್ರೆಸ್ ಮಿತ್ರಮಂಡಳಿ ಸಂಪೂರ್ಣ ಸಹಕಾರ ನೀಡಿತು. ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ಪರೋಕ್ಷ ಹಾಗೂ ಪ್ರತ್ಯಕ್ಷ ಬೆಂಬಲದ ಕಾರಣದಿಂದ ಈ ಸಮಾಜ ಘಾತುಕರು ದೆಹಲಿಯ ಕೆಂಪು ಕೋಟೆಗೆ ನುಗ್ಗಿ ರಾಷ್ಟ್ರ ಧ್ವಜಕ್ಕೂ ಅಪಚಾರ ಎಸಗಿದರು. ಸಿಎಎ ಹೆಸರಿನಲ್ಲಿ ದೇಶಾದ್ಯಂತ ದಂಗೆಗಳನ್ನು ಮಾಡುವ ಸಂಚನ್ನು ರೂಪಿಸಿದರು. ದೇಹಲಿಯ ಶಾಹಿನ್ ಬಾಗ್‌ನಲ್ಲಿ ಹಿಂಸಾಚಾರಕ್ಕೆ ತಿರುಗಿ ಆಸ್ತಿಪಾಸ್ತಿ ನಷ್ಟಕ್ಕೆ ಕಾರಣವಾಯಿತು. ಮಣಿಪುರದ ಪ್ರತಿಭಟನೆಯನ್ನು ಇಡೀ ದೇಶಕ್ಕೆ ತರುವ ಪ್ರಯತ್ನವಾಯಿತು. ಬಹುತೇಕ ಈ ದಂಗೆಗಳ ಉದ್ದೇಶ ಕೇವಲ ಅಶಾಂತಿ ಮೂಡಿಸುವ ಪ್ರಯತ್ನದ ಜೊತೆಗೆ ಮೋದಿ ಸರಕಾರವನ್ನು ಪ್ರಚೋದಿಸಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಮಾಡುತ್ತಿದೆ ಎಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಛೀಮಾರಿ ಹಾಕಿಸುವ ಹುನ್ನಾರವೂ ನಡೆಯಿತು.

## ವಿದೇಶಗಳ ಕುಮ್ಮಕ್ಕು

ದೇಶದೊಳಗೆ ಈ ಪರಿಸ್ಥಿತಿಯಾದರೆ, ಅಮೇರಿಕಾ ಯುರೋಪ್ ಮುಂತಾದ ದೇಶಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಭಾರತ ವಿರೋಧಿ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಡಲಾಯಿತು. ಕಳೆದ ಹತ್ತು ವರ್ಷದಲ್ಲಿ ಖಾಲಿಸ್ಥಾನಿ ಉಗ್ರವಾದಕ್ಕೆ ಇಂಗ್ಲೆಂಡ್, ಅಮೇರಿಕಾ ಮತ್ತು ಕೆನಡಾದಂತಹ ದೇಶಗಳಲ್ಲಿ ವೇದಿಕೆಗಳನ್ನು ಒದಗಿಸಲಾಯಿತು. ಈ ಉಗ್ರರು ಅಲ್ಲಿಯ ಅನಿವಾಸಿ ಭಾರತೀಯರ ಮೇಲೆ ಹಲ್ಲೆ ಮಾಡಿದ್ದಲ್ಲದೆ ಭಾರತೀಯ ರಾಯಭಾರಿ ಕಚೇರಿಗೆ ನುಗ್ಗಿ ಭಾರತದ ಧ್ವಜಕ್ಕೆ ಅವಮಾನಿಸಿದರು. ಭಾರತೀಯ ರಾಯಭಾರಿ ಅಧಿಕಾರಿಗಳಿಗೆ ಜೀವ ಬೆದರಿಕೆ ಹಾಕುವ ಪ್ರಯತ್ನವೂ ನಡೆಯಿತು. ಆಸ್ಟ್ರೇಲಿಯಾದಲ್ಲಿ ಇದೇ ಉಗ್ರರು ಭಾರತೀಯರ ಮೇಲೆ ಹಲ್ಲೆ ಮಾಡಿದರು. ಕೆನಡಾದ ಅಧ್ಯಕ್ಷ ಜಸ್ಟಿ ಟ್ರೂಡೋ ಈ ಉಗ್ರಗಾಮಿ ಸಂಘಟನೆಗಳಿಗೆ ಬಹಿರಂಗ ಬೆಂಬಲವನ್ನೇ ಘೋಷಿಸಿದನು. ಭಾರತದಲ್ಲಾದ ರೈತರ ಹೆಸರಿನ ಚಳುವಳಿಗೆ ಇದೇ ಟ್ರೂಡೋ ತನ್ನ ಬೆಂಬಲವನ್ನು ಕೊಟ್ಟಿದ್ದನ್ನೂ ಇಲ್ಲಿ ಉಲ್ಲೇಖಿಸಬಹುದು.

ಮೋದಿ ಸರಕಾರ ಯಾವುದೇ ಭಾರತ ವಿರೋಧಿ ಚಟುವಟಿಕೆಗೆ ತನ್ನ ನೆಲವನ್ನು ಬಳಸಲು ಬಿಡಬಾರದು ಎನ್ನುವ ಎಚ್ಚರಿಕೆಯನ್ನು ಕೆನಡಾಗೆ ನೀಡಿ ಆ ದೇಶದ ರಾಜತಾಂತ್ರಿಕರನ್ನು ವಾಪಸ್ ಕಳುಹಿಸಿ ಪ್ರತಿಭಟಿಸಿತು. ಇನ್ನು ಅಮೇರಿಕಾ ಕೂಡ ಈ ಖಾಲಿಸ್ಥಾನಿ ಉಗ್ರರ ನಾಯಕ, ಸಿಖ್ ಫಾರ್ ಜಸ್ಟೀಸ್ ಎನ್ನುವ ಉಗ್ರಗಾಮಿ ಸಂಘಟನೆಯ ಮುಖಂಡ ಗುರುಪತ್ವಂತ್ ಸಿಂಗ್ ಪನ್ನುಗೆ ರಕ್ಷಣೆ ಕೊಡುತ್ತಲೆ ಬಂದಿದೆ. ಆತ ಅಲ್ಲಿಂದಲೇ ಭಾರತದ ವಿಮಾನಗಳನ್ನು ಸ್ಫೋಟಿಸುವ, ಪ್ರಧಾನಿ ಮೋದಿಯವರನ್ನು ಹತ್ಯೆ ಮಾಡುವ ಬೆದರಿಕೆ ಹಾಕಿದಾಗಲೂ ಅದನ್ನು ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಸಮರ್ಥಿಸಿದರು. ಇದೇ ಪನ್ನು ಆಮ್ ಆದ್ಮಿ ಪಕ್ಷಕ್ಕೆ ಸುಮಾರು 300 ಕೋಟಿ ರೂಪಾಯಿಗಳಷ್ಟು ಹಣವನ್ನು ಸಂಗ್ರಹಿಸಿ ಕೊಟ್ಟಿರುವ ಬಗ್ಗೆ ಮಾಹಿತಿಗಳು ಈಗ ಬಹಿರಂಗವಾಗಿದೆ. ಅಮೆರಿಕಾ ಲಂಡನ್ ಮುಂತಾದ ದೇಶಗಳಲ್ಲಿ ರಾಹುಲ್ ಗಾಂಧಿಯೇ ಭಾರತ ವಿರೋಧಿ ಹೇಳಿಕೆ ಕೊಡುತ್ತಾರೆ. ಭಾರತದ ಆರ್ಥಿಕ ವ್ಯವಸ್ಥೆಗೆ ಪೆಟ್ಟು ಕೊಡಲು ಭಾರತದ ಉದ್ಯೋಗಪತಿಗಳ ಬಗ್ಗೆ ಅಪ ಪ್ರಚಾರ, ಮಾಡುವುದು, ಸುಳ್ಳು ವರದಿಗಳನ್ನು ಸೃಷ್ಟಿ ಮಾಡಿ ಅವರ ವ್ಯವಹಾರಗಳಲ್ಲಿ ನಷ್ಟವನ್ನು ತರುವ ಪ್ರಯತ್ನಗಳೂ ಆದವು. ಇತ್ತೀಚೆಗೆ ಅದಾನಿ ಕಂಪನಿಯ ವಿರುದ್ಧ ಹಿಂಡನ್ ಬರ್ಗ್ ವರದಿ ಸೃಷ್ಟಿ ಮಾಡಿದ ಅವಾಂತರ ಎಲ್ಲರಿಗೂ ತಿಳಿದೇ ಇದೆ.

## ದೇಶದೊಳಗಿನ ವಿರೋಧಿಗಳಿಗೆ ವಿದೇಶಿ ಶಕ್ತಿಗಳ ಕುಮ್ಮಕ್ಕು

ವಿಶ್ವದ ಬಲಿಷ್ಠ ದೇಶಗಳು ಭಾರತ ಶಕ್ತಿಶಾಲಿಯಾಗುವುದನ್ನು ಬಯಸುತ್ತಿಲ್ಲ. ಜಾಗತಿಕ ವಿದ್ಯಮಾನಗಳಲ್ಲಿ ಅಮೇರಿಕ, ಚೀನಾಗಳು ಈಗಾಗಲೇ ತನ್ನ ಹಿತಾಸಕ್ತಿಯನ್ನು ಮಾತ್ರ ಯೋಚಿಸುವ ಬಲಿಷ್ಟ ರಾಷ್ಟ್ರಗಳಾಗಿವೆ. ಮೋದಿಯವರ ಆಡಳಿತವೇ ಮುಂದುವರಿದರೆ ಭಾರತವೂ ಸಹ ಅಮೇರಿಕಾ ಮತ್ತು ಚೀನಾಗಳಂತೆ ಇನ್ನೊಂದು ಶಕ್ತಿ

ಕೇಂದ್ರವಾಗಿ ಬೆಳೆಯುತ್ತದೆ ಎಂಬ ಆತಂಕ ವಿಶ್ವದ ಬಹುತೇಕ ಬಲಿಷ್ಟ ರಾಷ್ಟಗಳಿಗಿದೆ. ಆ ಕಾರಣ ಈ ಚುನಾವಣೆಯಲ್ಲಿ ಪ್ರಧಾನಿ ಮೋದಿಯವರನ್ನು ಶತಾಯ ಗತಾಯ ಸೋಲಿಸಲೇ ಬೇಕು ಎಂಬ ನಿರ್ಧಾರ ಮಾಡಿರುವ ಇವರು, ಇಂಡಿ ಒಕ್ಕೂಟದ ಪಕ್ಷಗಳಿಗೆ ಸಹಕಾರ ಕೊಡುತ್ತಿವೆ. ಚುನಾವಣೆಯ ನಡುವಿನಲ್ಲೇ ಭಾರತದ ಕೋವಿಡ್ ಲಸಿಕೆಯಲ್ಲಿ ಜೀವ ಹಾನಿಕರ ಅಂಶ ಇದೆ ಎಂದು ಲಂಡನ್ನಿನಲ್ಲಿ ಪ್ರಕಟವಾದ ಸುದ್ದಿಯನ್ನಾಧರಿಸಿ, ದೇಶದ ವಿರೋಧ ಪಕ್ಷಗಳು ಮೋದಿವರನ್ನು ಜೈಲಿಗೆ ಹಾಕುವಂತೆ ಒತ್ತಾಯ ಮಾಡುತ್ತಾರೆ. ವಿದೇಶಿ ಏ.ಐ ತಂತ್ರಜ್ಞಾನ ಬಳಸಿ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಗಳನ್ನು ತಿರುಚಿ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯ ಬಿಡಲಾಗುತ್ತಿದೆ.

ಕೆಲ ತಿಂಗಳುಗಳ ಹಿಂದೆ ಅಮೇರಿಕಾದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಮತ್ತೊಮ್ಮೆ ಮೋದಿ ಅಧಿಕಾರಕ್ಕೆ ಬಂದರೆ ಭಾರತ ಆರ್ಥಿಕತೆ ಕುಸಿಯುತ್ತದೆ ಎಂಬ ಹೇಳಿಕೆ ಕೊಡುತ್ತಾರೆ. ಅದೇ ಅರ್ಥ ಬರುವ ಹೇಳಿಕೆಯನ್ನು ಅಮೇರಿಕಾದ ಈಗಿನ ಅಧ್ಯಕ್ಷ ಜೋ ಬೈಡನ್ ತಮ್ಮ ಚುನಾವಣಾ ಭಾಷಣದಲ್ಲಿ ಮಾಡುತ್ತಾರೆ. ಪಾಕಿಸ್ಥಾನದ ಮಾಜಿ ಐಟಿ ಸಚಿವ ಫವಾದ್ ಚೌಧರಿ ಭಾರತಿಯ ಮುಸಲ್ಮಾನರಿಗೆ ಮೋದಿಯನ್ನು ವಿರೋಧಿಸಿ ರಾಹುಲ್ ಗಾಂಧಿಯನ್ನು ಬೆಂಬಲಿಸಿ ಮತ ಹಾಕುವಂತೆ ಹೇಳುತ್ತಾನೆ. ಭಾರತದ ಮಾಜಿ ವಿದೇಶಾಂಗ ಸಚಿವ ಸಲ್ಮಾನ್ ಖುರ್ಷಿದ್ ಮಗಳು ಚುನಾವಣೆ ಪ್ರಚಾರ ಸಭೆಯಲ್ಲಿ ಮುಸಲ್ಮಾನರು ಈ ಭಾರಿ ವೋಟ್ ಜಿಹಾದ್ ಮಾಡಬೇಕು ಅನುತ್ತಾರೆ. ಕರ್ನಾಟಕದ ಪ್ರಜ್ವಲ್ ರೇವಣ್ಣ ಪ್ರಕರಣವನ್ನು ನೇರವಾಗಿ ಪ್ರಧಾನಿ ಮೋದಿಯವರಿಗೆ ಥಳಕು ಹಾಕುವ ಪ್ರಯತ್ನ ರಾಜ್ಯ ಕಾಂಗ್ರೆಸ್ ಮಾಡುತ್ತಿದೆ. ಮತ್ತೆ ಇದಕ್ಕೆ ಭಾರತ ವಿರೋಧಿ ವಿದೇಶಿ ಮಾಧ್ಯಮಗಳು ಸಂಪೂರ್ಣ ಪ್ರಚಾರ ಕೊಡುತ್ತಿವೆ.

ಇದೆಲ್ಲವನ್ನೂ ಒಟ್ಟಾಗಿ ನೋಡಿದಾಗ ಈಗ ನಡೆಯುತ್ತಿರುವ ಲೋಕಸಭಾ ಚುನಾವಣೆಯಲ್ಲಿ ಭಾರತದ ಪರವಾಗಿ ನಿಂತಿರುವುದು ಕೇವಲ ಭಾರತದ ಪ್ರಜ್ಞಾವಂತ ಮತದಾರರು ಮತ್ತು ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ ಮಿತ್ರಪಕ್ಷಗಳು ಮಾತ್ರ. ಇನ್ನು ಉಳಿದಂತೆ ಭಾರತದ ಇಂಡಿ ಒಕ್ಕೂಟದ ಮಿತ್ರಪಕ್ಷಗಳು ಸೇರಿದಂತೆ ಭಾರತ ವಿರೋಧಿ ಶಕ್ತಿಗಳು ಪ್ರಧಾನಿ ಮೋದಿಯವರನ್ನು ಸೋಲಿಸಿ ಅವರ ವಿಕಸಿತ ಭಾರತದ ಕನಸನ್ನು ಭಾರತೀಯರಿಂದ ಕಸಿಯುವ ಎಲ್ಲಾ ಹುನ್ನಾರವನ್ನು ಮಾಡುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ.

# ಮಾಸದ ಮಾಧುರ್ಯ 84ನೇ ಕಾರ್ಯಕ್ರಮ



## ಶ್ರೀಮತಿ ನುಡಿ ಸುದರ್ಶನ ಅಭಿನಯದ ಏಕವ್ಯಕ್ತಿ ನಾಟಕ 'ಸಕುಬಾಯಿ' ಕಾಮ್‌ವಾಲಿ

ಶ್ರೀಮತಿ ನುಡಿ ಸುದರ್ಶನ ಅಭಿನಯದ ಏಕವ್ಯಕ್ತಿ ನಾಟಕ 'ಸಕುಬಾಯಿ' ಕಾಮ್‌ವಾಲಿ ಒಂದೂವರೆ ಗಂಟೆ ಕಾಲ ನೂರಾರು ಕಲಾಭಿಮಾನಿಗಳನ್ನು ತನ್ನ ಅಂಗಿಕ, ಭಾಷಾ ಪ್ರಬುದ್ಧತೆ, ಧ್ವನಿಯ ಏರಿಳಿತ, ರಂಗಸ್ಥಳದ ಪ್ರತಿಯೊಂದು ಪರಿಕರದೊಟ್ಟಿಗಿನ ಒಡನಾಟಗಳಿಂದ ಶ್ರೀಮತಿ ನುಡಿ ಸುದರ್ಶನ ಅವರ ಪ್ರತಿಭೆ 07-04-2024ರ ಸಂಜೆ 5.30 ಗಂಟೆಯಿಂದ ರಾತ್ರಿ 7 ಗಂಟೆಯ ವರೆಗೆ ಒಂದು ಸಂಚಲನ ಹಾಗೂ ಸಂವನಹವನ್ನು ಏರ್ಪಡಿಸಿದ್ದು ಸತ್ಯ. ಬಡತನ ಪರಿಸರದೊಟ್ಟಿಗೆ ಬದುಕಬೇಕಾದರೆ ಒಂದು ಹೆಣ್ಣು ಅನುಭವಿಸುವ ಕಷ್ಟ, ಸಮಾಜ ಹೆಣ್ಣನ್ನು ನೋಡುವ ದೃಷ್ಟಿ, ಹಲವು ಆಸೆ ಕನಸುಗಳನ್ನು ಹತ್ತಿಕ್ಕಿ ಬದುಕಬೇಕಾದ ಅನಿವಾರ್ಯತೆ, ಇದ್ದೊಬ್ಬ ಹೆಣ್ಣು ಮಗಳನ್ನು ಕಾಮುಕರಿಂದ ಕಾಪಾಡಿ ವಿದ್ಯಾಭ್ಯಾಸ ಮಾಡಿಸುವ ಪರಿ ಇವು ಅವಳ ಜೀವನವನ್ನು ಎತ್ತೆತ್ತ ಕೊಂಡೊಯ್ಯುತ್ತದೆ ಎಂಬ ಸಂಗತಿಯನ್ನು ಅತ್ಯಂತ ಮನೋಜ್ಞ ಅಭಿನಯದಿಂದ ಶ್ರೀಮತಿ ನುಡಿ ಸುದರ್ಶನರವರು ರಂಗದಮೇಲೆ ಕಟ್ಟಿಕೊಟ್ಟಾಗ ಪ್ರೇಕ್ಷಕರ ಮೌನ, ಕಣ್ಣಂಚಿನ ನೀರನ್ನು ಒರೆಸುತ್ತಿರುವ ದೃಶ್ಯ ನಾಟಕದ ಯಶಸ್ಸನ್ನು ಪ್ರತಿಬಿಂಬಿಸುತ್ತಿತ್ತು. ನಾಟಕದ ಕೊನೆಯಲ್ಲಿ 'ಸಕುಬಾಯಿ' ತನ್ನ ಮಗಳು ವಿದ್ಯಾಭ್ಯಾಸ ಮುಗಿಸಿ ತಾಯಿಗೆ ನಿನ್ನ ಕಷ್ಟ ಇಂದಿಗೆ ಮುಗಿಯಿತು, ಇನ್ನು ಮುಂದೆ ನಿನ್ನನ್ನು ಸುಖವಾಗಿ ನೋಡಿಕೊಳ್ಳುವ ಜವಾಬ್ದಾರಿ ನನ್ನದು ಎಂಬುದನ್ನು ಒಂದು ಪದ್ಯದ ಮುಖಾಂತರ ತಾಯಿಗೆ ಹೇಳುತ್ತಾಳೆ. ಆ ಪದ್ಯವನ್ನು 'ಸಕುಬಾಯಿ' ಓದುವಾಗ ಅವಳ ಆನಂದ ಕಷ್ಟಕ್ಕೆ ಪ್ರತಿಫಲವಿದೆ ಎಂಬ ಸಂದೇಶವನ್ನು ಸಮಾಜಕ್ಕೆ ಸಾರುವ ಸಮಯ, ಆ ಸಮಯದ ಸಂವೇದನೆ, ಸಂಚಲನ ಅತ್ಯಂತ ಅಪರೂಪದ ಹಾಗೂ ಅನಾದೃಶವಾಗಿತ್ತು. ನಾಟಕದ ವಿನ್ಯಾಸ ಮತ್ತು ನಿರ್ದೇಶನವನ್ನು ಶ್ರೀ ಹುಲುಗಪ್ಪ ಕಟ್ಟೀಮನಿ, ಸಂಗೀತ ಹಾಗೂ ವಿನ್ಯಾಸ ಶ್ರೀ ಉಮೇಶ ನಾರಾಯಣ ಸಾಲಿಯಾನ, ಬೆಳಕು ಶ್ರೀ ಅರುಣಾಮೂರ್ತಿ, ಶ್ರೀ ಆದರ್ಶ ರಂಗಾಯಣರ ಸಹಾಯ ನಾಟಕಕ್ಕೆ ಒಂದು ಹೊಸ ರೂಪ ನೀಡಿತ್ತು.

ಕಾರ್ಯಕ್ರಮದ ಕೊನೆಯಲ್ಲಿ ಎಲ್ಲಾ ಕಲಾವಿದರಿಗೆ ಬಿಜೆಪಿ ರಾಜ್ಯ ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ ಅಂಬೆಕಲ್ಲು ಹಾಗೂ ಜಗನ್ನಾಥ ಬಳಗದ ಸಂಚಾಲಕರಾದ ಶ್ರೀ ದತ್ತಗುರು ಹೆಗಡೆಯವರು ಅಭಿನಂದನಾ ಪತ್ರವನ್ನು ನೀಡಿ ಸನ್ಮಾನಿಸಿದರು.




# ರೈತ ಉತ್ಪಾದಕರ ಸಂಸ್ಥೆಗಳ ಪ್ರಮುಖರ ಸಭೆ



**ಡಾ. ನವೀನ್ ಬಿ.ಸಿ.**
ರಾಜ್ಯ ಪ್ರಧಾನ ಕಾರ್ಯದರ್ಶಿಗಳು
ಬಿಜೆಪಿ – ರೈತಮೋರ್ಚಾ

ರಾಷ್ಟ್ರೀಯ ಕಿಸಾನ್ ಮೋರ್ಚಾದ ಸೂಚನೆಯ ಮೇರೆಗೆ ಕರ್ನಾಟಕ ರಾಜ್ಯದ ವಿವಿಧ ವಿಭಾಗಗಳಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಮುಖ್ಯಸ್ಥರು ಮತ್ತು ನಿರ್ದೇಶಕರುಗಳ ಮತ್ತು ಪ್ರಗತಿಪರ ರೈತರ ಸಭೆಗಳನ್ನು ಆಯೋಜನೆ ಮಾಡಲಾಗಿತ್ತು.

ಕರ್ನಾಟಕ ರಾಜ್ಯ ರೈತ ಮೋರ್ಚಾ ವತಿಯಿಂದ ರಾಜ್ಯದ ಹುಬ್ಬಳ್ಳಿ, ಮೈಸೂರು, ಶಿವಮೊಗ್ಗ, ವಿಭಾಗಗಳಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಮುಖ್ಯಸ್ಥರು ಮತ್ತು ನಿರ್ದೇಶಕರುಗಳ ಮತ್ತು ಪ್ರಗತಿಪರ ರೈತರ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಗಳಿಗೆ ರೈತ ಉತ್ಪಾದಕರ ಸಂಸ್ಥೆಗಳ ಮುಖ್ಯಸ್ಥರು ಮತ್ತು ನಿರ್ದೇಶಕರು ಉತ್ಸಾಹದಿಂದ ಪಾಲ್ಗೊಂಡು ದೇಶದಲ್ಲಿರುವ ಶೇಕಡ 85ರಷ್ಟು ಸಣ್ಣ ಹಿಡುವಳಿದಾರರಿಗೆ ರೈತ ಉತ್ಪಾದಕರ ಸಂಸ್ಥೆಗಳು ಆಶಾಕಿರಣವಾಗಿದ್ದು, ರೈತರು ಸಹಕಾರ ತತ್ವವನ್ನು ಮತ್ತು ವೃತ್ತಿ ಪರತೆಯನ್ನು ರೂಢಿಸಿಕೊಳ್ಳಲು ಸಹಕಾರವಾಗುತ್ತದೆ ಎಂದು ಅವರುಗಳು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.

ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರವು ರೈತರನ್ನು ಸ್ವಾವಲಂಬಿಯನ್ನಾಗಿಸಲು ಕೇಂದ್ರ ಕೃಷಿ ಮತ್ತು ಸಹಕಾರ ಮಂತ್ರಾಲಯದ ಮುಖಾಂತರ ಸಹಾಯಧನವನ್ನು ನೀಡುತ್ತಿದ್ದು, ಈ ಯೋಜನೆಯ ಫಲಾನುಭವಿಗಳಾಗುವ ಮುಖಾಂತರ ರೈತರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲರಾಗಿದ್ದಾರೆ ಎಂದು ಪ್ರಗತಿ ಪರ ರೈತರು ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯದಲ್ಲಿ 1,200 ರೈತ ಉತ್ಪಾದಕ ಸಂಸ್ಥೆಗಳನ್ನು ಪ್ರಾರಂಭಮಾಡಲಾಗಿದೆ. ಈ ಸಂಸ್ಥೆಗಳಲ್ಲಿ 12 ಸಾವಿರ ನಿರ್ದೇಶಕರುಗಳಿದ್ದಾರೆ. ಸರಿ ಸುಮಾರು 10ಲಕ್ಷ ರೈತರು ಪಾಲುದಾರರಾಗಿದ್ದಾರೆ. ಸಂಘಟನೆಯ ದೃಷ್ಟಿಯಿಂದ 10 ಲಕ್ಷ ರೈತರು ಪ್ರಭಾವಿ ಮತದಾರರಾಗಿದ್ದು, ಅವರನ್ನು ಪಕ್ಷದ ಸಂಘಟನೆಗಾಗಿ ಬಳಸಿಕೊಳ್ಳಬೇಕೆಂಬ ಉದ್ದೇಶದಿಂದ ಕರ್ನಾಟಕ ರಾಜ್ಯ ಬಿಜೆಪಿ ರೈತ ಮೋರ್ಚಾದ ವತಿಯಿಂದ ಹೆಚ್ಚಿನ ಒತ್ತನ್ನು



ನೀಡಲಾಗಿತ್ತು. ಹುಬ್ಬಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಮಂತ್ರಿಗಳು ಮತ್ತು ಹುಬ್ಬಳ್ಳಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾದ ಶ್ರೀ ಪ್ರಹ್ಲಾದ್ ಜೋಶಿ ಅವರು ಭಾಗವಹಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ 6,365 ಕೋಟಿ ರೂ ಗಳನ್ನು ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರವು ಈ ಯೋಜನೆಗೆ ನೀಡಿದ್ದು, 2027– 2028ರ ವರೆಗೆ 15 ಸಾವಿರ ರೈತ ಉತ್ಪಾದಕ ಸಂಸ್ಥೆಗಳನ್ನು ಪ್ರಾರಂಭಮಾಡುವ ಗುರಿಯನ್ನು ಹೊಂದಿದೆ. ರೈತರು ತಾವು ಬೆಳೆಯುವ ಉತ್ಪನ್ನಗಳಲ್ಲಿ ವೈಜ್ಞಾನಿಕತೆ ಮತ್ತು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ರೈತರಿಗೆ ತಾವು ಬೆಳೆದ ಬೆಳೆಗಳಿಗೆ ಉತ್ತಮವಾದ ಬೆಲೆ ಮತ್ತು ಇಳುವರಿಯನ್ನು ಪಡೆಯಲು ಮತ್ತು ಸರ್ಕಾರದ ಹಲವಾರು ರೈತಪರ ಯೋಜನೆ ಹಾಗೂ ಕಾರ್ಯಕ್ರಮಗಳ ಫಲವನ್ನು ಪಡೆದುಕೊಳ್ಳಲು ರೈತ ಉತ್ಪಾದಕ ಸಂಸ್ಥೆಗಳು ಸಹಾಯವಾಗುತ್ತವೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜ್ಯ ರೈತ ಮೋರ್ಚಾ ಅಧ್ಯಕ್ಷರಾದ ಶ್ರೀ ಎ.ಎಸ್. ಪಾಟೀಲ್ ನಡಾಹಳ್ಳಿ ಅವರು ಮಾತನಾಡುತ್ತಾ, ಕರ್ನಾಟಕ ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳನ್ನು ಪ್ರತಿ ಗ್ರಾಮಪಂಚಾಯಿತಿಗಳಲ್ಲಿ ಪ್ರಾರಂಭ ಮಾಡಲು, ರಾಜ್ಯ ಬಿಜೆಪಿ ರೈತ ಮೋರ್ಚಾ ತಂಡವು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯವನ್ನು ನಿರ್ವಹಿಸಲಿದೆ ಎಂದು ಹೇಳಿದರು. ಪ್ರತಿ ಜಿಲ್ಲೆಗೆ ಒಂದು ಉತ್ಪನ್ನಗಳನ್ನು ಬ್ರ್ಯಾಂಡ್ ಆಗಿ ನೀಡಿದ್ದು, ಆ ಉತ್ಪನ್ನಗಳ ಆಧಾರದ ಮೇಲೆ ಎಫ್ ಪಿಒ ಗಳನ್ನು ಪ್ರಾರಂಭಿಸಬೇಕು ಎಂದು ಹೇಳಿದರು.

ಶಿವಮೊಗ್ಗ ಜಿಲ್ಲೆ ಗ್ರಾಮಾಂತರ ಮಂಡಲದ ಕುಂಶಿ ಗ್ರಾಮಪಂಚಾಯಿತಿಯಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಮತ್ತು ಪ್ರಗತಿಪರ ರೈತರ ಎರಡನೆ ಸಭೆಯನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯ ಬಿಜೆಪಿ ಅಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿದರು.

ಉದ್ಘಾಟನೆಯ ನಂತರ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತ ರೈತರು ತಾವು ಬೆಳೆದ ಉತ್ಪನ್ನಗಳನ್ನು ಸಂರಕ್ಷಣೆ, ನಿರ್ವಹಣೆ, ದಾಸ್ತಾನು, ಮೌಲ್ಯವರ್ಧನೆ ಮತ್ತು ಬ್ರಾಂಡಿಂಗ್ ಮಾಡುವ ಮುಖಾಂತರ ತಾವು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆಯನ್ನು ಪಡೆಯಲು ರೈತ ಉತ್ಪಾದಕ ಸಂಸ್ಥೆಗಳು ಸಹಕಾರಿಯಾಗುತ್ತವೆ ಎಂದು ಹೇಳಿದರು. ಕೇಂದ್ರ ಬಿಜೆಪಿ ಮತ್ತು ರಾಜ್ಯ ಬಿಜೆಪಿ ಸರ್ಕಾರದ ರೈತ ಪರ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರವೂ ತಡೆ ಹಿಡಿಯುವ ಮುಖಾಂತರ ರಾಜ್ಯದ ರೈತಾಪಿ ವರ್ಗಕ್ಕೆ ಬಹಳದೊಡ್ಡ ಅನ್ಯಾಯವನ್ನು ಮಾಡಿದೆ ಎಂದು ಅಭಿಪ್ರಾಯಪಟ್ಟರು.

ರೈತ ಉತ್ಪಾದಕರ ಸಂಸ್ಥೆಗಳನ್ನು ಸಮರ್ಪಕವಾಗಿ ಮುನ್ನಡೆಸಲು ಉತ್ತಮ ನಾಯಕತ್ವದ ಅಗತ್ಯವಿದ್ದು ಮತ್ತು ವ್ಯವಹಾರಿಕ ಜ್ಞಾನ ಮತ್ತು ಸಾಮಾಜಿಕ ಬದ್ಧತೆ ರೂಢಿಸಿಕೊಂಡರೆ ಉತ್ತಮ ರೈತ ಉತ್ಪಾದಕ ಸಂಸ್ಥೆಗಳನ್ನು ಕಟ್ಟಲು ಸಾಧ್ಯ ಎಂದು ಅವರು ಹೇಳಿದರು.

ಈ ಕಾರ್ಯಕ್ರಮದಲ್ಲಿ ಬಿಜೆಪಿ ರಾಷ್ಟ್ರೀಯ ಕಿಸಾನ್ ಮೋರ್ಚಾದ ಉಪಾಧ್ಯಕ್ಷರಾದ ಶ್ರೀ ಜಯಸೂರ್ಯನ್ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ಶಂಭುಕುಮಾರ್ ಮತ್ತು ರಾಜ್ಯ ರೈತಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಡಾ. ಬಿ.ಸಿ. ನವೀನ್, ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜ್ ಕುಂದಗೋಳಮಠ್ ಮತ್ತು ಜಿಲ್ಲಾ ರೈತ ಮೋರ್ಚಾದ ಅಧ್ಯಕ್ಷರುಗಳು ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

# ವೆಂಕಟರಮಣಿ, ಸಂಘಟನೆಯ ಮುತ್ತಿನ ಮಣಿ





**ಕರಿಗಾಲನ್,**
**ಬಿಜೆಪಿ ಕಾರ್ಯಕರ್ತರು**
**ತಮಿಳುನಾಡು**

**ಪರಂಗಿಮಲೈ ಕ್ಷೇತ್ರದ ಜನಸಂಘದ ಅಭ್ಯರ್ಥಿಯಾಗಿದ್ದ ಶ್ರೀ ಕಾಶಿನಾಥನ್ ಅವರನ್ನು ತಮ್ಮ ಸೈಕಲ್‌ನ ಹಿಂಬದಿಯ ಸೀಟಿನಲ್ಲಿ ಕೂರಿಸಿಕೊಂಡು ವಿಧಾನಸಭಾ ಕ್ಷೇತ್ರವನ್ನೆಲ್ಲಾ ಸುತ್ತಿಸಿ ಜನಸಂಘದ ಪರ ಮತಯಾಚನೆ ಮಾಡುತ್ತಿದ್ದರು ರಮಣಿ ಮಾಮಾ. ವಿರೋಧ ಪಕ್ಷದ ಅಭ್ಯರ್ಥಿಯೊಬ್ಬರು ಅವರನ್ನು ಪ್ರಚಾರದಿಂದ ದೂರ ಉಳಿಯುವಂತೆ ಮನವೊಲಿಸಲು ತಮ್ಮ ಮಿತ್ರರೊಬ್ಬರನ್ನು ಕಳುಹಿಸಿಕೊಟ್ಟಿದ್ದರು. ರಮಣಿಮಾಮ ಅವರಿಗೆ ಪ್ರಚಾರದಿಂದ ದೂರ ಉಳಿಯುವುದಕ್ಕೆ ಹಣದ ಆಮಿಷ ಒಡ್ಡಿ ಅವರಿಗೆ ಬ್ಲಾಂಕ್ ಚೆಕ್ ಒಂದನ್ನೂ ಕೂಡ ಕೊಡುವ ಪ್ರಯತ್ನವನ್ನೂ ಮಾಡಿದ್ದರು. ಆದರೆ ರಮಣಿ ಮಾಮ ಇದಾವುದಕ್ಕೆ ಜಗ್ಗದೆ ಅತ್ಯಂತ ನಿಷ್ಠೆಯಿಂದ ಚುನಾವಣಾ ಪ್ರಚಾರ ಮಾಡಿದ್ದರು. ರಮಣಿ ಮಾಮ ಅವರಿಗೆ ಈ ಆಮಿಷ ಒಡ್ಡಿದ್ದು ಬೇರೆ ಯಾರೂ ಅಲ್ಲ, ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಎಂಜಿಆರ್.**

ತಮಿಳುನಾಡಿನಲ್ಲಿ ಇತ್ತೀಚೆಗೆ ಮುಕ್ತಾಯವಾದ ಲೋಕಸಭಾ ಚುನಾವಣೆಯಲ್ಲಿ, ಅಲ್ಲಿನ ಚುನಾವಣಾ ನಿರ್ವಹಣಾ ಸಮಿತಿಯು ಚೆನ್ನೈ ಅಮಿಂಜಿಕರೈನ ಅಯ್ಯಾವೂ ಮಹಲ್‌ನಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಆ ಅವಧಿಯಲ್ಲಿ 'ಬಿಜೆಪಿ ಸ್ಥಾಪನಾ ದಿವಸ್'ನ್ನು ಅಲ್ಲಿಯ ಚುನವಾಣಾ ನಿರ್ವಹಣಾ ಸಮಿತಿಯ ಶ್ರೀ ವಿಜಯ್ ಚಂದ್ರ ಜೋಶಿ ಮತ್ತು ಇನ್ನೊಬ್ಬ ಹಿರಿಯ ಕಾರ್ಯಕರ್ತರಾದ ಶ್ರೀ ವೆಂಕಟ್ ರಮಣಿಯವರ ಉಪಸ್ಥಿತಿಯಲ್ಲಿ ಆಚರಿಸಲಾಯಿತು. ಶ್ರೀ ವೆಂಕಟರಮಣಿ ಅವರನ್ನು ಎಲ್ಲರೂ ಪ್ರೀತಿಯಿಂದ ರಮಣಿಮಾಮಾ ಎಂದು ಕರೆಯುತ್ತಾರೆ. ಅಂದಿನ ಕಾರ್ಯಕ್ರಮದಲ್ಲಿ ಅವರು ಪಕ್ಷದಲ್ಲಿನ ತಮ್ಮ ಕೆಲವು ಅನುಭವಗಳನ್ನು ಮತ್ತು ಪಕ್ಷದ ಪ್ರಮುಖರೊಂದಿಗಿನ ಒಡನಾಟವನ್ನು ಹಂಚಿಕೊಂಡರು. ಅವರ ಆ ಅದ್ಭುತವಾದ ಅನುಭವಗಳ ಕೆಲವು ನಿದರ್ಶನಗಳು ನಿಜಕ್ಕೂ ಅನುಕರಣೀಯ.

1944 ರಲ್ಲಿ ಜನಿಸಿದ ರಮಣಿ ಮಾಮಾ ಅವರು ತಮ್ಮ ಎಸ್‌ಎಸ್‌ಎಲ್‌ಸಿ, ಮತ್ತು ಐಟಿಐ ಸರ್ಟಿಫಿಕೇಟ್ ಕೋರ್ಸ್ ಪೂರ್ಣಗೊಳಿಸಿದರು. ಅವರು 1965 ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಪರ್ಕಕ್ಕೆ ಬಂದರು. ನಂತರ 1967 ರಲ್ಲಿ ಭಾರತೀಯ ಜನಸಂಘದ ಸದಸ್ಯರಾದರು. ಅದೇ ವರ್ಷ ಅವರು ರಾಣೆ ಸಮೂಹ ಸಂಸ್ಥೆಯಲ್ಲಿ ತಮ್ಮ ವೃತ್ತಿ ಜೀವನವನ್ನೂ ಪ್ರಾರಂಭಿಸಿದರು. ಪಕ್ಷ ಸೇರಿದ ತಕ್ಷಣ ಅವರಿಗೆ ಚುನಾವಣಾ ಕಾರ್ಯದಲ್ಲಿ ಭಾಗಿಯಾಗುವ

ಅವಕಾಶವೂ ದೊರಕಿತು. ಆಗ ಏಷ್ಯಾದ ಅತಿದೊಡ್ಡ ವಿಧಾನಸಭಾ ಕ್ಷೇತ್ರವಾಗಿದ್ದ ಪರಂಗಿಮಲೈ ಕ್ಷೇತ್ರದ ಜನಸಂಘದ ಅಭ್ಯರ್ಥಿಯಾಗಿದ್ದ ಶ್ರೀ ಕಾಶಿನಾಥನ್ ಅವರನ್ನು ತಮ್ಮ ಸೈಕಲ್‌ನ ಹಿಂಬದಿಯ ಸೀಟಿನಲ್ಲಿ ಕೂರಿಸಿಕೊಂಡು ಸೈಕಲ್ ತುಳಿದುಕೊಂಡು ವಿಧಾನಸಭಾ ಕ್ಷೇತ್ರವನ್ನೆಲ್ಲಾ ಸುತ್ತಿಸಿ ಜನಸಂಘದ ಪರ ಮತಯಾಚನೆ ಮಾಡುತ್ತಿದ್ದರು ರಮಣಿ ಮಾಮಾ. ಅವರ ಚುನಾವಣಾ ಪ್ರಚಾರದ ಶೈಲಿ ಎಷ್ಟು ಪರಿಣಾಮಕಾರಿಯಾಗಿರುತ್ತಿತ್ತೆಂದರೆ ವಿರೋಧ ಪಕ್ಷದ ಅಭ್ಯರ್ಥಿಯೊಬ್ಬರು ಅವರನ್ನು ಪ್ರಚಾರದಿಂದ ದೂರ ಉಳಿಯುವಂತೆ ಮನವೊಲಿಸಲು ತಮ್ಮ ಮಿತ್ರರೊಬ್ಬರನ್ನು ಕಳುಹಿಸಿಕೊಟ್ಟಿದ್ದರು. ಅವರ ಮನವೊಲಿಕೆ ವಿಫಲವಾದಾಗ ಅವರು ರಮಣಿಮಾಮ ಅವರಿಗೆ ಪ್ರಚಾರದಿಂದ ದೂರ ಉಳಿಯುವುದಕ್ಕೆ ಹಣದ ಆಮಿಷ ಒಡ್ಡಿ ಅವರಿಗೆ ಬ್ಲಾಂಕ್ ಚೆಕ್ ಒಂದನ್ನೂ ಕೂಡ ಕೊಡುವ ಪ್ರಯತ್ನ ಮಾಡಿದ್ದರು. ಆದರೆ ರಮಣಿ ಮಾಮ ಇದಾವುದಕ್ಕೆ ಜಗ್ಗದೆ ಅತ್ಯಂತ ನಿಷ್ಠೆಯಿಂದ ಚುನಾವಣಾ ಪ್ರಚಾರ ಮಾಡಿದ್ದರು.

ಅಂದಹಾಗೆ ರಮಣಿ ಮಾಮ ಅವರಿಗೆ ಈ ಆಮಿಷ ಒಡ್ಡಿದ್ದು ಬೇರೆ ಯಾರೂ ಅಲ್ಲ, ನಂತರ ತಮಿಳುನಾಡಿನ ಮುಖ್ಯಮಂತ್ರಿಯಾದ ಎಂಜಿಆರ್ ಅವರು. 1971ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಶ್ರೀ ಸುಬ್ರಮಣ್ಯ ಅಯ್ಯರ್ ಅವರ ವಿರುದ್ದ ತ್ಯಾಗರಾಯನಗರ ಕ್ಷೇತ್ರದಲ್ಲಿ ಶ್ರೀ ನಾರಾಯಣರಾವ್‌ರವರ ಪರವಾಗಿ ರಮಣಿಮಾಮ ಅವರು ತಮ್ಮ ಎಂದಿನ ಶೈಲಿಯಲ್ಲಿ ಬಿರುಸಿನ ಚುನಾವಣಾ ಪ್ರಚಾರ ಮಾಡಿದರು. ಅದರ ಪರಿಣಾಮವಾಗಿ ಅವರು ತಮ್ಮ ಇದ್ದ ಕೆಲಸವನ್ನೂ ಸಹ ಕಳೆದುಕೊಳ್ಳಬೇಕಾಯಿತು. ನಂತರದ 6 ವರ್ಷಗಳ ಕಾಲ ಯಾವುದೇ ಕೆಲಸ – ಆದಾಯವಿಲ್ಲದೆ ಸಂಸಾರ ನಿರ್ವಹಣೆಗೂ ರಮಣಿಮಾಮ ಅವರು ಪರದಾಡುವಂತಾಯಿತು.

ಶ್ರೀಮತಿ ಇಂದಿರಾಗಾಂಧಿ ಅವರು ಹೇರಿದ್ದ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರಮಣಿಮಾಮ ಅವರು ಭೂಗತರಾಗಿ ಕೆಲಸವನ್ನು ಮಾಡಿದ ನಂತರ 1977 ರಲ್ಲಿ ಶ್ರೀ ಜನಾ ಕೃಷ್ಣಮೂರ್ತಿಯವರ ಒತ್ತಾಯದ ಮೇರೆಗೆ ಟಿವಿಎಸ್ ಸಮೂಹದ ಕಂಪನಿಯಲ್ಲಿ ಕೆಲಸವನ್ನು ಪಡೆದರು. ಆ ಕೆಲಸದಲ್ಲಿ ಅವರಿಗೆ ತಮ್ಮ ವೃತ್ತಿ ಜೀವನದ ಜೊತೆಗೆ ಸಂಘಟನೆಯ ಕಾರ್ಯಗಳನ್ನೂ ಸಹ ಮಾಡುವ ಸ್ವಾತಂತ್ರ್ಯ ದೊರಕಿತ್ತು.

ದಿ. ಅಟಲ್ ಬಿಹಾರಿ ವಾಜಪೇಯಿ ಅವರ ಮೀನಾಕ್ಷಿ ಪುರಂ ಭೇಟಿಯ ನಂತರ ಮಧುರೈನಿಂದ ಹಿಂದಿರುಗಿದಾಗ, ರಮಣಿಮಾಮಾ ಅವರು ದಿ. ಅಟಲ್ ಬಿಹಾರಿ ವಾಜಪೇಯಿ ಅವರ ಸಹಾಯಕರಾಗಿದ್ದರು. ಆ ಸಂದರ್ಭದಲ್ಲಿ ಅವರಿಗೆ ವಾಜಪೇಯಿ ಅವರೊಂದಿಗೆ ದೆಹಲಿಗೆ ಹೋಗಲು ಸೂಚನೆ ಬಂದಿತು. ಆಗ ಚಳಿಗಾಲದ ವಾತಾವರಣವಾಗಿದ್ದರಿಂದ ರಮಣಿಮಾಮ ವಾಸವಿದ್ದ ಕೋಣೆಯಲ್ಲಿ ಬೆಚ್ಚಗಾಗಲು ಹೀಟರ್ ವ್ಯವಸ್ಥೆ ಇತ್ತು. ಸ್ವೆಟರ್, ಮಂಕಿ ಕ್ಯಾಪ್ ಹಾಕಿಕೊಂಡರೂ ರಮಣಿಮಾಮ ಅವರು ಚಳಿ ತಾಳಲಾರದೆ ನಿದ್ದೆ ಬಾರದೆ ಒದ್ದಾಡುತ್ತಿದ್ದರು. ಸ್ವಲ್ಪ ಸಮಯದ ನಂತರ, ಅವರಿಗೆ ತಮ್ಮ ಕಾಲಿನ ಬುಡದಲ್ಲಿ ಬೆಚ್ಚಗಿನ ಅನುಭವ ಆಯಿತು. ಎದ್ದು ನೋಡಿದರೆ ವಾಜಪೇಯಿಯವರೇ ಸ್ವತಃ ಬಂದು ಇನ್ನೊಂದು ಹೀಟರ್‌ನ್ನು ಅವರ ಕಾಲ ಬುಡದಲ್ಲಿ ಇಟ್ಟಿದ್ದರು.

ನಂತರ 1989 ರಲ್ಲಿ ರಮಣಿ ಮಾಮಾ ಅವರು ಶ್ರೀ ಮದನ ಗೋಪಾಲ್ ರಾವ್ ಅವರ ಪರವಾಗಿ ಚುನಾವಣಾ ಪ್ರಚಾರ ಮಾಡಿದರು. 1991 ರಲ್ಲಿ ಸಂಘಟನೆ ಶ್ರೀ ಎಂ. ಕರುಣಾನಿಧಿ ವಿರುದ್ಧ ಅವರನ್ನು ಹಾರ್ಬರ್ ಕ್ಷೇತ್ರದಲ್ಲಿ ಕಣಕ್ಕಿಳಿಸಿದಾಗ ಅಲ್ಲೂ ಅದೇ ರೀತಿಯ ಪ್ರಚಾರ ಕಾರ್ಯ ಮಾಡಿದರು. ಅಲ್ಲಿಂದ ಇಲ್ಲಿಯವರೆಗೆ ಅಂದರೆ 2024ರ ಲೋಕಸಭಾ ಚುನಾವಣೆಯವರೆಗೆ ಅದೇ ಉತ್ಸಾಹ ಹಾಗೂ ಸ್ಫೂರ್ತಿಯೊಂದಿಗೆ ಚುನಾವಣಾ ಕಾರ್ಯ ಮಾಡುತ್ತಲೇ ಬಂದಿದ್ದಾರೆ.

ರಮಣಿ ಮಾಮಾ ಅವರ ಕೆಲಸಗಳಿಗೆ ಸ್ಫೂರ್ತಿಯಾಗಿ ನಿಂತವರು ಅವರ ಧರ್ಮಪತ್ನಿ ಶ್ರೀಮತಿ ಮಾಲತಿ ಅವರು. 1968 ರಲ್ಲಿ ವಿವಾಹವಾದಾಗಿನಿಂದ, ಮಾಲತಿ ಅವರು ಕೂಡ ಸಂಘಟನೆಯ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. 1970 ರಲ್ಲಿ ಜನಸಂಘವನ್ನು ಅಧಿಕೃತವಾಗಿ ಸೇರ್ಪಡೆಯಾದರು. ಮಹಿಳಾ ಮೋರ್ಚಾದ ರಾಜ್ಯ ಕಾರ್ಯದರ್ಶಿಯಾಗಿ ನಂತರದಲ್ಲಿ ಜಿಲ್ಲಾ ಉಪಾಧ್ಯಕ್ಷರೂ ಆದರು. ಅವರು ತಮ್ಮ ಕೊನೆಯ ಉಸಿರು ಇರುವವರೆಗೂ 50 ವರ್ಷಗಳಿಗೂ ಹೆಚ್ಚು ಕಾಲ ಪಕ್ಷಕ್ಕೆ ಸೇವೆ ಸಲ್ಲಿಸಿದರು.

ಭಾರತೀಯ ಜನಸಂಘದ ಕಾಲದಿಂದಲೂ, ಈಗ 80 ವರ್ಷ ವಯಸ್ಸಿನಲ್ಲೂ, ರಮಣಿ ಮಾಮಾ ಅವರು ತಮ್ಮ ಪರಿಣತಿ ಮತ್ತು ಅನುಭವವನ್ನು ನೀಡುತ್ತಾ ಪಕ್ಷಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ, ವಿಶೇಷವಾಗಿ ಚುನಾವಣೆಗಳು ಬಂದಾಗ ಅವರ ಕೊಡುಗೆ ಅಪಾರವಾಗಿದೆ. ಈ ಬಾರಿಯ ಲೋಕಸಭಾ ಚುನಾವಣೆಯ ಕಾರ್ಯದಲ್ಲಿ ರಮಣಿ ಮಾಮಾ ಅವರು ಭೋಜನ ಪ್ರಮುಖ್ ಆಗಿ ಕಾರ್ಯ ನಿರ್ವಹಿಸಿ, ಅಡುಗೆ ಸಾಮಗ್ರಿಗಳನ್ನು ಮತ್ತು ಆಹಾರದ ಅಗತ್ಯಗಳ ಉಸ್ತುವಾರಿಯನ್ನು ನೋಡಿಕೊಂಡರು. ಚುನಾವಣಾ ಕಾರ್ಯದಲ್ಲಿ ನಿರತರಾದ ಎಲ್ಲಾ ಕಾರ್ಯಕರ್ತರಿಗೆ ರುಚಿಯಾದ ಅಡುಗೆ ಮಾಡಿಸಿ ಬಡಿಸಿದರು. ಪಕ್ಷದ ಬಗ್ಗೆ ಅವರಿಗೆ ಇರುವ ಅಪಾರವಾದ ನಿಷ್ಠೆ, ಮತ್ತು ಅವರ ಅನುಭವಗಳ ಮೂಲಕ ಈ ತಲೆಮಾರಿನ ಕಾರ್ಯಕರ್ತರಿಗೆ ಅವರು ತೋರುವ ಮಾರ್ಗದರ್ಶನ ನಿಜಕ್ಕೂ ಒಂದು ಅದ್ಭುತ, ಪ್ರೇರಣಾದಾಯಕ ಹಾಗೂ ಅನುಕರಣೀಯ.

# ರಾಷ್ಟ್ರೀಯ ನಾಯಕರ ಲೋಕಸಭಾ ಚುನಾವಣಾ ಪ್ರಚಾರ – ಕರ್ನಾಟಕ



ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಶ್ರೀ ಜೆ.ಪಿ. ನಡ್ಡಾ – ಸುರಪುರ ರೋಡ್ ಶೋ



ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಶ್ರೀ ಜೆ.ಪಿ. ನಡ್ಡಾ – ಪ್ರಬುದ್ಧರ ಸಭೆ, ಶಿವಮೊಗ್ಗ




ತಮಿಳುನಾಡು ರಾಜ್ಯಾಧ್ಯಕ್ಷ ಶ್ರೀ ಅಣ್ಣಾಮಲೈ – ಬೆಂಗಳೂರು ಸೆಂಟ್ರಲ್ ರೋಡ್ ಶೋ



ತಮಿಳುನಾಡು ರಾಜ್ಯಾಧ್ಯಕ್ಷ ಶ್ರೀ ಅಣ್ಣಾಮಲೈ – ಬೆಂಗಳೂರು ಗ್ರಾಮಾಂತರ ರೋಡ್ ಶೋ



ತಮಿಳುನಾಡು ರಾಜ್ಯಾಧ್ಯಕ್ಷ ಶ್ರೀ ಅಣ್ಣಾಮಲೈ – ಬೆಂಗಳೂರು ದಕ್ಷಿಣ ರೋಡ್ ಶೋ



ತಮಿಳುನಾಡು ರಾಜ್ಯಾಧ್ಯಕ್ಷ ಶ್ರೀ ಅಣ್ಣಾಮಲೈ – ಶಿವಮೊಗ್ಗ ರೋಡ್ ಶೋ




ಕೊಪ್ಪಳ ಜಿಲ್ಲೆಯಲ್ಲಿ ಆಯೋಜಿಸಿದ್ದ ಶಕ್ತಿಕೇಂದ್ರ ಪ್ರಮುಖರ ಸಭೆಯಲ್ಲಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ ಬಿ.ಎಲ್. ಸಂತೋಷ



ಕಾಲೇ ವರ್ಷತು ಪರ್ಜನ್ಯಃ

# ಅಧಿಕಾರ ಮತ್ತು ಅಹಂಕಾರ

ಒಂದು ಸಂಘಟನೆಯಲ್ಲಾಗಲೀ ಅಥವಾ ವೈಯುಕ್ತಿಕ ಜೀವನದಲ್ಲಾಗಲೀ ಒಮ್ಮೆ ಅಹಂಕಾರ ಬಂತೆಂದರೆ ಅದು ಎಲ್ಲಾ ಅಲಂಕಾರಗಳನ್ನು ನಾಶ ಮಾಡಿ ಬಿಡುತ್ತದೆ. ಸಾಧನೆಯ ಕಿರೀಟದೊಟ್ಟೊಟ್ಟಿಗೆ ಅಹಂಕಾರದ ಕಿರೀಟವೂ ತಲೆಗೆ ಏರಿತೆಂದರೆ ಸಾಧನೆಗೆ ಮಾನ್ಯತೆ ಕಡಿಮೆಯಾಗುತ್ತದೆ. ಎಷ್ಟೇ ಸಾಧನೆಯಿದ್ದರೂ ಅಹಂಕಾರ ಆವರಿಸಿಕೊಂಡು ಬಿಟ್ಟರೆ ವ್ಯಕ್ತಿಯ ವರ್ಚಸ್ಸು ಹಾಳಾಗುತ್ತದೆ. ಎಲ್ಲರ ಬಾಯಲ್ಲೂ ಅವನ ಸಾಧನೆ, ಸಾಮರ್ಥ್ಯಕ್ಕಿಂತ ಅವನ ಅಹಂಕಾರದ ಬಗ್ಗೆಯೇ ಚರ್ಚೆಯಾಗುತ್ತದೆ. ಅದಕ್ಕೆ ಎಷ್ಟೆ ದೊಡ್ಡ ಸ್ಥಾನಕ್ಕೇರಿದರೂ, ನಮಗೆ ಎಷ್ಟೇ ಸಾಮರ್ಥ್ಯವಿದ್ದರೂ ಸಮಯ, ಸಂದರ್ಭಕ್ಕನುಸಾರವಾಗಿ ವಿಧೇಯನಾಗಿ, ವಿನಯದಿಂದ ನಡೆದುಕೊಳ್ಳುವುದು ಮುಖ್ಯ.

ಉದಾಹರಣೆಗೆ ಪವನಸುತ ಹನುಮಂತ, ಇಡೀ ಸೃಷ್ಟಿಯಲ್ಲೇ ಅತ್ಯಂತ ಶಕ್ತಿಶಾಲಿ. ಸೂರ್ಯನನ್ನೇ ನುಂಗಬಲ್ಲ ಶಕ್ತಿಯುತ ಹಾಗೂ ಬ್ರಹ್ಮಾಸ್ತ್ರವನ್ನು ಚದುರಿಸುವ ಶಕ್ತಿಯನ್ನು ಹೊಂದಿದ್ದ. ಕೃಷ್ಣನ ಸುದರ್ಶನ ಚಕ್ರವನ್ನು ಎದುರಿಸುವ ಸಾಮರ್ಥ್ಯ ಈ ಹನುಮಂತನಿಗಿತ್ತು. ಅಷ್ಟೇ ಯಾಕೆ ಹನುಮಂತನಿಲ್ಲದೆ ರಾಮಾಯಣ ಪರಿಪೂರ್ಣ ಆಗುವುದೇ ಇಲ್ಲಾ. ಸೀತೆಯನ್ನು ಮರಳಿ ಕರೆತರುವವರೆಗೂ ರಾಮನ ಜೊತೆಗೆ ನಿಂತ. ರಾಮನಿಗಾಗಿ ಸಮುದ್ರವನ್ನೇ ಹಾರಿದ. ಲಕ್ಷ್ಮಣನಿಗಾಗಿ ಸಂಜೀವಿನಿ ಪರ್ವತವನ್ನೇ ಹೊತ್ತು ತಂದ, ಈ ಎಲ್ಲಾ ಕಾರಣಕ್ಕೆ ಭಗವಂತನ ಅವತಾರ ರಾಮನೊಂದಿಗೆ ಹನುಮಂತನೂ ಸರಿ ಸಮನಾಗಿ ನಿಂತ. ಹನುಮಂತ ಮನಸ್ಸು ಮಾಡಿದರೆ ಏನೂ ಬೇಕಾದರೂ ಆಗಬಹುದಿತ್ತು. ಹನುಮಂತನಿಗೆ ಶಕ್ತಿ, ಸಾಮರ್ಥ್ಯ, ಯೋಗ್ಯತೆ, ಅಧಿಕಾರ, ಗೌರವ ಎಲ್ಲವೂ ಇತ್ತು.

ಆದರೆ ಹನುಮಂತ ಎಲ್ಲಿಯೂ ತನ್ನ ಸಾಮರ್ಥ್ಯದ ಬಗ್ಗೆ ಗರ್ವ ಪಡಲಿಲ್ಲ. ಎಲ್ಲಿ ದೊಡ್ಡತನ ತೋರಿಸಬೇಕೋ ಅಲ್ಲಿ ದೊಡ್ಡವನಾಗಿದ್ದ. ಎಲ್ಲಿ ಚಿಕ್ಕವನಾಗಿ ವಿಧೇಯನಾಗಿರಬೇಕೋ ಅಲ್ಲಿ ಚಿಕ್ಕವನಾಗಿದ್ದ. ತನ್ನ ಕರ್ತವ್ಯ ಮತ್ತು ನಿಷ್ಟೆಗೆ ಹೊರತಾಗಿ ನಡೆಯಲಿಲ್ಲ. ತಾನು ದೊಡ್ಡವನು ಎಂದು ಅಹಂಕಾರ ಪಡಲಿಲ್ಲಾ. ಇಷ್ಟೊಂದು ಸಾಮರ್ಥ್ಯವಿದ್ದರೂ, ತನ್ನಿಂದಲೇ ಶ್ರೀರಾಮ ಎಂಬುದಾಗಲೀ, ತಾನಿಲ್ಲದಿದ್ದರೇ ರಾವಣ ಸಂಹಾರ ಸಾಧ್ಯವೇ ಇರಲಿಲ್ಲ ಎಂದಾಗಲೀ ಎಂದೂ ಯೊಚಿಸಲಿಲ್ಲ. ಅಧಿಕಾರದ, ಸಾಮರ್ಥ್ಯದ, ಶಕ್ತಿಯ ಮದ ತಲೆಗೆ ಹತ್ತಿಸಿ ಕೊಳ್ಳಲಿಲ್ಲ. ಬದಲಾಗಿ ರಾಮನಿಗೆ ಕೊನೆಯವರೆಗೂ ಪರಮ ಭಕ್ತನಾಗಿ, ಸಾಮಾನ್ಯ ಸೇವಕನಾಗಿಯೇ ಉಳಿದು ಬಿಟ್ಟ. ರಾಮನಿಗೆ ಸಾಮಾನ್ಯ ಸೇವಕನಾಗಿ ಉಳಿದರೂ, ಹನುಮಂತ ಭಕ್ತರ ಮನದಲ್ಲಿ ಮಾತ್ರ ದೊಡ್ಡ ಸ್ಥಾನವನ್ನು ಪಡೆದು ಬಿಟ್ಟ. ಬಹುಷಃ ಶ್ರೀರಾಮನಗಿಂತ ಹೆಚ್ಚು ಹನುಮಂತನ ದೇವಸ್ಥಾನಗಳಿವೆ. 'ಜೈಶ್ರೀರಾಂ ಎಂದು ಹೇಳುವವರಷ್ಟೇ ಜೈ ಭಜರಂಗಿ' ಎಂದು ಹೇಳುವರೂ ಇದ್ದಾರೆ.

ಸೈದ್ಧಾಂತಿಕ ಸಂಘಟನೆಯೊಳಗಿರುವ ನಮ್ಮಂತಹ ಕಾರ್ಯಕರ್ತರುಗಳೆಲ್ಲರೂ ಹನುಮಂತನ ಸ್ವರೂಪಿಗಳೇ. ಹನುಮಂತನೇ ನಮಗೆ ಪೂಜ್ಯ, ಮಾರ್ಗದರ್ಶಕ ಮತ್ತು ಆದರ್ಶ. ಅವನ ನಡೆ, ನುಡಿಗಳ ಅನುಕರಣೆಯೇ ನಮ್ಮ ಪಥ. ಸಂಘಟನೆಯೊಳಗೆ ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ, ಸಂಘಟನೆಯ ಅಗತ್ಯತೆಗೆ ಅನುಗುಣವಾಗಿ ಕರ್ತವ್ಯಮುಖಿಯಾಗುವುದಷ್ಟೇ ನಮ್ಮ ಕಾಯಕ. ಅಲ್ಲಿ ಹನುಮಂತ ಸ್ಥಾನ, ಮಾನಕ್ಕೆ ಅಪೇಕ್ಷೆ ಪಡಲಿಲ್ಲ. ಅಧಿಕಾರ ಲಾಲಸೆ ಅವನನ್ನು ಆವರಿಸಿಕೊಳ್ಳಲಿಲ್ಲ. ಕರ್ತವ್ಯವನ್ನೇ ಆದ್ಯತೆಯಾಗಿಟ್ಟುಕೊಂಡ ಹನುಮಂತ ಶ್ರೀರಾಮನಷ್ಟೇ ಎತ್ತರವಾಗಿ ಬೆಳೆದುಬಿಟ್ಟ. ಭಕ್ತ ಸಮೂಹದಲ್ಲಿ ಶ್ರೀರಾಮನಷ್ಟೇ ಪೂಜ್ಯನಾಗಿಬಿಟ್ಟ. ಸಂಘಟನೆಯೊಳಗಿನ ಕಾರ್ಯಕರ್ತನ ಪಾತ್ರವೂ ಅಷ್ಟೆ. ಸಮಯೋಚಿತವಾದ ಕರ್ತವ್ಯಮುಖಿ ಕ್ರಿಯಾಶೀಲತೆ, ಹನುಮಂತನ ಸ್ವಾಮಿ ನಿಷ್ಠೆಯ ತೆರನಾದ ಸಂಘಟನೆಯ ಬಗೆಗಿನ ಬದ್ಧತೆಯಿದ್ದರೆ ಸಾಕು ಪ್ರತೀ ಕಾರ್ಯಕರ್ತನೂ ಹನುಮಂತನಾಗಿ ಬಿಡುತ್ತಾನೆ. ಸಂಘಟನೆಯೊಳಗಿನ ನಾಯಕನಷ್ಟೆ ಮಾನ್ಯನಾಗಿ ಬಿಡುತ್ತಾನೆ. ಹನುಮಂತ ಎಂದೂ ತನ್ನ ಸಾಮರ್ಥ್ಯ, ಶಕ್ತಿಗಳ ಅಹಂಕಾರವನ್ನು ಅಲಂಕಾರವನ್ನಾಗಿಸಿಕೊಳ್ಳಲಿಲ್ಲ, ತನ್ನ ಕಾರ್ಯದ ಬಗ್ಗೆ ಅಹಂಕಾರ ಪಡದೆ ಸಾಮಾನ್ಯನಾಗಿದ್ದಿದ್ದರಿಂದ ತನ್ನ ಹೃದಯದಲ್ಲಿ ಶ್ರೀರಾಮನನ್ನೇ ಪ್ರತಿಷ್ಟಾಪಿಸಿಕೊಂಡ. ಭಕ್ತರ ಹೃದಯದಲ್ಲಿ ಶ್ರೀರಾಮನಷ್ಟೇ ಸ್ಥಾನ ಪಡೆದುಕೊಂಡ. ಹನುಮಂತನಂತೆ ಅಹಂಕಾರವನ್ನು ಅಲಂಕಾರವನ್ನಾಗಿಸಿಕೊಳ್ಳದೆ ನಡೆದರೆ ಪ್ರತೀ ಕಾರ್ಯಕರ್ತನೂ ಹನುಮಂತನಷ್ಟೇ ಶ್ರೇಷ್ಠ, ಹನುಮಂತನಷ್ಟೇ ಪೂಜ್ಯ.

– ಸ್ವಯಂಭೂ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KKRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**